ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 11 ಬುಧವಾರ 2026

46

ಸಂಪುಟ: 46 | ಸಂಚಿಕೆ: 320 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

₹4

ಬಝ್‌ಬಾಲ್ಜ್ ಡ್ರಿಂಕ್ಸ್ ಬಗ್ಗೆ ಮಕ್ಕಳ ಆಯೋಗ ಸ್ವಯಂಪ್ರೇರಿತ ದೂರು ದಾಖಲು

ಪರಿಶೀಲಿಸಿ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚನೆ

ಮೈಸೂರು, ಮಾ.10(ಎಸ್‌ಪಿಎನ್)– ಇತ್ತೀಚಿನ ದಿನಗಳಲ್ಲಿ ಮಾರುಕಟ್ಟೆಗೆ ಬಂದಿರುವ ಬಝ್‌ಬಾಲ್ಜ್ (Buzz Ballz) ಎಂಬ ಡ್ರಿಂಕ್, ವಾದರಿಂಯಲ್ಲಿ ಮಾರು ಕಟ್ಟೆಯಲ್ಲಿ ಲಭ್ಯವಿದ್ದು, ಈ ಪಾನೀಯದಲ್ಲಿ ಅಧಿಕ ಮಟ್ಟದ ಸಕ್ಕರೆ ಅಂಶ ಹಾಗೂ ಶೇ.15ರಷ್ಟು ಆಲ್ಕೋಹಾಲ್ ಅಂಶವಿದೆ ಎಂಬ ಸಾರ್ವಜನಿಕ ದೂರಿನ ಮೇರೆಗೆ ಕರ್ನಾಟಕ ರಾಜ್ಯ ಮಕ್ಕಳ ಆಯೋಗ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದೆ.



ಈ ಪಾನೀಯವು ಟಿನ್‌ರೂಪದಲ್ಲಿ ಮಾರುಕಟ್ಟೆಯಲ್ಲಿ ಗ್ರಾಹಕರಿಗೆ ಲಭ್ಯವಿದ್ದು, ಈ ಪಾನೀಯಗಳು ಹೆಚ್ಚಾಗಿ ಶಾಲಾ–ಕಾಲೇಜು ಸುತ್ತಮುತ್ತಲಿನ ಪ್ರದೇಶದ ಅಂಗಡಿಗಳಲ್ಲಿ ಅಧಿಕ ಮಾರಾಟವಾಗುತ್ತಿದ್ದು, ಶಾಲಾ ಕಾಲೇಜು ವಿದ್ಯಾರ್ಥಿಗಳು ಈ ಪಾನೀಯದ ವ್ಯಸನಿಗಳಾಗಿದ್ದಾರೆ.

ಹಾಗಾಗಿ ಈ ಪಾನೀಯದಲ್ಲಿರುವ ಅಧಿಕ ಸಕ್ಕರೆ ಮಟ್ಟ ಹಾಗೂ ಶೇ.15ರಷ್ಟು ಆಲ್ಕೋಹಾಲ್ ಅಂಶದಿಂದ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದಲ್ಲದೆ, ಮಕ್ಕಳು ತಮಗೆ ಅರಿವಿಲ್ಲದಯೇ ಮದ್ಯ ವ್ಯಸನಕ್ಕೆ ಒಳಗಾಗುತ್ತಿದ್ದಾರೆ ಎಂಬ ಆತಂಕ ಸಾರ್ವಜನಿಕ ವಲಯ ಹಾಗೂ ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತವಾಗುತ್ತಿದೆ.

ಇದನ್ನು ಗಮನಿಸಿರುವ ಮಕ್ಕಳ ಆಯೋಗ, ಮಕ್ಕಳ ದೈಹಿಕ, ಮಾನಸಿಕ ಸ್ವಾಸ್ಥ್ಯದ ಮೇಲೆ ಗಂಭೀರ ಪರಿಣಾಮ ಬೀರುವಂತಹ ಪಾನೀಯಗಳನ್ನು ಮುಕ್ತವಾಗಿ ಮಾರಾಟ ಮಾಡಲು ಅವಕಾಶ ನೀಡಬಾರದೆಂಬ ಅಭಿಪ್ರಾಯ ಹೊಂದಿದೆ. ಅಲ್ಲದೆ, ಈ ಪಾನೀಯ ಜಾಹಿರಾತಿನಲ್ಲೇ ತಿಳಿಸಿರುವಂತೆ ಶೇ.15ಕ್ಕೂ ಅಧಿಕ ಸಕ್ಕರೆ ಅಂಶ ಇದೆಯೆಂದು ಉಲ್ಲೇಖವಿರುವುದರಿಂದ ಆಯೋಗ ಸ್ವಯಂ ದೂರು ದಾಖಲಿಸಿಕೊಂಡು, ಸಂಬಂಧಪಟ್ಟ ಇಲಾಖೆ ಆಯುಕ್ತರಿಂದ ವರದಿ ಕೇಳಿ ಪತ್ರ ಬರೆದಿದೆ.

ಆದ್ದರಿಂದ 'ಬುಝ್‌ಬಾಲ್ಜ್' ಪಾನೀಯವನ್ನು ಸೂಕ್ತ ಪ್ರಯೋಗಾಲಯದ ತನಿಖೆಗೆ ಒಳಪಡಿಸಿ, ಇದರಲ್ಲಿ ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಹಾನಿ ಉಂಟಾಗುವ ಆಲ್ಕೋಹಾಲಿನ ಪ್ರಮಾಣವಿದ್ದಲ್ಲಿ ಕೂಡಲೇ ಮಕ್ಕಳು ಉಪಯೋಗಿಸದಂತೆ ನಿರ್ಬಂಧಿಸಲು ಕ್ರಮ ಕೈಗೊಂಡು ಐದು ದಿನದೊಳಗಾಗಿ ತಪಾಸಣಾ ವರದಿಯನ್ನು ಆಯೋಗಕ್ಕೆ ನೀಡುವಂತೆ ಕರ್ನಾಟಕ ರಾಜ್ಯ ಔಷಧ ನಿಯಂತ್ರಣ ಇಲಾಖೆ ಆಯುಕ್ತರಿಗೆ, ಅಧ್ಯಕ್ಷ ಶಶಿಧರ್ ಎಸ್.ಕೋಸಂಬೆ ಮನವಿ ಮಾಡಿದ್ದಾರೆ.

ಬೇಸಿಗೆ ತರಬೇತಿ ಶಿಬಿರ

ಮೈಸೂರು, ಮಾ.10– ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಮೈಸೂರು ನಗರ ಯುವ ಕ್ರೀಡಾ ಪಟುಗಳನ್ನು ಪ್ರೋತ್ಸಾಹಿಸಲು 2026 ನೇ ಸಾಲಿನ ವಿವಿಧ ಕ್ರೀಡೆಗಳ 31ನೇ ಬೇಸಿಗೆ ತರಬೇತಿ ಶಿಬಿರವನ್ನು ನುರಿತ ತರಬೇತುದಾರರಿಂದ 07 ವರ್ಷದಿಂದ 18 ವರ್ಷದ ವರೆಗಿನ ಬಾಲಕ, ಬಾಲಕಿಯರಿಗೆ ಏ. 2 ರಿಂದ ಮೇ 2 ರವರೆಗೆ ಅಥ್ಲೆಟಿಕ್ಸ್, ಷಟಲ್ ಬ್ಯಾಡ್ಮಿಂಟನ್, ಕ್ರಿಕೆಟ್, ಫುಟ್ಬಾಲ್, ಜಿಮ್ನಾಸ್ಟಿಕ್ಸ್, ಹಾಕಿ, ಕಬಡ್ಡಿ, ವಾಲಿಬಾಲ್, ಕುಸ್ತಿ, ಯೋಗ, ಕಿಕ್ ಬಾಕ್ಸಿಂಗ್ ಮತ್ತು ಕರಾಟೆ ಕ್ರೀಡೆಗಳಿಗೆ ಬೇಸಿಗೆ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಮಾ.16ರಿಂದ ನೋಂದಣಿ ಮಾಡಿಕೊಳ್ಳಬೇಕಾಗಿ ಕೋರಲಾಗಿದೆ ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ 0821–2419288 ಸಂಪರ್ಕಿಸುವುದು.

ವಾಣಿಜ್ಯ ಪರೀಕ್ಷೆಯಲ್ಲಿ ಕೆ.ಎಂ.ಮಂಗಳ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮಾ. 10– ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯವರು ಜ.26ರಲ್ಲಿ ನಡೆಸಿದ ವಾಣಿಜ್ಯ ಪರೀಕ್ಷೆಯ ಆಂಗ್ಲ ಬೆರಳಚ್ಚು ಪ್ರೌಢ ದರ್ಜೆಯಲ್ಲಿ ಜಯಲಕ್ಷ್ಮಿಪುರಂನ ಶ್ರೀ ಮಂಜುನಾಥ ವಾಣಿಜ್ಯ ವಿದ್ಯಾಸಂಸ್ಥೆ ವಿದ್ಯಾರ್ಥಿನಿ ಕೆ.ಎಂ.ಮಂಗಳ ಶೇ.94 ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಮೈಸೂರಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ಗಂಧದಗುಡಿ ಫೌಂಡೇಶನ್‌ನಿಂದ ಕೇಕ್ ಕತ್ತರಿಸಿ, ಅರಿಸಿನ–ಕುಂಕುಮ, ಬಳೆ ವಿತರಿಸುವ ಮೂಲಕ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಇನ್ಸ್‌ಪೆಕ್ಟರ್ ಅಶೋಕ್, ಎಎಸ್‌ಐಗಳಾದ ಶಶಿಕಲಾ, ತಾರಾ ಸಿಬ್ಬಂದಿಗಳಾದ ಗಾಯತ್ರಿ, ನೇತ್ರಾವತಿ, ಶೋಭಾವತಿ, ಲತಾ, ರುಬೀನಾ, ಗಂಧದಗುಡಿ ಫೌಂಡೇಶನ್‌ನ ಆರ್ಯನ್, ವಿದ್ಯಾ, ಸಿಂಚನಗೌಡ ಮತ್ತಿತರರಿದ್ದರು.

ಇಂದಿನಿಂದ ಸಂಶೋಧನಾ ವಿಧಾನಗಳ ಕುರಿತು ಕಾರ್ಯಾಗಾರ

ಮೈಸೂರು,ಮಾ.10–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಡಾ.ಬಾಬು ಜಗಜೀವನರಾಮ್ ಸಂಶೋಧನಾ ಸಂಸ್ಥೆ ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದೊಂದಿಗೆ ಮಾ.11ರಿಂದ 13ರವರೆಗೆ ಬೆಳಗ್ಗೆ 10 ಗಂಟೆಗೆ ಕಾವೇರಿ ಸಭಾಂಗಣದಲ್ಲಿ ಸಂಶೋಧನಾ ವಿಧಾನಗಳ ಕುರಿತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕರ್ನಾಟಕ ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಅಧ್ಯಯನ ವಿಭಾಗ ಹಿರಿಯ ಪ್ರಾಧ್ಯಾಪಕ ಪ್ರೊ.ಡಿ.ಎಸ್.ಗುರು ಪ್ರಧಾನ ಭಾಷಣ ಮಾಡಲಿದ್ದಾರೆ.

ನಿಧನ

ಅಬ್ದುಲ್ ಜಮೀಲ್



ಮೈಸೂರು, ಮಾ.10– ಮೈಸೂರು ಮಹಾನಗರ ಪಾಲಿಕೆಯ ಮಾಜಿ ಕಾರ್ಪೊರೇಟರ್, ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ, ರಾಜೀವ್‌ನಗರ 2ನೇ ಹಂತದ ನಿವಾಸಿ ಅಬ್ದುಲ್ ಜಮೀಲ್(76) ಅವರು ಸೋಮವಾರ ಸಂಜೆ ನಿಧನರಾದರು.

ಇವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೈಸೂರು ಜಿಲ್ಲಾ ಕಾರ್ಯದರ್ಶಿಯಾಗಿ, ಬೇಡನ್ ಪೊವೆಲ್ ಪಬ್ಲಿಕ್ ಶಾಲೆಯ ಖಜಾಂಚಿಯಾಗಿ ಹಾಗೂ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಇವರು ಪುತ್ರ, ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮರಾಜನಗರ ಜಿಲ್ಲೆಯ ಕಿರಗಸೂರು ಗ್ರಾಮದಲ್ಲಿರುವ ಜಾಮಿಯಾ ಮಸೀದಿಯಲ್ಲಿ ಪ್ರಾರ್ಥನೆ ಬಳಿಕ ಮುಸ್ಲಿಂರ ಸ್ಮಶಾನದಲ್ಲಿ ಮಂಗಳವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಮಾರ್



ಮೈಸೂರಿನ ಹಿನಕಲ್ ನಿವಾಸಿ ದಿವಂಗತ ಚಿಕ್ಕಣ್ಣ ಅವರ ಪುತ್ರ ಕುಮಾರ್(52) ಅವರು ಮಂಗಳವಾರ ಮುಂಜಾನೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರು ಪತ್ನಿ, ಪುತ್ರ, ಪುತ್ರಿ, ಮೂವರು ಸಹೋದರರು, ಮೂವರು ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಹಿನಕಲ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟತಾಯಮ್ಮ



ತಿ.ನರಸಿಪುರದ ಸವಿತಾ ಸಮಾಜದ ತಾಲೂಕು ಪ್ರತಿನಿಧಿ ಹಾಗೂ ಬನ್ನೂರಿನ ಮಾಜಿ ಪುರಸಭಾ ಸದಸ್ಯ ಮುರಳೀಧರ ಅವರ ತಾಯಿ ಶ್ರೀಮತಿ ಪುಟ್ಟತಾಯಮ್ಮ ಅವರು ಭಾನುವಾರ ನಿಧನರಾದರು. ಸೋಮವಾರ ಮಧ್ಯಾಹ್ನ ಬನ್ನೂರಿನ ಕಾವೇರಿ ತೀರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬವರ್ಗ ತಿಳಿಸಿವೆ.

ಸಂತಾಪ: ಮಾಜಿ ಶಾಸಕ ಅಶ್ವಿನ್‌ಕುಮಾರ್, ಬನ್ನೂರು ಮಾಜಿ ಪುರಸಭಾ ಅಧ್ಯಕ್ಷರಾದ ಕೃಷ್ಣೇಗೌಡ, ಅಜೀಜುಲ್ಲಾ, ಮಾಜಿ ಉಪಾಧ್ಯಕ್ಷೆ ಸೌಮ್ಯರಾಣಿ ಮುರುಳೀಧರ, ಸವಿತಾ ಸಮಾಜದ ಮೈಸೂರು ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ನಗರಾಧ್ಯಕ್ಷ ಹರೀಶ್ ರೆಡ್ಡಿ, ತಿ.ನರಸೀಪುರದ ಅಧ್ಯಕ್ಷ ನಾಗೇಂದ್ರ, ಸವಿತಾ ಕಲಾವಿದರ ಸಂಘದ ಅಧ್ಯಕ್ಷ ಲೋಕೇಶ, ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ನರಸಿಂಹ, ಟೌನ್ ಅಧ್ಯಕ್ಷ ರೇವಣ್ಣ, ಹ್ಯಾಂಡ್‌ಪೋಸ್ಟ್ ಅಧ್ಯಕ್ಷ ಸುರೇಶ, ಹುಣಸೂರು ಮಾಜಿ ಅಧ್ಯಕ್ಷ ದೇವರಾಜ, ಪಿರಿಯಾಪಟ್ಟಣದ ಮಾಜಿ ಅಧ್ಯಕ್ಷ ಕೃಷ್ಣ, ಆನಂದೂರು ವೀರಭದ್ರಯ್ಯ, ತ್ಯಾಗರಾಜ, ರಾಜುರೆಡ್ಡಿ, ಬಾಲು ಮೃತರ ಇನ್ನಿತರರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡು, ಸಂತಾಪ ಸೂಚಿಸಿದರು.

ವರುಣಾ ಕೆರೆ ಪುನರುಜ್ಜೀವನ ಕಾರ್ಯ ಆರಂಭ





ಮಲೀನಗೊಂಡಿರುವ ವರುಣ ಕೆರೆ ನೀರನ್ನು ಹೊರ ಹಾಕಲು ಕೆರೆಯ ಒಂದು ಭಾಗದಲ್ಲಿ ಗೇಟ್ ತೆರೆದಿದೆ. ಬಲಚಿತ್ರದಲ್ಲಿ ಕೆರೆಯಿಂದ ನೀರು ಹೊರಬಂದು ಕಾಲುವೆ ಮೂಲಕ ಸಾಗುತ್ತಿರುವುದನ್ನು ಕಾಣಬಹುದು.

ಸಾಹಸ ಜಲ ಕ್ರೀಡೆಗಳ ತಾತ್ಕಾಲಿಕ ನಿಲುಗಡೆ

ಮೈಸೂರು, ಮಾ.10(ಬಿಸಿಟಿ, ಜಿಎ)– ಮೈಸೂರಿನ ವರುಣ ಕೆರೆಯ ಪುನರುಜ್ಜೀವನ ಕಾರ್ಯ ಆರಂಭಗೊಂಡಿದೆ. ಮಲೀನಗೊಂಡಿರುವ ನೀರನ್ನು ಹಂತ ಹಂತವಾಗಿ ಹೊರ ಹಾಕುವ ಕಾರ್ಯ ಸಾಗಿದ್ದು, ಎಲ್ಲಾ ಜಲ ಸಾಹಸ (ವಾಟರ್ ಅಡ್ವೆಂಚರ್) ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.



ವರುಣ ಕೆರೆಯ ಪುನರುಜ್ಜೀವನ ಕಾರ್ಯ ಆರಂಭಗೊಂಡಿರುವ ಹಿನ್ನೆಲೆಯಲ್ಲಿ ದೋಣಿಗಳು ಮತ್ತು ಇತರೆ ಜಲ ಸಾಹಸ ಉಪಕರಣಗಳನ್ನು ಕೆರೆಯ ದಡಕ್ಕೆ ಸ್ಥಳಾಂತರಿಸಲಾಗಿದೆ.

ವರುಣ ಕೆರೆಯನ್ನು ಸುಂದರಗೊಳಿಸುವ ಯೋಜನೆಗೆ ರಾಜ್ಯ ಸರ್ಕಾರ ರೂ. 9.75 ಕೋಟಿ ಆಡಳಿತಾತ್ಮಕ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಕೆರೆಯಲ್ಲಿ ನಡೆಯುತ್ತಿದ್ದ ಎಲ್ಲಾ ಜಲ ಸಾಹಸ (ವಾಟರ್ ಅಡ್ವೆಂಚರ್) ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ, ಜಿಲ್ಲಾಡಳಿತ ಪುನರುಜ್ಜೀವನ ಕಾರ್ಯ ಕೈಗೆತ್ತಿಕೊಂಡಿದೆ.

ಕಾವೇರಿ ನೀರಾವರಿ ನಿಗಮ ನಿಯಮಿತ ಸಂಸ್ಥೆ ಕೆರೆಯ ಸಮಗ್ರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಮಲೀನ ನೀರನ್ನು ಹಂತ ಹಂತವಾಗಿ ಹೊರಹಾಕಿ ಹೂಳು ತೆಗೆಯುವುದು, ಕೆರೆಗೆ ಬೇಲಿ ಅಳವಡಿಕೆ, ವಾಹನ ನಿಲುಗಡೆ ವ್ಯವಸ್ಥೆ ಹಾಗೂ ಕೆರೆಗೆ ಸೇರುವ ತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಶುದ್ಧೀಕರಿಸಲು ನ್ಯಾಚುರಲ್ ಬಯಾಲಾಜಿಕಲ್ ಸಿಸ್ಟಮ್ ಅಳವಡಿಸುವ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಕೆರೆಯಲ್ಲಿದ್ದ ದೋಣಿಗಳು ಮತ್ತು ಇತರೆ ಜಲ ಸಾಹಸ ಉಪಕರಣಗಳನ್ನು ಕೆರೆಯ ದಡಕ್ಕೆ ಸ್ಥಳಾಂತರಿಸಲಾಗಿದ್ದು, ಕೆರೆಯ ನೀರನ್ನು ಹೊರ ಹಾಕುವ ಕಾರ್ಯ ಆರಂಭವಾಗಿದೆ. ಈ ಪ್ರಕ್ರಿಯೆ ಪೂರ್ಣಗೊಳ್ಳಲು ಸುಮಾರು 15 ದಿನಗಳ ಕಾಲ ಬೇಕಾಗಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು ತಾಲೂಕಿನ ವರುಣಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕಹಳ್ಳಿ ಗ್ರಾಮದ ಬಳಿ 164 ಎಕರೆವುಳ್ಳ ವಿಶಾಲ ವರುಣ ಕೆರೆ ಅಭಿವೃದ್ಧಿ ನಂತರ ಸ್ವಚ್ಛ ಮತ್ತು ನಿರ್ಮಲ ತಾಣವಾಗಲಿದ್ದು, ಪ್ರವಾಸಿಗರನ್ನು ಆಕರ್ಷಿಸುವ ಸ್ಥಳವಾಗಲಿದೆ. ಅಭಿವೃದ್ಧಿ ಪೂರ್ಣಗೊಂಡ ಬಳಿಕ ಮನುಜನಾ ಉದ್ಯಾನವನ, ಜಿಪ್‌ಲೈನ್ ಹಾಗೂ ಬೋಟಿಂಗ್ ವ್ಯವಸ್ಥೆ ಮಾಡುವ ಯೋಜನೆ ಇದೆ.

ಈ ಯೋಜನೆಗೆ ಕಾವೇರಿ ನೀರಾವರಿ ನಿಗಮದ ಅಂದಾಜು ಪರಿಶೀಲನಾ ಸಮಿತಿ 2025ರ ಅಕ್ಟೋಬರ್ 30ರಂದು ಅನುಮೋದನೆ ನೀಡಿದ್ದು, ನಿರ್ದೇಶಕರ ಮಂಡಳಿ ನವೆಂಬರ್ 18ರಂದು ಒಪ್ಪಿಗೆ ನೀಡಿದೆ. ನಂತರ ಜಲ ಸಂಪನ್ಮೂಲ ಇಲಾಖೆಯು 2025ರ ಡಿಸೆಂಬರ್ 29ರಂದು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಪ್ರಸ್ತುತ ವರುಣ ಹೋಬಳಿ, ವಾಜಮಂಗಲ ಗ್ರಾಮ ಪಂಚಾಯಿತಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅನುಮೋದಿತ ಲೇಔಟ್‌ಗಳು, ಚಿಕ್ಕಹಳ್ಳಿ ಹಾಗೂ ಸುತ್ತಮುತ್ತಲಿನ ವಸತಿ ಪ್ರದೇಶಗಳಿಂದ ಹರಿದು ಬರುವ ಒಳಚರಂಡಿ ನೀರಿನಿಂದ ಕೆರೆ ಮಾಲಿನ್ಯಗೊಂಡಿದೆ. ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ವರುಣ ಕೆರೆಯಲ್ಲಿ ಬೋಟಿಂಗ್ ಸೇರಿದಂತೆ ವಿವಿಧ ಜಲ ಸಾಹಸ ಚಟುವಟಿಕೆಗಳನ್ನು ಆರಂಭಿಸಲು ಈಗಾಗಲೇ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಡೆಸಿದ ಪರೀಕ್ಷೆಯಲ್ಲಿ ವರುಣ ಕೆರೆಯ ನೀರಿನ ಗುಣಮಟ್ಟವನ್ನು 'ಡಿ' ಗ್ರೇಡ್‌ಗೆ ಸೇರಿಸಲಾಗಿದೆ. ಕೆರೆಯ ಸಂರಕ್ಷಣಾ ತಜ್ಞ ಆನಂದ್ ಮಲ್ಲಿಗವಾಡ ಅವರ ಸಲಹೆಯಂತೆ ನ್ಯಾಚುರಲ್ ಬಯಾಲಾಜಿಕಲ್ ಸಿಸ್ಟಮ್ ತಂತ್ರಜ್ಞಾನವನ್ನು ಅಳವಡಿಸಲು ನಿರ್ಧರಿಸಲಾಗಿದೆ ಎಂದು ಔಟ್‌ಬ್ಯಾಕ್ ಅಡ್ವೆಂಚರ್ಸ್‌ನ ಅಲೀಂ ಮಾಹಿತಿ ನೀಡಿದರು.

> ಮೈಸೂರು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಉಪ ಆಯುಕ್ತರಾದ ಜಿ.ಲಕ್ಷ್ಮೀಕಾಂತ ರೆಡ್ಡಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ವರುಣ ಕೆರೆಯನ್ನು ಪರಿಸರ ಸ್ನೇಹಿ ಹಾಗೂ ಪ್ರವಾಸಿಗರನ್ನು ಆಕರ್ಷಿಸುವ ತಾಣವಾಗಿ ಅಭಿವೃದ್ಧಿಪಡಿಸುವುದು ಯೋಜನೆ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಕಾರ್ಯ ನಡೆಯುವ ಅವಧಿಯಲ್ಲಿ ಸಾರ್ವಜನಿಕರು, ಪ್ರವಾಸಿಗರು ಸಹಕಾರ ನೀಡುವಂತೆ ಅವರು ಮನವಿ ಮಾಡಿದ್ದಾರೆ.

ಕರ್ನಾಟಕ ಕ್ರೈಸ್ತ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪನೆಗೆ ಸ್ವಾಗತ

ಮೈಸೂರು, ಮಾ.10(ಜಿಎ)–ರಾಜ್ಯದ ಕ್ರೈಸ್ತ ಸಮುದಾಯದ ಕಲ್ಯಾಣ ಮತ್ತು ಅಭಿವೃದ್ಧಿ ಉದ್ದೇಶದಿಂದ ರಾಜ್ಯ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಕರ್ನಾಟಕ ಕ್ರೈಸ್ತ ಸಮುದಾಯ ಅಭಿವೃದ್ಧಿ ನಿಗಮ ಸ್ಥಾಪಿಸಿರುವುದಕ್ಕೆ ಪ್ರೊಟೆಸ್ಟೆಂಟ್ ಕ್ರೈಸ್ತ ಮಹಾಸಭಾ ಸರ್ಕಾರಕ್ಕೆ ಕೃತಜ್ಞತೆ ಸಲ್ಲಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆರ್ಚ್ ಬಿಷಪ್ ರೆ.ಸುನಿಲ್ ವಿ. ಜೇಕಬ್ ಮಾತನಾಡಿ, ಹಿಂದಿನ ವರ್ಷ ನೀಡಲಾದ 85 ಕೋಟಿ ಅನುದಾನದಲ್ಲಿ ಕೇವಲ ಶೇ.10ರಷ್ಟು ಹೆಚ್ಚಳ ಮಾಡಿ ಅದನ್ನು 93.50 ಕೋಟಿಗೆ ಹೆಚ್ಚಿಸಲಾಗಿದೆ. ಕ್ರೈಸ್ತ ಸಮುದಾಯದ ಅಗತ್ಯ ಗಮನಿಸಿದರೆ ಈ ಮೊತ್ತ ಏನೇನು ಸಾಲುವುದಿಲ್ಲ. ಆದ್ದರಿಂದ ಇದುವರೆಗೆ ಉಳಿಕೆ ಆಗಿರುವ 165 ಕೋಟಿ ರೂ., ಗಳನ್ನು ಇದಕ್ಕಾಗಿ ಬಿಡುಗಡೆ ಮಾಡಿ ಎಸ್‌ಸಿ ಎಸ್‌ಪಿ, ಟಿಎಸ್‌ಪಿ ಮಾದರಿ ಕಾಯ್ದೆ ಇದಕ್ಕಾಗಿ ಅನುಷ್ಠಾನಗೊಳಿಸಬೇಕು. ಸಮಾಧಿ ಸ್ಥಳಗಳ ಸಮಸ್ಯೆ ಬಗೆಹರಿಸಬೇಕು, ನಿಗಮದಲ್ಲಿ ಪ್ರೊಟೆಸ್ಟೆಂಟ್ ಕ್ರೈಸ್ತರಿಗೂ ಪ್ರಾತಿನಿಧ್ಯ ನೀಡಬೇಕು, ಎಲ್ಲೆಡೆ ಕ್ರೈಸ್ತ ಸಮುದಾಯ ಭವನ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಪಾಸ್ಟರ್‌ಗಳಿಗೂ ಮಾಸಿಕ ಗೌರವ ಧನ ನೀಡಬೇಕು. ಅವರಿಗೆ ಗುರುತಿನ ಚೀಟಿ ನೀಡಬೇಕು, ಕ್ರೈಸ್ತ ಸಮುದಾಯದ ವಿದ್ಯಾರ್ಥಿಗಳು ಹಾಗೂ ಉದ್ಯೋಗಿಗಳಿಗೆ ವಸತಿ ನಿಲಯ ತೆರೆಯಬೇಕು, ಕ್ರೈಸ್ತ ಪರಂಪರೆ ಸಂಗ್ರಹಾಲಯ ಆರಂಭಿಸಬೇಕು ಎಂಬ ಮೊದಲಾದ ಬೇಡಿಕೆ ಈಡೇರಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಡಾ.ವಿನೋದ್ ಎಂ.ಚಾಕೋ, ವೆನಿಯಲ್ ಮೋಸೆಸ್ ಉಪಸ್ಥಿತರಿದ್ದರು.



ಸುಗುಣಕೃಷ್ಣನ್ ಮಕ್ಕಳ ಆಟದ ನಿಲಯ ಉದ್ಘಾಟನೆ

ಮೈಸೂರಿನ ಹರಿ ವಿದ್ಯಾಲಯ ಸಂಸ್ಥೆಯಲ್ಲಿ ಸುಗುಣಕೃಷ್ಣನ್ ಮಕ್ಕಳ ಆಟದ ನಿಲಯವನ್ನು ಕೈಗಾರಿಕೋದ್ಯಮಿ, ಕಲಾಪೋಷಕರಾದ ಜಗನ್ನಾಥ ಶೆಣೈ ಉದ್ಘಾಟಿಸಿದರು. ಖ್ಯಾತ ವಿಜ್ಞಾನಿ, ಮುಕ್ತಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ರಾಮಪ್ರಸಾದ್, ಸಂಸ್ಥೆಯ ನಿರ್ದೇಶಕ ಪ್ರೊ.ಸತ್ಯಂ, ಸಂಸ್ಥೆಯ ನಿರ್ದೇಶಕ ಶ್ರೀನಿವಾಸ ಹೊಸಮನೆ, ಕಾರ್ಯದರ್ಶಿ ಎಚ್.ಆರ್.ಭಗವಾನ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.3.2026 ಬುಧವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30 ರಿಂದ ಕಿಡ್ನಿ ಆರೋಗ್ಯ ತಪಾಸಣೆ ಮತ್ತು ವಸಂತ ವಮನ ದೇಹಶುದ್ಧಿ ಚಿಕಿತ್ಸಾ ಶಿಬಿರ, ಪಿಸಿಒಡಿ ತೊಂದರೆಗೆ ಚಿಕಿತ್ಸಾ ಶಿಬಿರ, ಪೈಲ್ಸ್, ಮೂಲವ್ಯಾದಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ಕಾಯಿಲೆಗಳಿಗೆ ಉಚಿತ ತಪಾಸಣೆ, ಸಲಹಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಪರಿಷತ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ಯುಗಾದಿ ಹಬ್ಬದ ಅಂಗವಾಗಿ ಮನೆ ಮನೆಗೆ ಒಂಟಿಕೊಪ್ಪಲ್ ಪಂಚಾಂಗ ವಿತರಣೆ, ಮುಖ್ಯ ಅತಿಥಿಗಳು : ಇತಿಹಾಸ ತಜ್ಞ ಶೆಲ್ವಪಿಳ್ಳೈ ಅಯ್ಯಂಗಾರ್, ಹಿರಿಯ ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಪರಿಷತ್ ಅಧ್ಯಕ್ಷ ಕಡಕೊಳ ಜಗದೀಶ್, ಅಗಸ್ತ್ಯ ಸೊಸೈಟಿ ನಿರ್ದೇಶಕ ವಿಕ್ರಮ್ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಗಣೇಶ ದೇವಸ್ಥಾನ, ಕೃಷ್ಣಮೂರ್ತಿಪುರಂ, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಪಿಸಿಓಡಿ ಮತ್ತು ಕುತ್ತಿಗೆ ನೋವು ಬಗ್ಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಸಂಶೋಧನಾ ವಿಧಾನಗಳು ಕುರಿತು ಕಾರ್ಯಾಗಾರ, ಉದ್ಘಾಟನೆ : ಮೈಸೂರು ನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಪ್ರಾಸ್ತಾವಿಕ ಭಾಷಣ : ಹಿರಿಯ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಗುರು, ಮುಖ್ಯ ಅತಿಥಿಗಳು : ಡಾ. ಬಾಬು ಜಗಜೀವನರಾಂ ಸಂಶೋಧನಾ ಸಂಸ್ಥೆ ನಿರ್ದೇಶಕ ರಾಜೇಶ್ ಜಿ. ಗೌಡ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು : ಪ್ರೊ. ಎಂ. ರಾಮನಾಥಂ ನಾಯ್ಡು, ಕುಲಸಚಿವ ಡಾ. ಸಿ.ಎಸ್. ಆನಂದಕುಮಾರ್, ಹಣಕಾಸು ಅಧಿಕಾರಿ ಪ್ರೊ. ಎಸ್. ನಿರಂಜನ ರಾಜ್, ಡಾ. ಎನ್.ಆರ್. ಚಂದ್ರೇಗೌಡ, ಸ್ಥಳ: ಕಾವೇರಿ ಸಭಾಂಗಣ, ಕರಾಮುವಿವಿ, ಬೆಳಗ್ಗೆ 10ಕ್ಕೆ.
- **ಮರಿಮಲ್ಲಪ್ಪ ಪ್ರೌಢಶಾಲೆ :** 10ನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ, ಶಾಲಾ ವಾರ್ಷಿಕ ಸಂಚಿಕೆ ಕಿಶೋರವಾಣಿ ಬಿಡುಗಡೆ ಸಮಾರಂಭ, ಉಪಸ್ಥಿತರು : ಸಹ ಶಿಕ್ಷಕಿ ಶ್ರೀಮತಿ ಎಸ್.ಎಂ. ರಾಜೇಶ್ವರಿ, ಶ್ರೀಮತಿ ಎಸ್.ಎ.ಯಶೋಧ, ಮುಖ್ಯೋಪಾಧ್ಯಾಯರಾದ ಶ್ರೀಮತಿ ಎಸ್.ಮಮತ, ಶಿಕ್ಷಕರಾದ ಹರೀಶ್, ಕೆ.ಪಿ. ಶ್ರೀನಿವಾಸ್, ಡಾ. ವಿನೋದಮ್ಮ, ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಸ್ಥಳ: ಶಾಲೆ ಆವರಣ, ಬೆಳಗ್ಗೆ 10ಕ್ಕೆ.
- **ಶ್ರೀ ವಾಸು ಅಭಿಮಾನಿಗಳ ಬಳಗ :** ಮಾಜಿ ಶಾಸಕ ದಿವಂಗತ ವಾಸು ಅವರ 2ನೇ ವರ್ಷದ ಪುಣ್ಯಸ್ಮರಣೆ, ಸ್ಥಳ: ಡಿ. ದೇವರಾಜ ಅರಸು ರಸ್ತೆ, ಅರಳಿ ಮರದ ಎದುರು, ಬೆಳಗ್ಗೆ 11ಕ್ಕೆ.
- **ಸುಯೋಗ್ ವೈದ್ಯಕೀಯ ಸಮೂಹ ಸಂಸ್ಥೆಗಳು :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಡಾ. ಉಷಾ ಹೆಗ್ಡೆ, ಅಧ್ಯಕ್ಷತೆ : ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ವಿಶೇಷ ಅತಿಥಿಗಳು : ಶ್ರೀಮತಿ ಸುಧಾ ಯೋಗಣ್ಣ, ಡಾ. ಆರ್. ರಾಜೇಂದ್ರಪ್ರಸಾದ್, ಡಾ. ಸೀಮಾ ಯೋಗಣ್ಣ, ಡಾ. ಸುಯೋಗ್, ಡಾ. ಯಶಿತಾರಾಜ್ ಸುಯೋಗ್, ಸ್ಥಳ: ಸುಯೋಗ್ ಸೆಮಿನಾರ್ ಹಾಲ್, ಬೆಳಗ್ಗೆ 11ಕ್ಕೆ.

ಜಗಜೀವನ ಗ್ರಾಮದಲ್ಲಿಂದು, ಟಿ. ನರಸೀಪುರ ತಾ.

- **ಶ್ರೀ ಕಾಳಮ್ಮದೇವಿ ದೇವಾಲಯ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಶ್ರೀ ಕಾಳಮ್ಮದೇವಿ ಹಬ್ಬದ ಪ್ರಯುಕ್ತ ಶ್ರೀ ಕಾಳಮ್ಮದೇವಿ ಕೃಪಾಪೋಷಿತ ನಾಟಕ ಮಂಡಳಿಯಿಂದ ದಕ್ಷ ಯಜ್ಞ ಅಥವಾ ಭೃಗು ಮುನಿಯ ಗರ್ವಭಂಗ ಪೌರಾಣಿಕ ನಾಟಕ ಪ್ರದರ್ಶನ, ಸ್ಥಳ: ಜಗಜೀವನ ಗ್ರಾಮ, ಸಂಜೆ 7.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ ಮತ್ತು ಎಂ. ಎ. ಶೋಭಾ, ವ್ಯಾಖ್ಯಾನ–ಕೆ. ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ, ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 7.45 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ– ಎಂ.ಎ. ಜ್ಯೋತಿ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಚೈತ್ರಿಕಾ .ಎಸ್, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ತನುಶ್ರೀ. ಆರ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯತ್ರಿ ವೆಂಕಟರಾಘವನ್–ಹಾಡುಗಾರಿಕೆ, 4.00 ಮಹಿಳಾರಂಗ– ಸಾಧನಾ ಶಿಖರ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಕಿಶೋರ್ ಎಂ. ಕಾಕಡೆ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು– ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ಕಟ್ಟಡ ನಿರ್ಮಾಣ ಸಾಮಾಗ್ರಿಗಳ ಗುಣಮಟ್ಟ ಪರೀಕ್ಷೆ ಭಾಗವಹಿಸುತ್ತಾರೆ ಮೈಸೂರಿನ ಶ್ರೀ ಜಯಚಾಮ ರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ವಿಶ್ರಾಂತ ಪ್ರಾಧ್ಯಾಪಕರುಗಳಾದ ಡಾ. ಚಂದ್ರಶೇಖರ ಮತ್ತು ಡಾ. ರವಿರಾಜ್, ಪ್ರಸ್ತುತಿ– ಎನ್.ಕೇಶವಮೂರ್ತಿ, 5.30 ಚಿತ್ರಗೀತೆಗಳು, 6.50 ಕೃಷಿರಂಗ ಮಂಡ್ಯದ ವಿ.ಸಿ.ಫಾರಂ, ಕೋಲ್ ಮನ್ ಸಭಾಂಗಣದಲ್ಲಿ ನಡೆದ ಮತ್ತ್ರತರಂಗ ಬಾನುಲಿ ಸರಣಿಯ ಸಮಾರೋಪ ಸಮಾರಂಭದ ಬಾನುಲಿ ವರದಿ, ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಸಮಾಜ ವಿಜ್ಞಾನ ಭಾಗವಹಿಸುವವರು–ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಶಿಕ್ಷಕರಾಗಿರುವ ನವೀನ್ ಕುಮಾರ್.ಜೆ, ಪ್ರಸ್ತುತಿ– ದಿಗ್ವಿಜಯ್.ಬಿ, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 11 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 320 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಸಿಎಂ ಸಿದ್ದರಾಮಯ್ಯ ತವರು ಜಿಲ್ಲೆಯಲ್ಲಿ ಏನೇ ಹಗರಣ ನಡೆದರೂ

ಟೇಕ್ ಇಟ್ ಈಜಿ...!

ಕುರುಬಾರಹಳ್ಳಿ ಸರ್ವೆ ನಂಬರ್ 4ರ 24.10 ಎಕರೆ ಭೂ ಹಗರಣ; ಅಕ್ರಮ ಬಯಲಾದ 24 ಗಂಟೆಯೊಳಗೆ ಸೇಲ್ ಅಗ್ರಿಮೆಂಟ್ ರದ್ದು ಮಾಡಿ ಕೈತೊಳೆದುಕೊಂಡ ಜಿಲ್ಲಾಡಳಿತ!

ಕೆರೆ ಕಬಳಿಸಿದವರು ತಾವಾಗೇ ಕಾಂಪೌಂಡ್ ತೆರವು ಮಾಡಿದರು; ಸೈಕಲ್ ಸ್ಟ್ಯಾಂಡ್ ಮಾಡಿಕೊಂಡಿದ್ದ ಕೋಟ್ಯಾಂತರ ಆಸ್ತಿ ತೆರವು ಮಾಡಲಾಯ್ತು; ಈಗ ಕಬಳಿಸಿದ್ದ 900 ಕೋಟಿಯ 24.10 ಎಕರೆ ಭೂಮಿ ಸೇಲ್ ಅಗ್ರಿಮೆಂಟ್ ರದ್ದಾಯ್ತು; ಆದರೆ, ಕಬಳಿಸಿದವರಿಗೆ ಯಾವ ಶಿಕ್ಷೆಯೂ ಇಲ್ಲ!!

ಪ್ರಕರಣದ ಇಂಚಿಂಚು ಬೆಳವಣಿಗೆ ಮಾಹಿತಿ ಬಹಿರಂಗಪಡಿಸಿದ ಶಾಸಕ ಟಿ.ಎಸ್.ಶ್ರೀವತ್ಸ

ಮೈಸೂರು, ಮಾ.10(ಬಿಎಲ್‌ಯು)– ಮೈಸೂರಿನ ಕುರುಬರಹಳ್ಳಿ ಸರ್ವೆ ನಂಬರ್ 4 ರ 24.10 ಎಕರೆಯ ಮಾಲೀಕತ್ವ ಹೊಂದಿರುವುದಾಗಿ ಬೆಂಗಳೂರಿನ ಡೆವಲಪರ್‌ಗೆ ಮಾರಾಟ ಒಪ್ಪಂದ ಮಾಡಿಕೊಂಡಿದ್ದ ವ್ಯಕ್ತಿಗಳು ತರಾತುರಿಯಲ್ಲಿ ಸೇಲ್ ಅಗ್ರಿಮೆಂಟ್ ಅನ್ನು ರದ್ದುಗೊಳಿಸಿರುವುದು 'ಅಕ್ರಮ'ಕ್ಕೆ ಪುಷ್ಠಿ ನೀಡುತ್ತಿದೆ.

ಈ ಭೂ ಹಗರಣ ಬಯಲಿಗೆಳೆದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಇಂದು ತಮ್ಮ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ದಾಖಲಾತಿ ಸಮೇತ ಈ ಸಂಬಂಧ ಸಮಗ್ರ ಮಾಹಿತಿ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲಿ ಅಧಿಕಾರಿಗಳು ಯಾವುದೇ ಭಯವಿಲ್ಲದೆ ಸರ್ಕಾರದ ಆಸ್ತಿಯನ್ನು ಭೂಗಳ್ಳರ ಕೈಗಿಡುತ್ತಿದ್ದಾರೆ. ಇಂತಹ ಭೂ ಕಬಳಿಕೆ ವ್ಯಾಪಕವಾಗಿದ್ದರೂ ಆಡಳಿತ ವ್ಯವಸ್ಥೆ ಮಾತ್ರ ಕೈಕಟ್ಟಿ ಕುಳಿತಿದೆ. ಗಂಭೀರ ಹಗರಣಗಳನ್ನು ಬಯಲಿಗೆಳೆದರೂ ತಪ್ಪಿತಸ್ಥರ ವಿರುದ್ಧ ಯಾವುದೇ ಕ್ರಮವಾಗುತ್ತಿಲ್ಲ. ತವರು ಜಿಲ್ಲೆಯಲ್ಲಿ ಇಂತಹ ಅಪಾಯಕಾರಿ ಸ್ಥಿತಿಯಿದ್ದರೂ ಮುಖ್ಯಮಂತ್ರಿಗಳು ಯಾವುದನ್ನೂ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಸರ್ಕಾರಿ ಆಸ್ತಿ ರಕ್ಷಿಸಬೇಕಾದವರೇ ಶಾಮೀಲಾಗುವುದರಿಂದ ಭೂಗಳ್ಳರು ನಿರಾಳರಾಗಿದ್ದಾರೆ. ಒಂದು ವೇಳೆ ಹಗರಣ ಬಯಲಾದರೂ ಆಸ್ತಿ ವಾಪಸ್ ನೀಡಿದರೆ ಸಾಕು, ಮತ್ಯಾವುದೇ ಕಾನೂನು ಕ್ರಮ ಜರುಗಿಸುವುದಿಲ್ಲ ಎಂಬ ಧೈರ್ಯದಿಂದಿದ್ದಾರೆ ಎಂದು ಶ್ರೀವತ್ಸ ಬೇಸರ ವ್ಯಕ್ತಪಡಿಸಿದರು.

ವ್ಯವಸ್ಥಿತ ಕೃತ್ಯ: ಈ ಸರ್ಕಾರಿ ಆಸ್ತಿ ಕಬಳಿಸಲು 4.75 ಕೋಟಿಗೆ ಸೇಲ್ ಅಗ್ರಿಮೆಂಟ್ ಮಾಡಿಕೊಂಡಿದ್ದಾರೆ. ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ 2 ಲಕ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ವ್ಯವಹಾರವೂ ಚೆಕ್, ಡಿಡಿ ಹಾಗೂ ಆನ್‌ಲೈನ್ ಮೂಲಕವೇ ನಡೆಸಬೇಕೆಂಬ ಕಟ್ಟುನಿಟ್ಟಿನ ನಿಯಮವಿದೆ. ■ 6ನೇ ಪುಟಕ್ಕೆ



ಮೈಸೂರಿನ ತಮ್ಮ ಕಚೇರಿಯಲ್ಲಿ ಮಂಗಳವಾರ ಶಾಸಕ ಟಿ.ಎಸ್. ಶ್ರೀವತ್ಸ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು. ಈ ವೇಳೆ ಮಾಜಿ ಶಾಸಕ, ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ಪಕ್ಷದ ಮುಖಂಡ ಮೋಹನ್ ಇತರರಿದ್ದಾರೆ.

ಚಾಮುಂಡಿಬೆಟ್ಟದ ತಪ್ಪಲಿನ ಸಾವಿರ ಎಕರೆ ಭೂಮಿ ಬಗ್ಗೆ ತನಿಖೆ ನಡೆಸಿ

ಚಾಮುಂಡಿಬೆಟ್ಟ ತಪ್ಪಲಿನಲ್ಲಿ ಎಷ್ಟು ಸರ್ಕಾರದ ಆಸ್ತಿ ಇದೆ, ಯಾರ ಅರಿವಿಗೂ ಬಾರದೆ ಯಾರಾದರೂ ಕಬಳಿಸಿದ್ದಾರೆಯೇ ಎಂಬ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಬೆಟ್ಟದ ತಪ್ಪಲಿನ 482 ಎಕರೆಗೆ ಪ್ರತ್ಯೇಕವಾಗಿ ಅವರವರ ಹೆಸರಿಗೆ ಆರ್‌ಟಿಸಿ ಮಾಡಿಕೊಡಲು ಸುಪ್ರಿಂಕೋರ್ಟ್ ಆದೇಶಿಸಿದೆ. ಆದರೆ ಉಳಿದ ಸಾವಿರ ಎಕರೆಯ ಸ್ಥಿತಿ ಏನಾಗಿದೆ ಎಂಬುದರ ಬಗ್ಗೆ ಸ್ಪಷ್ಟತೆಯೇ ಇಲ್ಲ. ಹೀಗೆ ಇನ್ನು ಎಷ್ಟು ಆಸ್ತಿ ಭೂಗಳ್ಳರ ಪಾಲಾಗಿದೆ ಎಂಬ ಮಾಹಿತಿ ಇಲ್ಲ. ಆದ್ದರಿಂದ ಈ ಸಾವಿರ ಎಕರೆಯ ಆಸ್ತಿ ಕುರಿತಂತೆ ಸಮಗ್ರ ತನಿಖೆ ನಡೆಸಿ, ಯಾರಾದರೂ ಸರ್ಕಾರದ ಆಸ್ತಿ ಕಬಳಿಸಿದ್ದರೆ ಮುಲಾಜಿಲ್ಲದೆ ವಾಪಾಸು ಪಡೆಯಬೇಕು. – ಶಾಸಕ ಟಿ.ಎಸ್.ಶ್ರೀವತ್ಸ

ಇದು 200 ಕೋಟಿಯಲ್ಲ; ಬರೋಬ್ಬರಿ 900 ಕೋಟಿ ರೂ. ಆಸ್ತಿ

ಮಹಾರಾಣ ಪ್ರತಾಪ್ ಸಿಂಗ್ ರಸ್ತೆಯ 24.10 ಎಕರೆ ಆಸ್ತಿಯ ವಾಸ್ತವ ಬೆಲೆ ನನಗೆ ಅರಿವಿರಲಿಲ್ಲ. ಹಾಗಾಗಿ ಅದರ ಬೆಲೆ 200 ಕೋಟಿ ಎಂದು ನಾನು ಈ ಮೊದಲು ಅಂದಾಜಿಸಿದ್ದೆ. ಆದರೆ ಈ ಬಗ್ಗೆ ಪಡೆದಿರುವ ಮಾಹಿತಿ ಪ್ರಕಾರ ಆ ಸ್ಥಳದಲ್ಲಿ ಒಂದು ಚದರಡಿಗೆ ಕನಿಷ್ಟ 10 ಸಾವಿರ ರೂಪಾಯಿ ಇದೆ. ಅದರಂತೆ 24.10 ಎಕರೆಗೆ ಕನಿಷ್ಟ ಮಾರುಕಟ್ಟೆ ಬೆಲೆಯಲ್ಲಿ 900 ಕೋಟಿಯಾಗಲಿದೆ. ಇಷ್ಟೊಂದು ಬೆಲೆಬಾಳುವ ಸರ್ಕಾರದ ಆಸ್ತಿಯನ್ನು ಕಬಳಿಸಲು ಭೂ ಮಾಫಿಯಾ ವ್ಯವಸ್ಥಿತ ಷಡ್ಯಂತ್ರ ರೂಪಿಸಿತ್ತು ಎಂದು ತಿಳಿಸಿದರು. ಕೆಲ ವರ್ಷಗಳ ಹಿಂದೆ ಬಿಹಾರ ಹಾಗೂ ಉತ್ತರ ಪ್ರದೇಶದಲ್ಲಿ ಸರ್ಕಾರದ ಆಸ್ತಿಯನ್ನು ಹೀಗೆ ಕಬಳಿಸಲಾಗುತ್ತಿತ್ತು ಎಂಬುದನ್ನು ಕೇಳಿದ್ದೇವೆ. ಭೂಗತ ಪಾತಕಿಗಳ ಮೂಲಕ ಇಂತಹ ಷಡ್ಯಂತರ ನಡೆಯುತ್ತಿದ್ದವು. ಆದರೆ ಈಗ ಅದೇ ಮಾದರಿಯ ಆತಂಕಕಾರಿ ಬೆಳವಣಿಗೆ ಕರ್ನಾಟಕದಲ್ಲಿ, ಅದರಲ್ಲೂ ಮುಖ್ಯಮಂತ್ರಿ ತವರು ಜಿಲ್ಲೆ ಮೈಸೂರಿನಲ್ಲೇ ನಡೆಯುತ್ತಿರುವುದು ದುರ್ದೈವದ ಸಂಗತಿ ಎಂದರು.

ಸರ್ಕಾರದ ಸಂಧಾನ ಸಭೆ ಯಶಸ್ವಿ; 14ರ ಪೈಕಿ 13 ಬೇಡಿಕೆ ಈಡೇರಿಸುವ ಭರವಸೆ

ವೈದ್ಯರ ಮುಷ್ಕರ ತಾತ್ಕಾಲಿಕ ಹಿಂದಕ್ಕೆ; ರಾಜ್ಯಾದ್ಯಂತ ಎಂದಿನಂತೆ ಓಪಿಡಿ ಸೇವೆ



ಬೆಂಗಳೂರು, ಮಾ.10– ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ರಾಜ್ಯಾದ್ಯಂತ ಆರೋಗ್ಯ ಇಲಾಖೆಯ ಅಧಿಕಾರಿ–ನೌಕರರು ಓಪಿಡಿ ಸೇವೆ ಸ್ಥಗಿತಗೊಳಿಸಿ ನಡೆಸಲು ಉದ್ದೇಶಿಸಿದ್ದ ಅನಿರ್ದಿಷ್ಟಾವದಿ ಮುಷ್ಕರವನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ.

ವಿಧಾನಸೌಧದ ಕೊಠಡಿ ಸಂಖ್ಯೆ 330ರಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉಪಸ್ಥಿತಿಯಲ್ಲಿ ಮಂಗಳವಾರ ಸಂಜೆ ಸಭೆ ನಡೆಸಿದ್ದು, 14 ಬೇಡಿಕೆಗಳ ಪೈಕಿ 13 ಬೇಡಿಕೆ ಈಡೇರಿಸುವ ಭರವಸೆಯನ್ನು ಸರ್ಕಾರ ನೀಡಿದ ಹಿನ್ನೆಲೆಯಲ್ಲಿ ಮುಷ್ಕರವನ್ನು ತಾತ್ಕಾಲಿಕವಾಗಿ ಕೈಬಿಡಲಾಗಿದೆ.

ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ ಹಾಗೂ ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘ ಹಾಗೂ ಇಲಾಖೆಯ ಎಲ್ಲಾ ವೃಂದ ಸಂಘಗಳ ಸಂಯುಕ್ತಾಶ್ರಯದಲ್ಲಿ ರಾಜ್ಯಾದ್ಯಂತ ಮಾ.11ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲು ನಿರ್ಧರಿಸಲಾಗಿತ್ತು ಆ ಮೂಲಕ ಕಪ್ಪುಪಟ್ಟಿ ಧರಿಸಿ ಹೊರರೋಗಿ ಸೇವೆ ನೀಡದೇ ಕೇವಲ ತುರ್ತು ಸೇವೆ ಮಾತ್ರ ಒದಗಿಸಲು ನಿರ್ಧಾರ ಕೈಗೊಳ್ಳಲಾಗಿತ್ತು.

ಇದರಿಂದ ರಾಜ್ಯದಲ್ಲಿ ಆರೋಗ್ಯ ಸೇವೆಯಲ್ಲಿ ಉಂಟಾಗುವ ವ್ಯತ್ಯಯ ಮನಗಂಡು ಎಚ್ಚೆತ್ತ ಸರ್ಕಾರವು ಸಂಘದ ಜೊತೆ ಸಭೆ ನಡೆಸಿ ಮುಷ್ಕರ ತಡೆಹಿಡಿಯುವಲ್ಲಿ ಯಶಸ್ವಿಯಾಗಿದೆ.

ವಿಧಾನಸೌಧದಲ್ಲಿ ನಡೆದ ಸಂಧಾನ ಸಭೆಯಲ್ಲಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಅಧ್ಯಕ್ಷ ಡಾ. ರವೀಂದ್ರನಾಥ್ ಎಂ.ಮೇಟಿ, ರಾಜ್ಯ ಸರ್ಕಾರ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗ ವಹಿಸಿದ್ದರು.

ವಾರದಲ್ಲಿ ಸಭೆ ನಡೆಸಿ ಕ್ರಮ: ಸಂಧಾನ ಸಭೆ ಯಶಸ್ವಿಯಾಗಿದೆ. ವೈದ್ಯರ ಬಹುತೇಕ ಬೇಡಿಕೆಗಳನ್ನು ಈಡೇರಿಸಲಿದ್ದೇವೆ. ಕರ್ತವ್ಯದ ಬಳಿಕ ಖಾಸಗಿ ಸೇವೆಗೆ ಅವಕಾಶ ಕಲ್ಪಿಸುವ ■ 6ನೇ ಪುಟಕ್ಕೆ

ಮುಷ್ಕರ ತಾತ್ಕಾಲಿಕ ಹಿಂದಕ್ಕೆ

ನಮ್ಮ 14 ಬೇಡಿಕೆಗಳ ಪೈಕಿ 13 ಬೇಡಿಕೆಗಳನ್ನು ಈಡೇರಿಸುವುದಾಗಿ ಭರವಸೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಮುಷ್ಕರ ಕೈಬಿಟ್ಟಿದ್ದೇವೆ. ಬೇಡಿಕೆ ಈಡೇರಿಕೆಗೆ ಗಡುವು ನೀಡಿದ್ದು, ಒಂದು ವೇಳೆ ಅಷ್ಟರಲ್ಲಿ ಈಡೇರದಿದ್ದರೆ ಮತ್ತೆ ಹೋರಾಟ ಅನಿವಾರ್ಯವಾಗಲಿದೆ.
-ಡಾ.ರವೀಂದ್ರನಾಥ್ ಎಂ.ಮೇಟಿ, ಅಧ್ಯಕ್ಷರು, ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ.

ತಾತ್ಕಾಲಿಕವಾಗಿ ಮುಷ್ಕರ ಕೈಬಿಡಬೇಕೆಂದು ನಮ್ಮ ಸಂಘದ ರಾಜ್ಯ ಘಟಕ ತಿಳಿಸಿದ್ದು, ಅದರಂತೆ ಇಡೀ ರಾಜ್ಯಾದ್ಯಂತ ಮುಷ್ಕರ ಕೈಬಿಡಲಾಗಿದೆ. ಅಂತೆಯೇ ಮೈಸೂರಿನಲ್ಲೂ ಎಂದಿನಂತೆ ವೈದ್ಯಕೀಯ ಸೇವೆ ಮುಂದುವರೆಯಲಿದೆ.
-ಡಾ.ಮಹಮ್ಮದ್ ಸಿರಾಜ್ ಅಹಮದ್, ಅಧ್ಯಕ್ಷರು, ಮೈಸೂರು ಘಟಕ, ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ.

ಅಧಿಕಾರ ಹಂಚಿಕೆ ಗೊಂದಲ: ಡಿಸಿಎಂ ಡಿಕೆಶಿಗೆ ವರಿಷ್ಠರ ಬುಲಾವ್

ಬೆಂಗಳೂರು, ಮಾ.10(ಕೆಎಂಶಿ)– ಅಧಿಕಾರ ಹಂಚಿಕೆ ಗೊಂದಲ ಬಗೆಹರಿಸುವಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ದೆಹಲಿಗೆ ಬರುವಂತೆ ಎಐಸಿಸಿ ಸಂದೇಶ ನೀಡಿದೆ.



ಈ ತಿಂಗಳ 12ರ ಗುರುವಾರದಂದು ದೆಹಲಿಗೆ ಬರುವಂತೆ ಪಕ್ಷದ ರಾಜ್ಯ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಆಹ್ವಾನ ನೀಡಿದ್ದಾರೆ.

ಕಳೆದ ಎರಡು ದಿನಗಳಿಂದ ದೆಹಲಿಯಲ್ಲೇ ಬಿಡಾರ ಹೂಡಿದ್ದ ಶಿವಕುಮಾರ್ ಇಂದು ಬೆಳಗ್ಗೆಯಷ್ಟೇ ನಗರಕ್ಕೆ ಆಗಮಿಸಿದ್ದರು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಜೊತೆಗೂಡಿ ಕಲಬುರಗಿಯಿಂದ ದೆಹಲಿಗೆ ತೆರಳಿದ್ದ ಶಿವಕುಮಾರ್, ಸೋಮವಾರ ಬೆಳಗ್ಗೆ ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆಸಿ. ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ಮಾಡಿದ್ದರು.

ವೇಣುಗೋಪಾಲ್ ಭೇಟಿ ನಂತರ ಎಐಸಿಸಿ ಕಚೇರಿಯಲ್ಲಿ ಪಕ್ಷದ ಪ್ರಮುಖ ಮುಖಂಡರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಬೆನ್ನಲ್ಲೇ ಉಪ ಮುಖ್ಯಮಂತ್ರಿ ಅವರ ಸಚಿವಾಲಯ, ಶಿವಕುಮಾರ್ ಅವರ ಸುದೀರ್ಘವಾದ ನಾಲ್ಕು ಪುಟಗಳ ವ್ಯಕ್ತಿ ಪರಿಚಯ ವಿವರವನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದೆ.

ಪಕ್ಷ ಮತ್ತು ಸರ್ಕಾರದಲ್ಲಿ ಇದುವರೆಗೆ ಶಿವಕುಮಾರ್ ಕಾರ್ಯನಿರ್ವಹಿಸಿದ ಹುದ್ದೆಗಳು ಮತ್ತು ರಾಜಕೀಯ ಪ್ರವೇಶ ಇತ್ಯಾದಿ ವಿವರಗಳನ್ನು ಚಿತ್ರಪಟಗಳ ಸಹಿತ ಬಿಡುಗಡೆ ಮಾಡಿದೆ.

ಬಜೆಟ್ ಅಧಿವೇಶನ ಮುಗಿಯುತ್ತಿದ್ದಂತೆ ನಾಯಕತ್ವ ಗೊಂದಲ ಪರಿಹರಿಸುವುದಾಗಿ ವರಿಷ್ಠರು ನೀಡಿದ ಭರವಸೆ ಹಿನ್ನೆಲೆಯಲ್ಲೇ ವ್ಯಕ್ತಿ ಪರಿಚಯ ಬಿಡುಗಡೆ ಮಾಡಲಾಗಿದೆ ಎನ್ನಲಾಗುತ್ತಿದೆ. ಶಿವಕುಮಾರ್ ಬೆಂಬಲಿಗ ಶಾಸಕರು ಮಾರ್ಚ್ ಕೊನೆಯಲ್ಲೇ ■ 6ನೇ ಪುಟಕ್ಕೆ

ವಾಣಿಜ್ಯ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯ

ಮೈಸೂರು ಹೋಟೆಲ್‌ಗಳಲ್ಲಿ ಗ್ಯಾಸ್ ಟ್ರಬಲ್



ಮೈಸೂರು, ಮಾ.10(ಪಿಎಂ)– ಮೈಸೂರಿನಲ್ಲೂ ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು, ಹೋಟೆಲ್ ಉದ್ಯಮಕ್ಕೆ ಸಂಕಷ್ಟ ಎದುರಾಗಿದೆ.

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಸಮರ ಸಾರಿದ ಪರಿಣಾಮ ಮಧ್ಯಪ್ರಾಚ್ಯದಲ್ಲಿ ನಿರ್ಮಾಣವಾಗಿರುವ ಬಿಕ್ಕಟ್ಟು ಭಾರತದಲ್ಲಿ ಇಂತಹ ಸನ್ನಿವೇಶ ಸೃಷ್ಟಿಸಿದ್ದು, ಇದು ಮೈಸೂರು ಹೋಟೆಲ್ ಉದ್ಯಮಕ್ಕೂ ತೀವ್ರ ಸಮಸ್ಯೆ ತಂದೊಡ್ಡಿದೆ. ವಾಣಿಜ್ಯ ಬಳಕೆಯ ಸಿಲಿಂಡರ್ ಕೊರತೆ ಕಾರಣ ನಗರದಲ್ಲೂ ಹೋಟೆಲ್ ಹಾಗೂ ರೆಸ್ಟೋರೆಂಟ್‌ಗಳು ತೊಂದರೆಗೆ ಸಿಲುಕಿವೆ. ಒಂದೆಡೆ ಬೆಲೆ ಏರಿಕೆ ಬಿಸಿಯಾದರೆ ಮತ್ತೊಂದೆಡೆ ಸಿಲಿಂಡರ್‌ಗಳ ಪೂರೈಕೆಯಲ್ಲಿನ ವ್ಯತ್ಯಯವು ಹೋಟೆಲ್ ಮಾಲೀಕರನ್ನು ಚಿಂತೆಗೀಡು ಮಾಡಿದೆ.

ಪರಿಸ್ಥಿತಿ ಹೀಗೆಯೇ ಮುಂದುವರೆದರೆ ಹೋಟೆಲ್ ಉದ್ಯಮದ ಮಾಲೀಕರು ಮಾತ್ರವಲ್ಲದೆ, ಕಾರ್ಮಿಕರ ಬದುಕು ಕೂಡ ಕಷ್ಟಕ್ಕೆ ಸಿಲುಕಲಿದೆ. ಈ ನಡುವೆ ಪರ್ಯಾಯ ವ್ಯವಸ್ಥೆಗಳತ್ತಲೂ ಚಿತ್ತ ಹರಿದಿದ್ದು, ದಶಕದ ಹಿಂದೆ ಬಳಕೆಯಲ್ಲಿದ್ದ ಸೌದೆ, ಹೊಟ್ಟು, ಇದ್ದಿಲು ಒಲೆ ವ್ಯವಸ್ಥೆ ಅಳವಡಿಸಿಕೊಳ್ಳುವ ಬಗ್ಗೆಯೂ ಹೋಟೆಲ್ ಮಾಲೀಕರಲ್ಲಿ ಚಿಂತನೆ ಶುರುವಾಗಿದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ವಾಣಿಜ್ಯ ಬಳಕೆಯ ಅಡುಗೆ ಅನಿಲ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವ ಪರಿಣಾಮ ಹೋಟೆಲ್ ಉದ್ಯಮಕ್ಕೆ ಸಂಕಷ್ಟ ಎದುರಾಗಿದೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಮೈಸೂರಿನಲ್ಲೂ ಹೋಟೆಲ್ ಉದ್ಯಮವನ್ನು ಸಂಪೂರ್ಣ ಬಂದ್ ಮಾಡುವ ಸನ್ನಿವೇಶ ಎದುರಾಗಬಹುದು. ಇಲ್ಲವೇ ಹೋಟೆಲ್‌ಗಳಲ್ಲಿ ಬೆಲೆ ಏರಿಕೆ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾಗಬಹುದು ಎಂದು ತಿಳಿಸಿದರು.

ಸಾಂಪ್ರದಾಯಿಕ ಮಾರ್ಗ: ಖಾಸಗಿ ಕಂಪನಿಗಳ ಮೂಲಕ 17 ಕೆಜಿ ಸಿಲಿಂಡರ್ 1,650 ರೂ. ಗೆ ದೊರೆಯುತ್ತಿತ್ತು. ಆದರೆ ಈ ಪ್ರಮಾಣದ ಸಿಲಿಂಡರ್ ಅನ್ನು ಈಗ 2,500 ರೂ.ಗೆ ಕಾಳಸಂತೆಯಲ್ಲಿ ಖರೀದಿಸಿರುವ ಹೋಟೆಲ್ ಮಾಲೀಕರು ಸಹ ಇದ್ದಾರೆ. ರಸ್ತೆಬದಿ ಆಹಾರ ವಹಿವಾಟು ■ 6ನೇ ಪುಟಕ್ಕೆ

ದರ ಏರಿಕೆ ಮಾಡಿದ್ದಲ್ಲದೆ, ಈಗ ವಾಣಿಜ್ಯ ಬಳಕೆಯ ಸಿಲಿಂಡರ್ ಪೂರೈಕೆ ನಿಲ್ಲಿಸಿರುವುದಾಗಿ ಹೇಳಲಾಗುತ್ತಿದೆ. ಇದೇ ರೀತಿಯ ಸನ್ನಿವೇಶ ಮುಂದುವರೆದರೆ ಹೋಟೆಲ್ ಮುಚ್ಚುವ ಅನಿವಾರ್ಯತೆ ಎದುರಾಗಲಿದೆ.
-ಕೆ.ಸಿ.ದಿನೇಶ್ ಭಟ್, ಹೋಟೆಲ್ ಉದ್ಯಮಿ

ಅಮೆರಿಕ–ಇಸ್ರೇಲ್ ದ್ವಂದ್ವ ನಿಲುವು; ಇರಾನ್ ಬಿಗಿಪಟ್ಟು; ವಿಶ್ವದಲ್ಲಿ ತೈಲ ಬಿಕ್ಕಟ್ಟು



ನವದೆಹಲಿ: ಜಂಟಿಯಾಗಿ ಇರಾನ್ ಮೇಲೆ ಭೀಕರ ವೈಮಾನಿಕ ದಾಳಿ ನಡೆಸಿದ ಅಮೆರಿಕ ಹಾಗೂ ಇಸ್ರೇಲ್, ಯುದ್ಧದ ಸ್ಥಿತಿಗತಿ ಬಗ್ಗೆ ಭಿನ್ನರಾಗ ಹಾಡಿವೆ. ಅಮೆರಿಕ ಅಧ್ಯಕ್ಷ ಟ್ರಂಪ್ ಶೀಘ್ರದಲ್ಲೇ ಸಂಘರ್ಷ ಕೊನೆಯಾಗಬಹುದು ಎಂದರೆ, ಯುದ್ಧ ಇನ್ನೂ ಮುಗಿದಿಲ್ಲ ಎಂದು ಇಸ್ರೇಲ್ ಅಧ್ಯಕ್ಷ ಬೆಂಜಮಿನ್ ನೆತನ್ಯಾಹು ಹೇಳಿಕೆ ನೀಡಿದ್ದಾರೆ. ಮತ್ತೊಂದೆಡೆ ಅಮೆರಿಕ–ಇಸ್ರೇಲ್ ತಮ್ಮ ಕೃತ್ಯಗಳನ್ನು ಒಪ್ಪಿಕೊಂಡರೆ ಮಾತ್ರ ಕದನವಿರಾಮದ ಚಿಂತನೆ ಎಂದು ಇರಾನ್ ಅಬ್ಬರಿಸಿದೆ.

ಮಧ್ಯಪ್ರಾಚ್ಯ ಸಂಘರ್ಷದಿಂದ ಉಂಟಾಗಿರುವ ತೈಲ ಬಿಕ್ಕಟ್ಟಿನಿಂದಾಗಿ ಜಗತ್ತಿನೆಲ್ಲೆಡೆ ಸಮಸ್ಯೆ ಸೃಷ್ಟಿಯಾಗಿದೆ. ಯುದ್ಧ 11ನೇ ದಿನಕ್ಕೆ ಕಾಲಿಟ್ಟಿದ್ದು, ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಇಂಧನ, ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ಹಲವು ಉದ್ಯಮಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿದೆ. ಈ ನಡುವೆ ಯುದ್ಧ ಶೀಘ್ರ ಮುಗಿಯಲಿದೆ ಎಂಬ ಟ್ರಂಪ್ ಸುಳಿವು ಜಗತ್ತಿನ ಗಮನ ಸೆಳೆದಿತ್ತಾದರೂ ನಂತರದ ಬೆಳವಣಿಗೆ ಮತ್ತೆ ಆತಂಕ ಹೆಚ್ಚಿಸಿದೆ.

ಅಲ್ಪಾವಧಿ ಪ್ರವಾಸ: ಇರಾನ್‌ನ ಸುಮಾರು 30 ತೈಲ ಘಟಕಗಳ ಮೇಲೆ ಇಸ್ರೇಲ್ ದಾಳಿ ನಡೆಸಿತ್ತು. ಆದರೆ ಈ ದಾಳಿಯ ತೀವ್ರತೆ ಬಗ್ಗೆ ಮಿತ್ರ ರಾಷ್ಟ್ರ ಅಮೆರಿಕ ತೀವ್ರ ತರಾಟೆಗೆ ತೆಗೆದುಕೊಂಡಿತ್ತು. ಇದರ ಬೆನ್ನಲ್ಲೇ ರಿಪಬ್ಲಿಕನ್ ಶಾಸಕರೊಂದಿಗೆ ಮಾತನಾಡಿದ ಟ್ರಂಪ್, ಕೆಲವು ದುಷ್ಟತನವನ್ನು ತೊಡೆದುಹಾಕಲು ನಾವು ಮಧ್ಯಪ್ರಾಚ್ಯಕ್ಕೆ ಒಂದು ಸಣ್ಣ ಪ್ರವಾಸವನ್ನು ಕೈಗೊಂಡಿದ್ದೇವೆ ■ 6ನೇ ಪುಟಕ್ಕೆ

ಸಿದ್ದರಾಮಯ್ಯ ತಮ್ಮ ತೋಟಗಳ ಆಸ್ತಿ ಮೌಲ್ಯ ಹೆಚ್ಚಳಕ್ಕಾಗಿ ಗ್ರೇಟರ್ ಮೈಸೂರು ಮಾಡಿದ್ದಾರೆ!

ಮಾಜಿ ಸಂಸದ ಪ್ರತಾಪ್ ಸಿಂಹ ಗಂಭೀರ ಆರೋಪ

- ತಮ್ಮ ಬಂಧು–ಬಾಂಧವರ ಆಸ್ತಿ ಪಾಲಿಕೆ ವ್ಯಾಪ್ತಿಗೆ ತಂದಿದ್ದಾರೆ
- ಇವರಿಗೆ ಸ್ವಹಿತ ಮುಖ್ಯವೇ ಹೊರತು, ಜನಪರ ಕಾಳಜಿಯಲ್ಲ
- ಇಲ್ಲಿ ತನಕ ಅಧಿಕಾರಿಗಳು ಬರೆದುಕೊಟ್ಟ 17 ಬಜೆಟ್ ಮಂಡಿಸಿದ್ದಾರೆ
- ಮೈಸೂರಿನ ಫಿಲಂ ಸಿಟಿ ಮೆಗಾ ಸಿರಿಯಲ್: ಈವರೆಗೆ ಏನೂ ಆಗಿಲ್ಲ!!

ಮೈಸೂರು, ಮಾ.10(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ರೇಟರ್ ಮೈಸೂರು ಘೋಷಣೆ ಹೆಸರಿನಲ್ಲಿ ತಮ್ಮ ತೋಟಗಳ ಆಸ್ತಿ ಮೌಲ್ಯ ಹೆಚ್ಚಿಸಿಕೊಂಡಿದ್ದಾರೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ಗಂಭೀರ ಆರೋಪ ಮಾಡಿದರು.



ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಇಂದು ಪತ್ರಕರ್ತರರೊಂದಿಗೆ ಮಾತನಾಡಿದ ಅವರು, ತಮ್ಮ ಜಾತಿ ಬಾಂಧವರ ಜಾಗವನ್ನೆಲ್ಲಾ ನಗರ ಪಾಲಿಕೆ ವ್ಯಾಪ್ತಿಗೆ ತಂದು ಅದರ ಆಸ್ತಿ ಮೌಲ್ಯ ಹೆಚ್ಚಳ ಮಾಡಿಕೊಟ್ಟಿದ್ದಾರೆ. ಈ ಕಾರಣಕ್ಕಾಗಿಯೇ ಗ್ರೇಟರ್ ಮೈಸೂರು ಮಾಡಿದ್ದಾರೆ ಎಂದು ಆಪಾದಿಸಿದರು. ಅಧಿಕಾರಿಗಳು ಬರೆದುಕೊಟ್ಟ 17 ಬಜೆಟ್ ಅನ್ನು ಸಿದ್ದರಾಮಯ್ಯ ಓದಿದ್ದಾರೆ. ಅವರ ದೂರದೃಷ್ಟಿಯ, ಸ್ಮರಣೀಯ ಯಾವುದೇ ಯೋಜನೆಗಳು ಈ ತನಕ ಸಾಕಾರಗೊಂಡಿಲ್ಲ. ಕರ್ನಾಟಕವಿರಲಿ, ತವರು ಜಿಲ್ಲೆ ಮೈಸೂರಿನ ಜನರು ನೆನಪಿನಲ್ಲಿಟ್ಟುಕೊಳ್ಳುವ ಒಂದೇ ಒಂದು ಕೆಲಸವನ್ನು ಸಿದ್ದರಾಮಯ್ಯ ಮಾಡಿದ್ದಾರೆಯೇ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು.

ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಕೇವಲ 3 ವರ್ಷದಲ್ಲಿ ಶಿವಮೊಗ್ಗ ಜಿಲ್ಲೆಯನ್ನು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿ ಮಾಡಿದರು. ಈ ಮೂಲಕ ಅಲ್ಲಿನ ಜನರು ತಲೆತಲಾಂತರ ನೆನಪಿನಲ್ಲಿಟ್ಟುಕೊಳ್ಳುವ ಕೊಡುಗೆ ನೀಡಿದ್ದಾರೆ. ಆದರೆ 17 ಬಾರಿ ■ 6ನೇ ಪುಟಕ್ಕೆ

ನಾವೇ ಫ್ಲೆಕ್ಸ್ ಕಿತ್ತು ನಗರ ಪಾಲಿಕೆ ಆಯುಕ್ತರ ಮನೆ ಮುಂದೆ ಹಾಕುತ್ತೇವೆ!!

ಮೈಸೂರು ನಗರ ಪಾಲಿಕೆ ಆಯುಕ್ತರು ಕೂಡಲೇ ಫ್ಲೆಕ್ಸ್‌ಗಳನ್ನು ತೆಗೆಸದೆ ಇದ್ದರೆ ನಾವೇ ಫ್ಲೆಕ್ಸ್‌ಗಳನ್ನು ಕಿತ್ತು ನಗರ ಪಾಲಿಕೆ ಆಯುಕ್ತರ ಮನೆ ಮುಂದೆ ಹಾಕುತ್ತೇವೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಎಚ್ಚರಿಸಿದರು. ಫ್ಲೆಕ್ಸ್ ತೆರವು ಮಾಡುವಂತೆ ನಗರ ಪಾಲಿಕೆ ಆಯುಕ್ತ ಷೇಕ್ ಆಸೀಫ್ ತನ್ವೀರ್ ಅವರಿಗೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗದ ಹಿನ್ನೆಲೆಯಲ್ಲಿ ಇಂದು ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ ನಂತರ ಪತ್ರಕರ್ತರೊಡನೆ ಅವರು ಮಾತನಾಡಿದರು. ಮೈಸೂರಿನಲ್ಲಿ ಫ್ಲೆಕ್ಸ್ ಹಾವಳಿ ಮಿತಿ ಮೀರಿದೆ. ■ 6ನೇ ಪುಟಕ್ಕೆ

ಸಿದ್ದರಾಮಯ್ಯಗೆ ಸಲಾಂ ಹೊಡೆಯುವುದಷ್ಟೆ ಇವರ ಕೆಲಸವಾ...!?

ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರೈಕೆ

ಡಿ.ಕೆ.ಶಿವಕುಮಾರ್ ಭರ್ಜರಿ ಭೋಜನಕೂಟ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಶಾಸಕರಿಂದ ಅಭಿನಂದನೆ
- ಅಧಿಕಾರ ಹಂಚಿಕೆ ಗೊಂದಲದ ನಡುವೆ ಒಂದಷ್ಟು ಸವಿ ಮಾತುಕತೆ!



ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಡಿ.ಕೆ.ಶಿವಕುಮಾರ್ ಅವರು ಆಯೋಜಿಸಿದ್ದ ಭೋಜನಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಬಹುತೇಕ ಶಾಸಕರು ಭಾಗವಹಿಸಿದ್ದರು.

ಬೆಂಗಳೂರು, ಮಾ.10– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮಂಗಳವಾರ ರಾತ್ರಿ ನಗರದ ಖಾಸಗಿ ಹೋಟೆಲ್‌ನಲ್ಲಿ ಶಾಸಕರಿಗೆ ಭೋಜನಕೂಟ ಆಯೋಜಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಸಚಿವರು, ಶಾಸಕರು ಭೋಜನಕೂಟದಲ್ಲಿ ಪಾಲ್ಗೊಂಡು, ಡಿ.ಕೆ.ಶಿವಕುಮಾರ್ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು. ಅಧಿಕಾರ ಹಸ್ತಾಂತರ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಸೇರಿದಂತೆ ರಾಜ್ಯ ರಾಜಕೀಯದಲ್ಲಿನ ಬೆಳವಣಿಗೆ ನಡುವೆ ಈ ಭೋಜನಕೂಟ ಮಹತ್ವ ಪಡೆದಿದೆ.

ಇಂದು ಸಾಮಾಜಿಕ ಜಾಲತಾಣದಲ್ಲಿ ಆತ್ಮೀಯ ಮಾತುಗಳಿಂದ ಡಿ.ಕೆ.ಶಿವಕುಮಾರ್ ಅವರಿಗೆ ಶುಭಾಶಯ ತಿಳಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಭೋಜನಕೂಟದಲ್ಲೂ ಅತ್ಯಂತ ಸಂತಸದಿಂದಲೇ ಅಭಿನಂದಿಸಿದರು. ಇಬ್ಬರೂ ಒಂದೇ ಟೇಬಲ್‌ನಲ್ಲಿ ಕುಳಿತು ಭೋಜನ ಸವಿದರು. ಅಧಿಕಾರ ಹಸ್ತಾಂತರ ವಿಚಾರದಲ್ಲಿ ತೀಕ್ಷ್ಣ ಹೇಳಿಕೆಗಳ ಮೂಲಕ ಪರೋಕ್ಷವಾಗಿ ■ 6ನೇ ಪುಟಕ್ಕೆ

ಡಿಕೆಶಿಗೆ ಉಜ್ವಲ ಭವಿಷ್ಯವಿದೆ: ಸಿಎಂ

ಬೆಂಗಳೂರು, ಮಾ.10– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆತ್ಮೀಯವಾಗಿ ಶುಭ ಕೋರಿದ್ದಾರೆ.

ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಈ ಸಂಬಂಧ ಪೋಸ್ಟ್ ಮಾಡಿರುವ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅಭಿನಂದನೆಗಳು. ಶಿವಕುಮಾರ್ ಅವರ ಸಂಘಟನಾ ಚಾತುರ್ಯ, ಸೈದ್ಧಾಂತಿಕ ಬದ್ಧತೆ ಮತ್ತು ಕಠಿಣ ಶ್ರಮ ನಮ್ಮ ಪಕ್ಷದ ಎಲ್ಲ ಯುವನಾಯಕರಿಗೆ ಮಾದರಿಯಾದುದು ಎಂದು ಬಣ್ಣಿಸಿದ್ದಾರೆ.

ವಿರೋಧ ಪಕ್ಷವಾದ ಬಿಜೆಪಿ ಸುಳ್ಳು ಕೇಸ್‌ಗಳನ್ನು ಹಾಕಿ ಬಗೆಬಗೆಯ ಕಿರುಕುಳ ನೀಡಿದರೂ ಶಿವಕುಮಾರ್ ಅವರು ಮಣಿಯದೆ ಪಕ್ಷಕ್ಕೆ ನಿಷ್ಠರಾಗಿ ಉಳಿದಿರುವುದು ಕಾಂಗ್ರೆಸ್ ಪಕ್ಷದ ಬಗ್ಗೆ ಅವರಲ್ಲಿರುವ ರಾಜಿಯಿಲ್ಲದ ನಿಷ್ಠೆಗೆ ಸಾಕ್ಷಿಯಾಗಿದೆ. ಇದು ಕಾಂಗ್ರೆಸ್ ಪಕ್ಷದ ಲಕ್ಷಾಂತರ ಕಾರ್ಯಕರ್ತರಿಗೆ ಸ್ಪೂರ್ತಿದಾಯಕ ■ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ನಾನು ಮದುವೆಗೆ ಹೋಗಿದ್ದೆ, ಆಗ ದೊಡ್ಡವರು ಕೇಳಿದ್ರು NEXT ನಿಂದೆನಾ ಅಂತಾ...
ಒಂದೆಡೆ ತಿಥಿಗೆ ಹೋದಾಗ ನಾನ್ ಹಿರಿಯರ ಕೇಳಿದೆ, NEXT ನಿಮ್ದೇನಾ ಅಂತ!! ಯಾಕೋ ಬಾಳ ಬೇಜಾರು ಮಾಡ್ಕೋಂಡ್ರು

ಮೈಸೂರು ಮಿತ್ರ

ಬುಧವಾರ, ಮಾರ್ಚ್ 11, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಈ ಸಮಾಜವೇ ಒಂದು ವಿಚಿತ್ರ, ಮಾತನಾಡಿದರೆ ಮಾತಿನಲ್ಲಿರುವ ತಪ್ಪನ್ನು ಹುಡುಕುತ್ತಾರೆ, ಮೌನಿಯಾದರೆ ನಮ್ಮನ್ನೇ ತಪ್ಪಾಗಿ ಚಿತ್ರಿಸುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತನ್ನ ಕಾಲಿಗೆ ತಾನೇ ಶರಣು ಮಾಡಿ ಹರಸಿಕೊಂಡ ಹಾಗೆ

ನಿಮ್ಮ ಪತ್ರಗಳು

ಪೆಟ್ರೋಲ್, ಡೀಸೆಲ್ ಮಿತವಾಗಿ ಬಳಸಿ

ಮಾನ್ಯರೆ,

ಕೊಲ್ಲಿ ರಾಷ್ಟ್ರಗಳ ಯುದ್ಧದಿಂದಾಗಿ ಭಾರತಕ್ಕೆ ಪೂರೈಕೆಯಾಗುತ್ತಿರುವ ಇಂಧನದ ಕೊರತೆಯಿಂದಾಗಿ ಬೆಲೆ ಹೆಚ್ಚಳ ಅನಿವಾರ್ಯವೆಂದು ಕೇಂದ್ರ ಸರಕಾರ ಹೇಳುತ್ತಿದೆ. ಆದರೆ ನಾವು ಬಳಸುವ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲದ ಮಿತ ಬಳಕೆಯಿಂದಾಗಿ ನಾವು ದೇಶವನ್ನು ಸಂಕಷ್ಟದಿಂದ ಕಾಪಾಡಬಹುದು. ಅನಿವಾರ್ಯವಾಗಿ ವಾಹನ ಬಳಸಲೇಬೇಕಾಗಿ ಬಂದರೆ ಮಾತ್ರ ವಾಹನವನ್ನು ಬಳಸುವ ಮೂಲಕ ನಾವು ಮಿತವ್ಯಯವನ್ನು ಸಾಧಿಸಿ ದೇಶದ ಹಿತ ಕಾಯಬೇಕಿರುವುದು ಎಲ್ಲರ ಕರ್ತವ್ಯವೂ ಆಗಿದೆ. ಕೇಂದ್ರ ಸರಕಾರವೇನೋ ಇಂಧನದ ಕೊರತೆ ಇಲ್ಲವೆಂದು ಹೇಳಿದರೂ ಇರುವ ಇಂಧನವನ್ನು ಸದ್ಬಳಕೆ ಮಾಡುವುದರಿಂದ ನಾವೂ ಹಣ ಉಳಿಸಬಹುದು ಹಾಗೂ ದೇಶವನ್ನು ಪಾರುಮಾಡಬಹುದು.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಮೈಸೂರು.

ಕೋರ್ಟ್ ಮುಂದಿನ ಸರ್ಕಲ್ ಬಳಿ ಸಿಗ್ನಲ್ ಲೈಟ್ ಅಳವಡಿಸಿ

ಮಾನ್ಯರೆ,

ಇತ್ತೀಚೆಗೆ ಮೈಸೂರಿನ ಎಲ್ಲೆಡೆ ಸಿಗ್ನಲ್ ಲೈಟ್ ಅಳವಡಿಸಲಾಗುತ್ತಿದೆ. ಕೆಲವು ಕಡೆ ಅನಾವಶ್ಯಕವಾಗಿದೆ. ಚಾಮರಾಜಪುರಂನ ಕೋರ್ಟ್ ಮುಂಭಾಗ ಎಲ್ಲಾ ದಿಕ್ಕಿನಿಂದ ವಾಹನಗಳು ಬರುತ್ತಿರುತ್ತವೆ. ಶಾಲಾ–ಕಾಲೇಜು, ಆಫೀಸು ಸುತ್ತಮುತ್ತ ಇರುವುದರಿಂದ ವಾಹನ ಹಾಗೂ ಜನಸಂದಣಿ ಇಲ್ಲಿ ಸದಾ ಹೆಚ್ಚಾಗಿರುತ್ತದೆ. ಆದರೆ, ಇಲ್ಲಿ ಸಿಗ್ನಲ್ ಲೈಟ್ ಇಲ್ಲ. ಅದರ ಅವಶ್ಯಕತೆ ಕೋರ್ಟ್ ಮುಂದೆ ಹೆಚ್ಚಾಗಿದೆ. ಆದ್ದರಿಂದ ಇಲ್ಲಿ ಸಿಗ್ನಲ್ ಲೈಟ್ ಅಳವಡಿಸಿ ಆಗುವ ಅನಾಹುತಗಳನ್ನು ತಪ್ಪಿಸಬೇಕಿದೆ. ಸಂಬಂಧಪಟ್ಟವರು ಕೂಡಲೇ ಕ್ರಮ ಕೈಗೊಳ್ಳಲು ಆಗ್ರಹಿಸುತ್ತೇವೆ.

–ಎಂ. ಎಸ್. ಉಷಾಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ರೈತರ ಶೋಷಣೆ, ಭೂಸ್ವಾಧೀನ ತಡೆಗಟ್ಟಿ

ಮಾನ್ಯರೆ,

ಇತ್ತೀಚಿನ ವರದಿಗಳ ಪ್ರಕಾರ ರಾಜ್ಯಾದ್ಯಂತ ಅನ್ನದಾತ ಎದುರಿಸುತ್ತಿರುವ ಸವಾಲುಗಳು ಕೇವಲ ಆಡಳಿತಾತ್ಮಕ ಲೋಪವಲ್ಲ, ಬದಲಾಗಿ ವ್ಯವಸ್ಥಿತ ಶೋಷಣೆಯಾಗಿವೆ. ಕೃಷಿ ಇಲಾಖೆಯಲ್ಲಿ ಪಿ.ಎಂ. ಕಿಸಾನ್‌ನಂತಹ ಮೂಲಭೂತ ಯೋಜನೆಗಳಿಗೂ 500 ರೂ. ಲಂಚ ಪಡೆಯುತ್ತಿರುವುದು ದುರದೃಷ್ಟಕರ. ಅರ್ಹತೆಯ ಬದಲು ರಾಜಕೀಯ ಪ್ರಭಾವದ ಮೇಲೆ ಸವಲತ್ತು ಹಂಚಿಕೆಯಾಗುತ್ತಿರುವುದು ಸಾಮಾಜಿಕ ನ್ಯಾಯದ ಉಲ್ಲಂಘನೆಯಾಗಿದೆ. ಮತ್ತೊಂದೆಡೆ ಕೈಗಾರಿಕಾ ಅಭಿವೃದ್ಧಿಯ ಹೆಸರಿನಲ್ಲಿ 'ಕೆಐಎಡಿಬಿ' ಫಲವತ್ತಾದ ಕೃಷಿ ಭೂಮಿಯನ್ನು ಅಲ್ಪ ಮೊತ್ತಕ್ಕೆ ವಶಪಡಿಸಿಕೊಂಡು ನಂತರ ಉದ್ಯಮಿಗಳಿಗೆ ವಾಣಿಜ್ಯ ಲಾಭಕ್ಕಾಗಿ ಹಸ್ತಾಂತರಿಸುತ್ತಿರುವುದು ರಿಯಲ್ ಎಸ್ಟೇಟ್ ದಂಧೆಯ ಮುಖವಾಡದಂತಿದೆ. ಅಂಕಿಅಂಶಗಳ ಪ್ರಕಾರ ಪ್ರತಿ ವರ್ಷ ಸಾವಿರಾರು ಎಕರೆ ಕೃಷಿ ಭೂಮಿ ಕೃಷಿಯೇತರ ಉದ್ದೇಶಕ್ಕೆ ಬಳಕೆಯಾಗುತ್ತಿರುವುದು ಆಹಾರ ಭದ್ರತೆಗೆ ದೊಡ್ಡ ಕಂಟಕ. ಸರ್ಕಾರವು ಈ ಕೂಡಲೇ ಭೂಸ್ವಾಧೀನ ಪ್ರಕ್ರಿಯೆಯ ಬಗ್ಗೆ ಶ್ವೇತಪತ್ರ ಹೊರಡಿಸಬೇಕು. ರೈತರ ಭೂಮಿ, ರೈತರ ಬಳಿಯೇ ಇರಬೇಕು. ಉದ್ಯಮದ ಹೆಸರಿನಲ್ಲಿ ಅವರ ಬದುಕನ್ನು ಕಸಿಯಬಾರದು. ಈ ಅಕ್ರಮಗಳಿಗೆ ಕಡಿವಾಣ ಬಿದ್ದು ಕೃಷಿ ಇಲಾಖೆಯಲ್ಲಿ ಪಾರದರ್ಶಕತೆ ಮೂಡಲಿ.

–ಡಾ.ಎಚ್.ಕೆ. ವಿಜಯಕುಮಾರ, ಮೈಸೂರು.

ನೇಮಕಾತಿ ಹಳೆ ಮೀಸಲಾತಿಯಂತೇ ನಡೆಯಲಿ

ಮಾನ್ಯರೆ,

ರಾಜ್ಯ ಸರ್ಕಾರವು ಐವತ್ತಾರು ಸಾವಿರ ಹುದ್ದೆಗಳ ನೇಮಕಾತಿ ಪ್ರಾರಂಭಿಸಿರುವುದು ಸ್ವಾಗತಾರ್ಹ ಕ್ರಮ. ಇದಕ್ಕೆ ಸರ್ಕಾರವನ್ನು ಅಭಿನಂದಿಸುತ್ತೇನೆ.

ಆದರೆ ನೇಮಕಾತಿ ಪ್ರಕ್ರಿಯೆ ನಡೆಯುವಾಗ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿರುವ ಮೀಸಲಾತಿ ಅನ್ವಯ ಆಗಬೇಕೇ ವಿನಃ ನ್ಯಾಯಮೂರ್ತಿ ನಾಗಮೋಹನ್ ದಾಸ್ ಆಯೋಗದ ವರದಿಯಂತಲ್ಲ. ಇವರ ವರದಿ ಏಕ ಪಕ್ಷೀಯವಾಗಿದೆ. ಇದರಿಂದ ಬಲಗೈ ಸಮುದಾಯ ಸೇರಿದಂತೆ ನೂರು ಜಾತಿಗಳಿಗೆ ಅನ್ಯಾಯವಾಗುತ್ತದೆ. ನಾಗಮೋಹನ್‌ರಂತಹ ನ್ಯಾಯಮೂರ್ತಿಗಳು ಇತರೆ ಸಮುದಾಯಗಳಿಗೆ ಅನ್ಯಾಯ ಮಾಡಿರುವುದು ಸರಿಯಲ್ಲ. ಒಬ್ಬ ವ್ಯಕ್ತಿಯ ವರದಿಯನ್ನು ಆಧಾರವಾಗಿಟ್ಟುಕೊಂಡು ನೂರು ಜಾತಿಗಳಿಗೆ ಅನ್ಯಾಯ ಮಾಡಿದರೂ ಅದರ ಫಲವನ್ನು ಕಾಂಗ್ರೆಸ್ ಉಣ್ಣಲೇಬೇಕಾಗುತ್ತದೆ. ಒಳ ಮೀಸಲಾತಿ ಮಾಡಲು ಹೋಗಿ ಕಾನೂನಿಗೆ ಅಂಬೇಡ್ಕರ್ ನೀಡಿರುವ ಮೀಸಲಾತಿಯನ್ನು ಅವಮಾನಿಸಬೇಡಿ ಆಗೊಂದು ವೇಳೆ ನೂರು ಜಾತಿಗೆ ಅನ್ಯಾಯವಾದರೆ ಕಾಂಗ್ರೆಸ್‌ನಿಂದ ಈ ಸಮುದಾಯಗಳು ದೂರ ಸರಿಯುವುದು ನಿಶ್ಚಿತ. ಬಿಜೆಪಿಯಿಂದ ಅಂತರ ಕಾಯ್ದುಕೊಂಡಿರುವ ಬಲಗೈ ಸಮುದಾಯ ಬಿಜೆಪಿ ಕಡೆ ವಾಲುವುದು ನಿಸ್ಸಂಶಯ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

ಹೆಚ್ಚುತ್ತಿರುವ ರಸ್ತೆ ಅಪಘಾತಗಳಿಗೆ ಅತಿವೇಗ, ಅಜಾಗರೂಕತೆಯೇ ಕಾರಣ

ಮಾನ್ಯರೆ,

ಅತಿವೇಗ ಹಾಗೂ ಅಜಾಗರೂಕ ಚಾಲನೆಯ ಕಾರಣದಿಂದ ರಸ್ತೆ ಅಪಘಾತಗಳು ದಿನೇ ದಿನೆ ಹೆಚ್ಚುತ್ತಿರುವುದು ಅತ್ಯಂತ ಆತಂಕದ ವಿಷಯವಾಗಿದೆ. ಭಾರತದಲ್ಲಿ ಸಂಭವಿಸುವ ಅಪಘಾತಗಳಲ್ಲಿ ಸುಮಾರು 60% ಅಪಘಾತಗಳಿಗೆ ಅತಿವೇಗವೇ ಕಾರಣವಾಗುತ್ತಿದೆ ಎಂಬುದನ್ನು ಅಂಕಿ ಅಂಶಗಳೇ ಸೂಚಿಸುತ್ತವೆ. ಇದರಿಂದ ಅನೇಕ ಜೀವಗಳು ಕಳೆದು ಹೋಗುತ್ತಿವೆ ಮತ್ತು ತುಂಬಾ ದೊಡ್ಡ ನಷ್ಟ ಉಂಟಾಗುತ್ತಿದೆ.

ಅಜಾಗರೂಕತೆಯಿಂದ ಲೇನ್ ಬದಲಿಸುವುದು, ಟ್ರಾಫಿಕ್ ನಿಯಮಗಳನ್ನು ಹಾಗೂ ಸಿಗ್ನಲ್‌ಗಳನ್ನು ಲೆಕ್ಕಿಸದೇ ಇರುವ ಚಾಲನೆ ಮತ್ತು ಗಮನ ತಪ್ಪಿದ ಚಾಲನೆ ಇವುಗಳು ಸಾಮಾನ್ಯ ಕಾರಣಗಳಾಗಿವೆ. ಆದ್ದರಿಂದ ಅಧಿಕಾರಿಗಳು ಟ್ರಾಫಿಕ್ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ರಸ್ತೆ ಮೂಲಸೌಕರ್ಯವನ್ನು ಉತ್ತಮಗೊಳಿಸಬೇಕು ಮತ್ತು ಸುರಕ್ಷಿತ ಚಾಲನೆ ಬಗ್ಗೆ ಜಾಗೃತಿ ಅಭಿಯಾನಗಳನ್ನು ನಡೆಸಬೇಕು. ನಮ್ಮ ರಸ್ತೆಗಳನ್ನೂ ಹೆಚ್ಚು ಸುರಕ್ಷಿತವಾಗಿರಿಸುವುದರಿಂದ ಅನೇಕ ಜೀವಗಳನ್ನು ಉಳಿಸಬಹುದು.

–ಸಯ್ಯದ್ ಮೊಯಿನ್, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಮಹಾರಾಜ ಕಾಲೇಜು, ಮೈಸೂರು.

ಅಮೂಲ್ಯ ನೆನಪುಗಳ ಫ್ರೇಂ....

–ಆರ್.ಜಿ.ಸಿಂಗ್
ಕಾರ್ಯದರ್ಶಿ, ರಾಮಸನ್ಸ್ ಕಲಾ ಪ್ರತಿಷ್ಠಾನ

'ಮೈಸೂರು ಮಿತ್ರ', ಇನ್ನು ಮುಂದೆ ರಾಮ್ ಸನ್ಸ್ ಕಲಾ ಪ್ರತಿಷ್ಠಾನದೊಂದಿಗೆ ಪ್ರತಿ ಬುಧವಾರ 'ಅಮೂಲ್ಯ ನೆನಪುಗಳ ಫ್ರೇಂ' ಅಂಕಣದಲ್ಲಿ ಗತಕಾಲದ ಅಪರೂಪದ ಚಿತ್ರ–ವಿವರಣೆ ಪ್ರಕಟಿಸಲಿದೆ. –ಸಂ



1894ರ ಡಿಸೆಂಬರ್ 30, 10ನೇ ಚಾಮರಾಜೇಂದ್ರ ಒಡೆಯರ್ ನಿಧನರಾದ ಎರಡು ದಿನಗಳ ಬಳಿಕ ಭಾರತದ ಬ್ರಿಟಿಷ್ ಸರ್ಕಾರವು ಕೇವಲ 10 ವರ್ಷದ ಬಾಲಕ ಕೃಷ್ಣರಾಜ ಒಡೆಯರ್ ಅವರನ್ನು ಮೈಸೂರು ಸಂಸ್ಥಾನಕ್ಕೆ ಉತ್ತರಾಧಿಕಾರಿಯನ್ನಾಗಿ ಘೋಷಿಸಿತು.

ಈ ವೇಳೆ ಆಗಿನ ವೈಸ್‌ರಾಯ್ ಲಾರ್ಡ್ ಎಲ್ಗಿನ್ ತಮ್ಮ ಪತ್ನಿಯೊಂದಿಗೆ ಮೈಸೂರಿಗೆ ಅಧಿಕೃತ ಭೇಟಿ ನೀಡಿದ್ದರು. ಈ ಛಾಯಾಚಿತ್ರವು 1895ರ ನವೆಂಬರ್ 21ರಂದು ಮೈಸೂರು ಅರಮನೆಯ ಹಳೆಯ ಭಾಗದಲ್ಲಿ ತೆಗೆದಂತದ್ದು.

ಇದರಲ್ಲಿ ವೈಸ್‌ರಾಯ್ ಲಾರ್ಡ್ ಎಲ್ಗಿನ್ ಮತ್ತು ಅವರ ಪತ್ನಿ ವೈಸರಾಯಿನ್ ಲೇಡಿ ಕಾನ್‌ಸ್ಟನ್ಸ್ ಕಾರ್ನೆಗಿ ಅವರು ಮಹಾರಾಜರ ಬಲಭಾಗದಲ್ಲಿ ಕುಳಿತಿದ್ದಾರೆ.

ಉಳಿದಂತೆ (ನಿಂತಿರುವವರು–ಎಡದಿಂದ) ಮೈಸೂರಿನ ಅಂದಿನ ಪ್ರಮುಖ ಗಣ್ಯರಾದ 1. ದಿವಾನ್ ಸರ್ ಕುಮಾರಪುರಂ ಶೇಷಾದ್ರಿ ಅಯ್ಯರ್, 2. ಟಿ.ಆರ್.ಎ.ತುಂಬೂ ಚೆಟ್ಟಿ ಸಿಐಇ (ಮೈಸೂರು ಮುಖ್ಯ ನ್ಯಾಯಾಲಯದ ಮುಖ್ಯ ನಾಯಾಧೀಶರು), 3. ಪಿ.ಎನ್.ಕೃಷ್ಣಮೂರ್ತಿ ಕೆ.ಸಿ.ಐ.ಇ (ಮೈಸೂರು ಮುಖ್ಯ ನ್ಯಾಯಾಲಯದ ನ್ಯಾಯಾಧೀಶರು ಮತ್ತು ನಂತರದಲ್ಲಿ 16ನೇ ದಿವಾನರಾಗಿ ಸೇವೆ ಸಲ್ಲಿಸಿದವರು), 4. ಸರ್ ಮದ್ದೂರ್ ಕಾಂತರಾಜ್ ಅರಸ್ (20ನೇ ದಿವಾನರಾಗಿ ಸೇವೆ ಸಲ್ಲಿಸಿದವರು) ಹಾಗೂ 5. ಖಾನ್ ಬಹದ್ದೂರ್ ಅಬ್ದುರ್ ರಹಮಾನ್ (ಶಿವಮೊಗ್ಗದ ಡೆಪ್ಯೂಟಿ ಕಮಿಷನರ್). ಇತರರನ್ನು ಕಾಣಬಹುದಾಗಿದೆ.

ಎಲ್ಗಿನ್ 1894ರಿಂದ 1899ರವರೆಗೆ ಭಾರತದ ವೈಸ್‌ರಾಯ್ ಆಗಿ ಸೇವೆ ಸಲ್ಲಿಸಿದರು. ಇತಿಹಾಸದಲ್ಲಿ ದಾಖಲಾಗಿರುವ ಅವರ ಪ್ರಸಿದ್ಧ ಹೇಳಿಕೆ; "ಭಾರತ ನಮ್ಮ ಸಾಮ್ರಾಜ್ಯದ ಅತೀ ಪ್ರಮುಖ ಅಂಗ... ನಮ್ಮ ಸಾಮ್ರಾಜ್ಯ ತನ್ನ ಅಧೀನದ ಯಾವುದೇ ಭಾಗವನ್ನು ಕಳೆದುಕೊಂಡರೂ ನಾವು ಬದುಕುಳಿಯಬಹುದು. ಆದರೆ ಭಾರತವನ್ನು ಕಳೆದುಕೊಂಡರೆ, ನಮ್ಮ ಸಾಮ್ರಾಜ್ಯದ ಸೂರ್ಯ ಮುಳುಗಿದಂತೆಯೇ!"

[ಈ ಗಣ್ಯರ ಬಗೆಗಿನ ಮಾಹಿತಿಗಳನ್ನು ಜಿ.ಆರ್.ಜೋಸಿಯಾರ್ ಅವರ 'ಹಿಸ್ಟರಿ ಆಫ್ ಮೈಸೂರ್ ಅಂಡ್ ಯಾದವ ಡೈನಸ್ಟಿ' ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ]

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ವಿಷ್ಣುಭಕ್ತ ಶ್ರೇಷ್ಠರಾದ ಆಳ್ವಾರರು

ಕನ್ನಡ ನಾಡಿನ ಹರಿದಾಸರಂತೆ ತಮಿಳುನಾಡಿನಲ್ಲಿ ಕ್ರಿ.ಶ. ಏಳನೆಯ ಮತ್ತು ಎಂಟನೆಯ ಶತಮಾನಗಳಲ್ಲಿ ವಿಷ್ಣು ಭಕ್ತಿಯನ್ನು ತಮ್ಮ ಭಾವಪೂರ್ಣವಾದ ಹಾಡುಗಳಿಂದ ಹರಡಿದ ಮಹಾನುಭಾವರು ಆಳ್ವಾರರು. ಆಳ್ವಾರ್ ಎಂದರೆ ಭಗವದ್ಭಕ್ತಿಯಲ್ಲಿ ಸದಾ ಮುಳುಗಿರುವವರು. ಭಗವದನುಭವದ ಆನಂದವನ್ನೇ ಸವಿಯುತ್ತಾ ಜಗತ್ತಿನ ಸೇವೆಯನ್ನು ಮಾಡಿದವರು ಎಂದು ಅರ್ಥ. ಇವರಲ್ಲಿ ಜಾತಿಭೇದವಿಲ್ಲ. ಯಾವ ಜಾತಿಯಲ್ಲಿ ಹುಟ್ಟಿದರೂ ಭಕ್ತರೆಲ್ಲ ಸಮಾನರು. ಅವರಲ್ಲಿ ತಾರತಮ್ಯವಿಲ್ಲ. ಹನ್ನೆರಡು ವಿಷ್ಣು ಭಕ್ತೋತ್ತಮರನ್ನು ಆಳ್ವಾರರೆಂದು ಪರಿಗಣಿಸಿ ಗೌರವಿಸಲಾಗಿದೆ. 1) ಪೊಯ್‌ಗೈಯಾಳ್ವಾರ್, 2) ಪೂದತ್ತಾಳ್ವಾರ್, 3) ಪೇಯಾಳ್ವಾರ್, 4) ತಿರುಮಳಿಶೈಯಾಳ್ವಾರ್, 5) ನಮ್ಮಾಳ್ವಾರ್, 6) ಕುಲಶೇಖರಾಳ್ವಾರ್ 7) ಪೆರಿಯಾಳ್ವಾರ್, 8) ಆಂಡಾಳ್ (ಗೋದಾದೇವಿ), 9) ತೊಂಡರಡಿಪ್ಪೊಡಿಯಾಳ್ವಾರ್ (ವಿಪ್ರನಾರಾಯಣ), 10) ತಿರುಪ್ಪಾಣಾಳ್ವಾರ್, 11) ಮಧುರ ಕವಿಯಾಳ್ವಾರ್, 12) ತಿರುಮಂಗೈಯಾಳ್ವಾರ್.


ಮೊದಲನೆಯ ಮೂವರು ಆಳ್ವಾರರು ಒಂದೇ ಕಾಲದಲ್ಲಿದ್ದವರು. ಪೊಯ್‌ಗೈಯಾಳ್ವಾರ್ ಕಮಲಪರಾಗದಲ್ಲೂ, ಪೊದತ್ತಾಳ್ವಾರ್ ಮಾಧವೀಕುಸುಮದಲ್ಲೂ, ಪೇಯಾಳ್ವಾರ್ ಕನ್ನೈದಿಲೆಯಲ್ಲೂ ಅವತಾರ ಮಾಡಿದರೆಂದು ಹೇಳಲಾಗಿದೆ. ಜ್ಞಾನ–ಭಕ್ತಿ–ವೈರಾಗ್ಯಗಳಿಂದ ತುಂಬಿದ್ದ ಈ ಮೂವರೂ ಗ್ರಾಮೈಕರಾತ್ರರಾಗಿದ್ದರಂತೆ. ಹಾಗೆಂದರೆ ಯಾವ ಗ್ರಾಮದಲ್ಲೂ ಅವರು ಒಂದು ರಾತ್ರಿಗಿಂತ ಹೆಚ್ಚು ಉಳಿದುಕೊಳ್ಳದೆ ಸಂಚಾರ ಮಾಡುತ್ತಿದ್ದರೆಂದು ಅರ್ಥ.

ಒಂದು ರಾತ್ರಿ ಧಾರಾಕಾರ ಮಳೆಯಾಗುತ್ತಿತ್ತು. ಪೊಯ್‌ಗೈ ಆಳ್ವಾರರು ಒಂದು ಮಂಟಪದಲ್ಲಿದ್ದ ಕಲ್ಲಿನ ಚಪ್ಪಡಿಯ ಮೇಲೆ ಮಲಗಿದ್ದರು. ಆಗ ಮಳೆಯಲ್ಲಿ ನೆನೆದ ಪೂದತ್ತಾಳ್ವಾರರು ಅಲ್ಲಿಗೆ ಬಂದು 'ನನಗೆ ಸ್ಥಳವುಂಟೆ?' ಎಂದು ಕೇಳಿದರು. 'ಒಬ್ಬರು ಮಲಗುವ ಜಾಗ ಇಬ್ಬರಿಗೆ ಕುಳಿತುಕೊಳ್ಳಲು ಸಾಕಾಗುತ್ತದೆ. ಬನ್ನಿ' ಎಂದು ಪೊಯ್‌ಗೈ ಆಳ್ವಾರರು ಕುಳಿತುಕೊಂಡು ಅರ್ಧಜಾಗವನ್ನು ಪೂದತ್ತಾಳ್ವಾರರಿಗೆ ಬಿಟ್ಟರು. ಆಮೇಲೆ ಪೆಯಾಳ್ವಾರರು ಬಂದು ಮಳೆ ಸುರಿಯುತ್ತಿದೆ. ಒಳಗೆ ಕೊಂಚ ಜಾಗ ಕೊಡುವಿರಾ? ಎಂದು ಕೇಳಿದರು. 'ಇಬ್ಬರು ಕುಳಿತ ಜಾಗದಲ್ಲಿ ಮೂವರು ನಿಂತುಕೊಳ್ಳಬಹುದು, ಬನ್ನಿ ಎಂದು ಕುಳಿತಿದ್ದ ಇಬ್ಬರು ಎದ್ದು ಅವರಿಗೂ ಜಾಗ ಮಾಡಿಕೊಟ್ಟರು. ಆಳ್ವಾರರ ಹೃದಯವೈಶಾಲ್ಯಕ್ಕೆ ಇದು ಸಾಕ್ಷಿ.

ಆಳ್ವಾರರು ರಚಿಸಿದ ಹಾಡುಗಳ ಸಂಗ್ರಹಗಳನ್ನು ಪ್ರಬಂಧ ಗಳೆಂದೂ ಕರೆಯುತ್ತಾರೆ. ಮೇಲೆ ಹೇಳಿದ ಮೂವರು ಆಳ್ವಾರರು ಹಾಡಿದ ಪ್ರಬಂಧ ತಿರುವಂದಾದಿ. ಇದರಲ್ಲಿ ನೂರು ಪದ್ಯಗಳು ಅಥವಾ ಪಾಶುರಗಳಿವೆ. ಅನಂತರ ಬಂದ ತಿರುಮಣಿಶೈಯಾಳ್ವಾರ್ ಭಗವಂತನ ದಿವ್ಯಮಂಗಳ ವಿಗ್ರಹದ ಸೌಂದರ್ಯವನ್ನು ಕಣ್ಣಾರೆ ಕಂಡು ಭಕ್ತಿಯ ಅತಿಶಯದಿಂದ ಮೈಮರೆತ ಮಹಾತ್ಮರು. 'ನಾನು ದ್ವಿಜರಲ್ಲಿ ಹುಟ್ಟಲಿಲ್ಲ, ವೇದಗಳ ಅರಿವು ನನಗಿಲ್ಲ. ಶ್ರೀ ಹರಿಯ ಪಾದ ಪದ್ಮಗಳಲ್ಲದೆ ಬೇರೆ ಏನೂ ನನಗೆ ತಿಳಿಯದು' ಎಂದು ಇವರು ಹಾಡಿ ದ್ದಾರೆ. ಇವರು ಜಗತ್ತಿಗೆ ನೀಡಿದ ದಿವ್ಯ ಪ್ರಬಂಧಗಳು ನಾನ್ಮುರ್ಗತಿರು ವಂದಾದಿ, ತಿರುಚ್ಚಂದವಿರುತ್ತಂ. ತಿರುಮಣಿಶೈಯಾಳ್ವಾರರನ್ನು ಸಂಸ್ಕೃತದಲ್ಲಿ ಭಕ್ತಿಸಾರಮುನಿ ಎಂದು ಕರೆದಿದ್ದಾರೆ.

ಶಕ್ತಿಪಂಚಮಯವಿಗ್ರಹಾತ್ಮನೇ
ಶುಕ್ತಿಹಾರಜಿತಚಿತ್ತಹಾರಿಣೇ।
ಮುಕ್ತಿದಾಯಕ ಮುರಾರಿಪಾದಯೋಃ
ಭಕ್ತಿಸಾರಮುನಯೇ ನಮೋ ನಮಃ॥

ಆಮೇಲೆ ನಮ್ಮಾಳ್ವಾರ್ ಎಲ್ಲ ಆಳ್ವಾರರಲ್ಲಿ ಇವರಿಗೆ ಅಗ್ರಪೂಜೆ. ಸಂಸ್ಕೃತ ದಲ್ಲಿ ಇವರನ್ನು ಶಠಾರಿ, ಶಠಕೋಪಮುನಿ ಎಂಬ ಹೆಸರಿನಿಂದ ಕರೆಯುತ್ತಾರೆ. ಮನುಷ್ಯ ಜೀವಿಯು ತಾಯಿಯ ಗರ್ಭದಲ್ಲಿದ್ದಾಗ–



ತನ್ನ ಪ್ರಾಚೀನ ಪುಣ್ಯ ಪಾಪ ಕರ್ಮಗಳ ಜ್ಞಾನ ವಿರುತ್ತದೆ. ಮುಂದೆ ಭಗವಂತನನ್ನು ಆಶ್ರಯಿಸಿ ಭಕ್ತಿ ಪ್ರಪತ್ತಿಗಳಿಂದ ಮೋಕ್ಷ ಪಡೆದುಕೊಳ್ಳಬೇಕೆಂದು ಜೀವಾತ್ಮನು ನಿಶ್ಚಯಿಸಿರುತ್ತಾನೆ. ಆದರೆ ಗರ್ಭದಿಂದ ಹೊರಗೆ ಬಂದಾಗ ಶಠ ಎಂಬ ವಾಯು ಮಗುವನ್ನು ಆಕ್ರಮಿಸುತ್ತದೆ. ಚಿಂತಿಸಿದುದೆಲ್ಲ ಶಠದ ಪ್ರಭಾವದಿಂದ ಮರೆತು ಹೋಗುತ್ತದೆ. ಸಾಂಸಾರಿಕ ಕ್ಲೇಶಗಳು ಬಾಧಿಸುತ್ತವೆ. ಆದರೆ ನಮ್ಮಾಳ್ವಾರ್ ಜನಿಸಿದಾಗ ಆಕ್ರಮಿಸಲು ಬಂದ ಶಠ ವಾಯುವನ್ನು ಧಿಕ್ಕರಿಸಿ ಹೊಡೆದಟ್ಟಿದರು. ಅದರಿಂದ ಅವರಿಗೆ ಶಠಾರಿ, ಶಠಕೋಪ ಎಂದು ಹೆಸರಾಯಿತು. ನಮ್ಮಾಳ್ವಾರ್ ಭಗವಂತನ ಪಾದುಕೆಗಳ ಅವತಾರ ಎಂಬ ನಂಬಿಕೆಯಿದೆ. ದೇವಸ್ಥಾನಗಳಲ್ಲಿ ಭಕ್ತರ ತಲೆಯ ಮೇಲೆ ಶಠಕೋಪ ವನ್ನಿಟ್ಟು ಆಶೀರ್ವದಿಸುವುದು ಸಂಪ್ರದಾಯ ಸಿದ್ಧವಾಗಿದೆ. ತಾಮ್ರ ಪರ್ಣಿ ತೀರದ ಆಳ್ವಾರ್ ತಿರುನಗರಿ ಎಂಬಲ್ಲಿ ಹುಟ್ಟಿದ ಶಠಕೋಪರು ರಚಿಸಿದ ಪ್ರಬಂಧ ತಿರುವಾಯ್ಮೊಳಿ. ಇದರಲ್ಲಿ ಭಗವನ್ನಾರಾಯಣನ ಪರ, ವ್ಯೂಹ, ವಿಭವ, ಅಂತರ್ಯಾಮಿ, ಅರ್ಚಾ ಎಂಬ ಐದು ರೂಪಗಳನ್ನೂ ವರ್ಣಿಸಿದ್ದಾರೆ.

ಮುಂದಿನ ಆಳ್ವಾರರು ಕುಲಶೇಖರರು. ಕೇರಳದ ತಿರುವಾಂಕೂರಿನ ರಾಜರು. ಇವರು ಪ್ರಜೆಗಳನ್ನು ಪಾಲಿಸುತ್ತಾ ಭಗವದ್ಭಕ್ತಿಯನ್ನು ಬೆಳೆಸಿಕೊಂಡರು. ಇವರು ತನ್ನನ್ನು ಪ್ರಭುವೆಂದು ಭಾವಿಸಲಿಲ್ಲ. ಭಗವಾನ್ ಕೃಷ್ಣನೇ ಪ್ರಭು. ನಾನು ಸೇವಕ ಮಾತ್ರ ಎಂದೇ ಭಾವಿಸಿದರು. ಇವರ ರಾಜಧಾನಿಯಲ್ಲಿ ದಿನವೂ ರಂಗನಾಥನ ಉತ್ಸವ ವೈಭವದಿಂದ ಜರುಗುತ್ತಿತ್ತು.

ಘುಷ್ಯತೇ ಯಸ್ಯ ನಗರೇ ರಂಗಯಾತ್ರಾ ದಿನೇ ದಿನೆ ।
ತಮಹಂ ಶಿರಸಾ ವಂದೇ ರಾಮಾನಂಕುಲಶೇಖರಮ್ ॥

ಎಂಬ ಶ್ಲೋಕ ಪ್ರಸಿದ್ಧವಾಗಿದೆ. ಕುಲಶೇಖರ ಆಳ್ವಾರರ ವೈಶಿಷ್ಟ್ಯ ಏನೆಂದರೆ ತಮಿಳಿನಲ್ಲಿ ಪೆರುಮಾಳ್ ತಿರುಮೊಳಿಯನ್ನೂ ಸಂಸ್ಕೃತದಲ್ಲಿ ಮುಕುಂದ ಮಾಲೆಯನ್ನೂ ರಚಿಸಿರುವುದು. ಮುಕುಂದ ಮಾಲೆ ಎಲ್ಲ ಸಂಸ್ಕೃತ ವಿದ್ಯಾರ್ಥಿಗಳಿಗೆ ಪ್ರಿಯವಾದ ಸ್ತೋತ್ರ. ಅದರ ಪದ್ಯಗಳು ಭಕ್ತಿಭರಿತವಾಗಿ ಎಲ್ಲರಿಗೂ ರುಚಿಸುತ್ತವೆ.

ಮಾ ಭೀರ್ಮಂದಮನೋ ವಿಚಿಂತ್ಯ
ಮನಸಾಯಾಮೀಶ್ಚಿರಂಯಾತನಾ
ನಾಮೀ ನಃ ಪ್ರಭವಂತಿ ಪಾಪರಿಪವಃ ಸ್ವಾಮೀ ನನು ಶ್ರೀಧರಃ।
ಆಲಸ್ಯಂ ವ್ಯಪನೀಯ ಭಕ್ತಿ ಸುಲಭಂ ಧ್ಯಾಯಸ್ವ ನಾರಾಯಣಂ
ಲೋಕಸ್ಯ ವ್ಯಸನಾಪನೋದನಕರೋ ದಾಸಸ್ಯ ಕಿಂ ನಕ್ಷಮಃ॥

ಇತ್ಯಾದಿ ಪದ್ಯಗಳು ಎಷ್ಟು ಸುಂದರ.

ಪೆರಿಯಾಳ್ವಾರ್ : ಆಳ್ವಾರ್ ಪರಂಪರೆಯಲ್ಲಿ ಅಧಿಕ ಗೌರವಕ್ಕೆ ಪಾತ್ರರಾದವರು ಪೆರಿಯಾಳ್ವಾರ್. ತಮಿಳುನಾಡಿನಲ್ಲಿರುವ ಶ್ರೀ ವಿಲ್ಲಿ ಪುತ್ತೂರ್ ಎಂಬ ಊರಿನಲ್ಲಿ ಇವರ ಜನ್ಮ. ಆ ಊರಿನಲ್ಲಿರುವ ಭಗವಾನ್ ನಾರಾಯಣನಿಗೆ ವಟಪತ್ರ ಶಾಯೀ ಎಂದು ಹೆಸರು. ಆಲದ ಎಲೆಯ ಮೇಲೆ ಮಗುವಾಗಿ ಮಲಗಿರುವ ಶಿಶು ಕೃಷ್ಣ ವಟಪತ್ರಶಾಯಿ. ಪೆರಿಯಾಳ್ವಾರ್ ಅವರನ್ನು ಸಂಸ್ಕೃತದಲ್ಲಿ ವಿಷ್ಣುಚಿತ್ತ ಎಂದು ಕರೆಯುತ್ತಾರೆ. ಅವರಿಗೆ ಹೂವುಗಳೆಂದರೆ, ಹೂದೋಟವೆಂದರೆ ಹೆಚ್ಚು ಪ್ರೀತಿ. ಕೃಷ್ಣನಲ್ಲಿ ಯಶೋಧೆಗೆ ಇದ್ದಂತಹ ವಾತ್ಸಲ್ಯ ಭಕ್ತಿ ಪೆರಿಯಾಳ್ವಾರ್ ಅವರದ್ದು. ಇವರು ಭಗವಂತನಿಗೆ ಅರ್ಪಿಸಿರುವ ಕೃತಿ ತಿರುಪ್ಪಲ್ಲಾಂಡು. ದಕ್ಷಿಣ ಮಧುರೆಯಲ್ಲಿ ವಲ್ಲಭದೇವನೆಂಬ ರಾಜನು ಪೆರಿಯಾಳ್ವಾರರ ವಾದವೈಖರಿಯನ್ನು ಕೇಳಿ ಅವರನ್ನು ಆನೆಯ ಮೇಲೆ ಕೂರಿಸಿ ಮೆರವಣಿಗೆ ಮಾಡಿದ್ದನಂತೆ. ಅವನು ಅವರಿಗೆ ಕೊಟ್ಟ ಬಿರುದು ಪಟ್ಟರ್ ಪಿರಾನ್. ಇವರು ಅನುಗ್ರಹಿಸಿದ ಹನ್ನೊಂದು ಪ್ರಬಂಧ ಪೆರಿಯಾಳ್ವಾರ್ ತಿರುಮೊಳಿ. ರಾಜನು ಅನೇಕ ಗೌರವಗಳನ್ನು ಅರ್ಪಿಸಿದಾಗ ಅವನ್ನೆಲ್ಲ ವಟಪತ್ರ ಶಾಯಿಗೇ ಅರ್ಪಿಸಿದ ಮಹಾನುಭಾವರು ಪೆರಿಯಾಳ್ವಾರ್.

ಆಂಡಾಳ್: ಹನ್ನೆರಡು ಜನ ಆಳ್ವಾರರಲ್ಲಿ ಒಬ್ಬ ಸ್ತ್ರೀ ಇದ್ದಾಳೆ. ಅವಳೇ ಆಂಡಾಳ್. ಅವಳು ಪೆರಿಯಾಳ್ವಾರರ ಸಾಕು ಮಗಳು. ಹೊಲವನ್ನು ಯಜ್ಞಕ್ಕಾಗಿ ಉಳುತ್ತಿದ್ದಾಗ ಜನಕಮಹಾರಾಜನಿಗೆ ಸೀತೆ ದೊರಕಿದ ಹಾಗೆ, ಮಹರ್ಷಿ ಕಣ್ವರಿಗೆ ಕಾಡಿನಲ್ಲಿ ಶಕುಂತಲೆ ಸಿಕ್ಕಿದ ಹಾಗೆ, ಹೂದೋಟದಲ್ಲಿ ವಿಷ್ಣುಚಿತ್ತ ಪೆರಿಯಾಳ್ವಾರರಿಗೆ ಸಿಕ್ಕಿದ ಮಗುವೇ ಆಂಡಾಳ್. ಆಂಡಾಳ್‌ಗೆ ಸಂಸ್ಕೃತದ ಹೆಸರು ಗೋದಾದೇವಿ. ಅವಳು ತ್ರಿಲೋಕ ಸುಂದರಿಯಂತೆ ಬೆಳಗುತ್ತಿದ್ದರೂ ಯಾವ ಮನುಷ್ಯನನ್ನೂ ವರಿಸಲಿಲ್ಲ. ಅವಳ ಸರ್ವಸ್ವವೂ ಭಗವಂತನಿಗೇ ಅರ್ಪಿತವಾಗಿತ್ತು. ತಂದೆ ಪೆರಿಯಾಳ್ವಾರ್ ಪ್ರತಿದಿನವೂ ಮಾಲೆಯನ್ನು ಕಟ್ಟಿ ಭಗವಂತನಿಗೆ ಅರ್ಪಿಸುತ್ತಿದ್ದರು. ಆಂಡಾಳ್ ಆ ಹಾರವನ್ನು ತಾನು ಧರಿಸಿ ಭಗವಂತನಿಗೆ ಅರ್ಪಿತವಾಗಲು ತಾನು ಯೋಗ್ಯಳೇ ಎಂದು ಆಲೋಚಿಸುತ್ತಿದ್ದಳು. ಒಂದು ದಿನ ಅವಳು ಮಾಲೆಯನ್ನು ಧರಿಸಿಕೊಂಡಿದ್ದನ್ನು ನೋಡಿದ ತಂದೆ ಪೆರಿಯಾಳ್ವಾರ್ ಅಪರಾಧವಾಯಿತೆಂದು ಅಂದು ಭಗವಂತನಿಗೆ ಮಾಲೆಯನ್ನು ಅರ್ಪಿಸಲೇ ಇಲ್ಲ. ಆ ರಾತ್ರಿ ಸ್ವಾಮಿವಟಪತ್ರ ಶಾಯಿ ಅವರ ಕನಸಿನಲ್ಲಿ ಕಾಣಿಸಿಕೊಂಡು 'ನಿಮ್ಮ ಮಗಳು ಧರಿಸಿಕೊಂಡು ಅರ್ಪಿಸುತ್ತಿದ್ದ ಮಾಲೆಯೇ ನನಗೆ ಪ್ರಿಯ–ಅದನ್ನೇ ನನಗೆ ಅರ್ಪಿಸಿ' ಎಂದು ಹೇಳಿದನು. ಹಾಗೆಯೇ ಅವರ ತಿರುಮಾಲೆ ಸೇವೆ ಮುಂದುವರಿಯಿತು. ಆಂಡಾಳ್ ಭಗವಂತನನ್ನೇ ತನ್ನ ಪತಿಯೆಂದು ಆರಾಧಿಸುತ್ತಿದ್ದಳು. ಮುಂದೆ ದೇವರಲ್ಲೇ ಲೀನವಾದಳು. ಅವಳ ದಿವ್ಯಕೃತಿಯೇ ತಿರುಪ್ಪಾವೈ. ಅದರ ಜೊತೆಗೆ ನಾಚ್ಚಿಯಾರ್ ತಿರುಮೊಳಿಯನ್ನೂ ಆಂಡಾಳ್ ರಚಿಸಿದಳು. ತಿರುಪ್ಪಾವೈಗೆ ಸಮಾನವಾದ ಭಕ್ತಿಕಾವ್ಯ ಇನ್ನೊಂದಿಲ್ಲವೆಂದು ತಮಿಳು ಭಾಷೆಯನ್ನು ತಿಳಿದವರು ಹೇಳುತ್ತಾರೆ.

ತೊಂಡರಡಿಪ್ಪೊಡಿಯಾಳ್ವಾರ್. ಈ ಆಳ್ವಾರರ ಕಥೆ ಸುಪ್ರಸಿದ್ಧ. ತೊಂಡರು ಎಂದರೆ ಭಕ್ತರು. ಅವರ ಅಡಿಗಳ, ಎಂದರೆ ಪಾದಗಳ ಧೂಳಿನ ಕಣ ಎಂದು ತೊಂಡರಡಿಪ್ಪೊಡಿ ಎಂಬ ಪದದ ಅರ್ಥ. ಇವರನ್ನು ಸಂಸ್ಕೃತ ಭಾಷೆಯಲ್ಲಿ ಭಕ್ತಾಂಘ್ರಿರೇಣು ಎಂದು ಕರೆಯುತ್ತಾರೆ. ಇವರು ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರು. ಇವರನ್ನು ವಿಪ್ರ ನಾರಾಯಣ ಎಂದೂ ಕರೆಯುತ್ತಾರೆ. ಶ್ರೀರಂಗದಲ್ಲಿ ರಂಗನಾಥ ಸ್ವಾಮಿಗೆ ಮಾಲಾಕೈಂಕರ್ಯವನ್ನು ಮಾಡುತ್ತಿದ್ದ ಮಹಾನುಭಾವರು. ಇವರಿಗೆ ಜನರು ತುಂಬ ಗೌರವಿಸುತ್ತಿದ್ದರು. ಇವರನ್ನು ಸೋಲಿಸಿ ತನ್ನ ದಾಸನನ್ನಾಗಿ ಮಾಡಿಕೊಳ್ಳುತ್ತೇನೆಂದು ಪ್ರತಿಜ್ಞೆ ಮಾಡಿದ ಒಬ್ಬ ದೇವದಾಸಿ ಮೋಹ ಪಾಶದಿಂದ ಇವರನ್ನು ಕಟ್ಟಿ ಹಾಕುವುದರಲ್ಲಿ ಸಫಲಳಾಗುತ್ತಾಳೆ. ಇದರಿಂದ ವಿಪ್ರನಾರಾಯಣರು ಲೋಕನಿಂದೆಗೂ ಪಾತ್ರರಾಗುತ್ತಾರೆ. ಆಮೇಲೆ ಜ್ಞಾನೋದಯವಾಗಿ ಅವಳನ್ನು ತ್ಯಜಿಸಿ ಭಗವತ್ ಕೈಂಕರ್ಯದಲ್ಲಿ ಸಂಪೂರ್ಣವಾಗಿ ತೊಡಗುತ್ತಾರೆ. ತಿರುಮಾಲೈ, ತಿರುಪ್ಪಳ್ಳಿ ಎಳುಚ್ಚಿ ಎಂಬವು ಅವರ ಪ್ರಬಂಧಗಳು. ಇವರ ವಿಷಯದಲ್ಲಿ ಹಿಂದೆ ತೆಲುಗು ಭಾಷೆಯಲ್ಲಿ 'ವಿಪ್ರನಾರಾಯಣ' ಎಂಬ ಚಲನಚಿತ್ರ ನಿರ್ಮಿತವಾಗಿತ್ತು. ವಿಪ್ರನಾರಾಯಣನ ಪಾತ್ರದಲ್ಲಿ ಎ.ನಾಗೇಶ್ವರರಾವ್ ಅಮೋಘ ಅಭಿನಯ ಮಾಡಿದ್ದರು. ದೇವದಾಸಿಯ ಪಾತ್ರದಲ್ಲಿ ಭಾನುಮತಿ ಮಿಂಚಿದ್ದರು.

ತಮೇವ ಮತ್ವಾ ಪರವಾಸುದೇವಂ
ರಂಗೇಶಯಂ ರಾಜವದರ್ಹಣೀಯಮ್ ।
ಪ್ರಾಬೋಧಿಕೀಂ ಯೋಕೃತ ಸೂಕ್ತಿಮಾಲಾಂ
ಭಕ್ತಾಂಘ್ರಿರೇಣುಂ ಭಗವಂತಮೀಡೇ॥

ಮಿಕ್ಕ ಆಳ್ವಾರರ ವಿಚಾರವನ್ನು ಮುಂದಿನ ಲೇಖನದಲ್ಲಿ ನೋಡೋಣ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಡಿಗೆ ಅನಿಲ ದರ ಏರಿಕೆ;ಕೇಂದ್ರದ ವಿರುದ್ಧ ಡಿಸಿಎಂ ಡಿಕೆಶಿ ವಾಗ್ದಾಳಿ



ಸಂಸತ್ ಅಧಿವೇಶನದಲ್ಲಿ ಈ ವಿಚಾರ ಕುರಿತು ಕೇಂದ್ರ ಸರ್ಕಾರ ಚರ್ಚೆ ಮಾಡಬೇಕು. ಆದರೆ, ಅವಕಾಶ ನೀಡುತ್ತಿಲ್ಲ. ಇದನ್ನು ಖಂಡಿಸಿ ಇಂಡಿಯಾ ಒಕ್ಕೂಟದ ಪ್ರತಿನಿಧಿಗಳು ಪ್ರತಿಭಟನೆ ಮಾಡುತ್ತಿದ್ದಾರೆ.
–ಡಿ.ಕೆ.ಶಿವಕುಮಾರ್, ಡಿಸಿಎಂ

ಬೆಂಗಳೂರು, ಮಾ.10(ಕೆಎಂಶಿ)– ಅಂತರರಾಷ್ಟ್ರೀಯ ಮಹಿಳಾ ದಿನ ದಂದೇ ಅಡುಗೆ ಅನಿಲ (ಎಲ್‌ಪಿಜಿ) ಸಿಲಿಂಡರ್ ಬೆಲೆ 60 ರೂ. ಏರಿಕೆ ಮಾಡಿರುವ ಕೇಂದ್ರ ಸರ್ಕಾರದ ಕ್ರಮದ ಕುರಿತು ಬಿಜೆಪಿ ಸಂಸದರು ಮಾತನಾಡಲಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿ ಸಂಸದರು ಎಲ್ಲಾದಕ್ಕೂ ಬಹಳ ವಿಚಿತ್ರವಾಗಿ ದನಿ ಎತ್ತುತ್ತಾರೆ. ಇದರ ಬಗ್ಗೆಯೂ ಮಾತನಾಡಲಿ. ಚರ್ಚೆ ನಡೆಸಲು ಕೇಂದ್ರ ಸರ್ಕಾರಕ್ಕೆ ಏಕೆ ಭಯ, ಇದರಲ್ಲಿ ಸರ್ಕಾರದ ವೈಫಲ್ಯ ಎದ್ದು ಕಾಣುತ್ತದೆ ಎಂದರು.

ಅನಿಲ ಸಿಲಿಂಡರ್ ದರ ಏರಿಕೆಯಿಂದ ಹೋಟೆಲ್ ಹಾಗೂ ಇತರೇ ಉದ್ದಿಮೆಗಳು ತೊಂದರೆಗೊಳಗಾಗಿವೆ. ಇದರ ಬಗ್ಗೆ ದನಿ ಎತ್ತುವುದು ನಮ್ಮ ಕರ್ತವ್ಯ. ಕೋಟ್ಯಾಂತರ ಮಹಿಳೆಯರ ಮೇಲೆ ಪರಿಣಾಮ ಬೀರಿದೆ. ಇರಾನ್ ಮೇಲೆ ಅಮೆರಿಕ–ಇಸ್ರೇಲ್ ಯುದ್ಧದ ಪರಿಣಾಮ ಸೌದಿ ಅರೇಬಿಯಾ ಸೇರಿದಂತೆ ಕೊಲ್ಲಿ ರಾಷ್ಟ್ರಗಳಲ್ಲಿನ ಭಾರತೀಯ ಉದ್ಯಮಿಗಳು, ಕಾರ್ಮಿಕರ ಮೇಲೆ ಪರಿಣಾಮ ಬೀರಿದೆ ಎಂದರು.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಮೇಕೆದಾಟು, ಎತ್ತಿನಹೊಳೆ ಬಗ್ಗೆ ಮಾತನಾಡುತ್ತಾರೆ. ಆದರೆ, ಅವರ ಪಕ್ಷದ ಸಂಸದರು ಲೋಕಸಭೆಯಲ್ಲಿ ಮಾತನಾಡುವಂತೆ ಹೇಳಲಿ. ಈ ವಯಸ್ಸಿನಲ್ಲಿ ಅವರ ಮೇಲೆ ವಾಗ್ದಾಳಿ ಮಾಡುವುದು ಸರಿಯಲ್ಲ. ನನಗೆ ಇಷ್ಟವೂ ಇಲ್ಲ. ಅವರ ಮನಸ್ಸು ನೋಯಿಸುವುದು ಬೇಡ ಎಂದುಕೊಂಡಿರುವೆ. ಅವರೇ ಇವುಗಳಿಗೆ ಪರಿಹಾರ ಸೂಚಿಸಲಿ. ಅದೇ ರೀತಿ ಅವರ ಪಕ್ಷದ ಸದಸ್ಯರುಗಳಿಗೆ ವಿಧಾನಸಭೆಯಲ್ಲಿ ಮಾತನಾಡಲು ಹೇಳಲಿ. ಆಗ ನಾನು ನಮ್ಮ ಕಾಲದಲ್ಲಿ ಏನೇನು ಆಗಿದೆ ಎಂದು ಹೇಳುತ್ತೇನೆ.

ಕೈಗಾರಿಕಾ ಕ್ಷೇತ್ರದ ಸಮಸ್ಯೆ ನಿವಾರಣೆಗೆ ಜಂಟಿ ಸಮಾಲೋಚನಾ ಸಮಿತಿ ರಚನೆ

● ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ ● ಉನ್ನತ ಅಧಿಕಾರಿಗಳು, ಖಾಸಗಿ ಉದ್ಯಮಿಗಳ ಇದು ಒಳಗೊಂಡಿರಲಿದೆ

ಬೆಂಗಳೂರು, ಮಾ.10(ಕೆಎಂಶಿ)– ಕೈಗಾರಿಕಾ ಕ್ಷೇತ್ರದ ಸಮಸ್ಯೆ ತ್ವರಿತ ಪರಿಹಾರ ಕಾಣಲು ಹಾಗೂ ಸುಲಲಿತ ಕೈಗಾರಿಕಾ ಸಂಸ್ಕೃತಿಗೆ ಮತ್ತಷ್ಟು ಬಲ ತುಂಬುವ ಉದ್ದೇಶದಿಂದ ಉನ್ನತ ಅಧಿಕಾರಿ ಮತ್ತು ಖಾಸಗಿ ಉದ್ಯಮಿಗಳನ್ನು ಒಳಗೊಂಡ ಜಂಟಿ ಸಮಾಲೋಚನಾ ಸಮಿತಿ ರಚಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ರಾಜ್ಯ ಶಾಖೆಯ ವಾರ್ಷಿಕ ಸಭೆಯಲ್ಲಿ ಮಾತನಾಡಿದ ಅವರು, ಕೈಗಾರಿಕಾ ವಲಯದಲ್ಲಿ ಕಂಡುಬರುವ ಸಮಸ್ಯೆಗಳಿಗೆ ಕ್ಷಿಪ್ರವಾಗಿ ಪರಿಹಾರೋಪಾಯ ಕಂಡುಕೊಳ್ಳಲು ಕೇರಳದಲ್ಲಿ ಸರ್ಕಾರದ ಮುಖ್ಯಕಾರ್ಯದರ್ಶಿ ಮತ್ತು ಉದ್ಯಮಿಗಳ ವೇದಿಕೆ ಇದ್ದು, ಅತ್ಯುತ್ತಮವಾಗಿ ಕೆಲಸ ಮಾಡುತ್ತಿದೆ ಎಂದರು.



ಬೆಂಗಳೂರಿನಲ್ಲಿ ಮಂಗಳವಾರ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ರಾಜ್ಯ ಶಾಖೆಯ ವಾರ್ಷಿಕ ಸಭೆ ನಡೆಯಿತು.

ಐಟಿ ಮತ್ತು ಆಧುನಿಕ ಉತ್ಪಾದನೆ ಉತ್ತೇಜಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಡಾಬಸ್‌ಪೇಟೆ–ದೊಡ್ಡಬಳ್ಳಾಪುರ ಸಮೀಪ ಅಸ್ತಿತ್ವಕ್ಕೆ ಬರುತ್ತಿರುವ ಕ್ವಿನ್‌ಸಿಟಿಯ 200 ಎಕರೆ ಜಾಗದಲ್ಲಿ ಸೆಮಿಕಂಡಕ್ಟರ್ ಪಾರ್ಕ್ ಸ್ಥಾಪಿಸಲಾಗುವುದು. ಇದರ ಮೊದಲ ಹಂತ ಡಿಸೆಂಬರ್ ವೇಳೆಗೆ ಪೂರ್ಣಗೊಳ್ಳಲಿದೆ. ಅಲ್ಲದೆ ಹೆಸರಘಟ್ಟ ಸಮೀಪ ಭಾರತದ ಪ್ರಪ್ರಥಮ ಕ್ವಾಂಟಂ ಸಿಟಿ, ಬಿಡದಿ ಬಳಿ 'ಎಐ ಸಿಟಿ' ಅಭಿವೃದ್ಧಿಪಡಿಸಲಾಗುವುದು. ಸದ್ಯಕ್ಕೆ ಭಾರತ ಎಐ ಕ್ಷೇತ್ರದಲ್ಲಿ 200 ಬಿಲಿಯನ್ ಡಾಲರ್‌ಗೂ ಹೆಚ್ಚು ಮೌಲ್ಯದ ವಹಿವಾಟು ನಡೆಸುತ್ತಿದ್ದು, ಇದರಲ್ಲಿ ಕರ್ನಾಟಕ ಸಿಂಹಪಾಲಿನ ಕೊಡುಗೆ ನೀಡುತ್ತಿದೆ. –ಎಂ.ಬಿ.ಪಾಟೀಲ್


ಇದನ್ನು ನಮ್ಮಲ್ಲೂ ಅಳವಡಿಸಿಕೊಳ್ಳಲಾಗುವುದು. ಕೈಗಾರಿಕೆಗಳ ಬೆಳವಣಿಗೆಗೆ ಬೇಕಾದ ರಚನಾತ್ಮಕ ಕ್ರಮಗಳು ಎಲ್ಲೇ ಇದ್ದರೂ ಅವುಗಳನ್ನು ನಮ್ಮದನ್ನಾಗಿಸಿಕೊಳ್ಳಲು ಮುಕ್ತ ಮನಸ್ಸಿದೆ. ರಾಜ್ಯದಲ್ಲಿ ಈಗಾಗಲೇ ದಕ್ಷ ಕೈಗಾರಿಕಾ ನೀತಿ, ಇಂಧನ ನೀತಿ, ಏಕಗವಾಕ್ಷಿ ವ್ಯವಸ್ಥೆ, ಚಾಟ್–ಬಾಟ್, ಏಕೀಕೃತ ಸೇವೆಗಳ ಜಾಲ ಸೇರಿದಂತೆ ಇನ್ನಿತರೆ ಉಪಕ್ರಮಗಳನ್ನು ಜಾರಿಗೆ ತರಲಾಗಿದೆ ಎಂದರು.

ರಾಜ್ಯ ಕೈಗಾರಿಕಾ ಬೆಳವಣಿಗೆಯಲ್ಲಿ ಅಗ್ರಪಂಕ್ತಿಯಲ್ಲಿ ಇರುವಂತೆ ನೋಡಿಕೊಳ್ಳಲು ಅಗತ್ಯ ಕ್ರಮಗಳನ್ನು ವಿಳಂಬ ಮಾಡದೆ ಜಾರಿಗೆ ತರಲಾಗುವುದು. ಸುಲಲಿತ ವಾಣಿಜ್ಯ ವಹಿವಾಟಿನ ಜೊತೆಗೆ ನಾವೀನ್ಯತೆಯ ವೇಗಕ್ಕೂ (ಸ್ಪೀಡ್ ಆಫ್ ಇನ್ನೋವೇಶನ್) ಆದ್ಯತೆ ಕೊಟ್ಟಿದ್ದೇವೆ.

ಕೃತಕ ಬುದ್ಧಿಮತ್ತೆ ಕ್ಷೇತ್ರದ ಉತ್ತೇಜನಕ್ಕೆ ಸರ್ಕಾರವು 1,386 ಕೋಟಿ ರೂ. ವೆಚ್ಚದಲ್ಲಿ 'ಕೆ–ಕ್ವೆಸ್ಟ್' ಯೋಜನೆ ಮತ್ತು 233 ಕೋಟಿ ರೂ. ವೆಚ್ಚದಲ್ಲಿ ವಿಜ್ಞಾನ ನಗರ ಯೋಜನೆಯನ್ನು 2026–27ರ ಬಜೆಟ್‌ನಲ್ಲಿ ಘೋಷಿಸಿದೆ. ಜೊತೆಗೆ 'ಕ್ಯಾಟ್ಸ್' (ಸೆಂಟರ್ ಫಾರ್ ಅಪ್ಲೈಡ್ ಎಐ ಫಾರ್ ಟೆಕ್–ಸಲ್ಯೂಷನ್ಸ್) ಸಂಸ್ಥೆಗೆ 50 ಕೋಟಿ ರೂ. ನೀಡಲಾಗುತ್ತಿದೆ. ಇದಕ್ಕೆ ಪೂರಕವಾಗಿ ಬೆಂಗಳೂರಿನಲ್ಲಿನ ಕೆಐಎಡಿಬಿ ಏರೋಸ್ಪೇಸ್ ಪಾರ್ಕ್ ಪ್ರದೇಶದಲ್ಲಿ ಏರೋಸ್ಪೇಸ್ ಕಾಮನ್ ಫೆಸಿಲಿಟಿ ಸೆಂಟರ್ ಸ್ಥಾಪಿಸಲಾಗುತ್ತಿದೆ ಎಂದು ಬೃಹತ್–ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹೇಳಿದರು.

ವಾರದಲ್ಲಿ ಇಂಧನ ಸಮಸ್ಯೆ ನಿವಾರಣೆ

ಸಂಸದ ಬಸವರಾಜ ಬೊಮ್ಮಾಯಿ ವಿಶ್ವಾಸ



ಬೆಂಗಳೂರು, ಮಾ.10(ಕೆಎಂಶಿ)– ದೇಶದಲ್ಲಿ ಪೆಟ್ರೋಲ್, ಡೀಸೆಲ್ ಸಮಸ್ಯೆ ಇಲ್ಲ. ಎಲ್‌ಪಿಜಿ ಗಲ್ಫ್ ದೇಶಗಳಿಂದ ಆಮದು ಸ್ಥಗಿತಗೊಂಡಿದ್ದು, ಮುಂದಿನ ಒಂದು ವಾರದಲ್ಲಿ ಬಹುತೇಕ ಸಮಸ್ಯೆ ಪರಿಹಾರವಾಗಲಿದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಇಂದಿಲ್ಲಿ ತಿಳಿಸಿದ್ದಾರೆ.

ದೆಹಲಿಯಲ್ಲಿ ಖಾಸಗಿ ಸುದ್ದಿ ಸಂಸ್ಥೆಯೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಆಂತರಿಕ ಉತ್ಪಾದನೆ ಹೆಚ್ಚಳ ಮಾಡಬೇಕಾಗುತ್ತದೆ, ಲಾಜೆಸ್ಟಿಕ್ಸ್ ಹೆಚ್ಚಿಸಬೇಕು. ಕೇಂದ್ರ ಸರ್ಕಾರ ನಿರಂತರ ಶ್ರಮ ವಹಿಸಿದೆ. ನಮ್ಮ ದೇಶದ ಮೂರು ಹಡಗುಗಳಿಗೆ ಇರಾನ್ ಅವಕಾಶ ಕಲ್ಪಿಸಿದೆ ಎಂದರು.

ಇದು ಪ್ರಧಾನಮಂತ್ರಿ ನರೇಂದ್ರ ಮೋದಿ ಸರ್ಕಾರದ ಸಕಾರಾತ್ಮಕ ಕಾರ್ಯಕ್ರಮದ ಪರಿಣಾಮವಾಗಿದೆ. ಈ ಕಾರಣದಿಂದ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಏರಿಕೆ ಆಗಿಲ್ಲ. ಎಲ್‌ಪಿಜಿ ಸಮಸ್ಯೆ ಇದೆ. ಪ್ರತಿಪಕ್ಷದವರು ದೇಶದ ಯಾವುದೇ ಭಾಗದಲ್ಲಿ ಏನೇ ನಡೆದರೂ, ನಾಯಿ ಕಚ್ಚಿದರೂ ಮೋದಿ ಅವರನ್ನೇ ದೂಷಿಸುತ್ತಾರೆ. ಅವರ ಮನಃಸ್ಥಿತಿ ಅಷ್ಟು ಕೆಟ್ಟಿದೆ.

ದೇಶದ ಬಗ್ಗೆ ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಎಂದಿಗೂ ಚಿಂತನೆ ಮಾಡಿಲ್ಲ. ಇಡಿ ಜಗತ್ತು ಚಿಂತೆಯಲ್ಲಿದೆ. ಬೇರೆ ದೇಶಗಳಲ್ಲಿ ಏನಾಗುತ್ತಿದೆ ಎಂಬ ಕನಿಷ್ಠ ಅರಿವು ಇರಬೇಕು. ಭಾರತದಲ್ಲಿ ಇತರೆ ದೇಶಗಳಿಗಿಂತ ಉತ್ತಮ ಪರಿಸ್ಥಿತಿ ಇದೆ. ಪ್ರತಿಪಕ್ಷಗಳಿಗೆ ಎಲ್ಲ ವಿಷಯದಲ್ಲೂ ರಾಜಕಾರಣ ಮಾಡಬೇಕು. ದೇಶದ ಅಭಿವೃದ್ಧಿ, ಸಂಕಷ್ಟದಲ್ಲೂ ರಾಜಕಾರಣ ಬಯಸುತ್ತಾರೆ ಎಂದು ಟೀಕಿಸಿದರು.

ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕಿನಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ...



ಮೈಸೂರು ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕಿನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು. ಈ ವೇಳೆ ಬ್ಯಾಂಕಿನ ಉಪಾಧ್ಯಕ್ಷೆ ಶ್ರೀಮತಿ ಸರ್ವಮಂಗಳ, ಪ್ರಭಾರ ವ್ಯವಸ್ಥಾಪಕಿ ಶ್ರೀಮತಿ ಶಾಂತಲ, ಹಿರಿಯ ಸಹಾಯಕಿ ಶ್ರೀಮತಿ ಶೈಲಾಕುಮಾರಿ, ಕಿರಿಯ ಸಹಾಯಕಿ ಶ್ರೀಮತಿ ಲತಾಮಣಿ ಅವರನ್ನು ಬ್ಯಾಂಕಿನ ಅಧ್ಯಕ್ಷ ಡಿ.ಬಸವರಾಜು ಸನ್ಮಾನಿಸಿದರು. ಈ ವೇಳೆ ನಿರ್ದೇಶಕರಾದ ಡಿ.ಪಾರ್ಥಸಾರಥಿ, ಹೆಚ್.ವಿ.ಭಾಸ್ಕರ್, ಅರುಣ್ ಸಿದ್ದಪ್ಪ ಹಾಗೂ ನೌಕರರು ಉಪಸ್ಥಿತರಿದ್ದರು.

ಕ್ರಿಮಿನಲ್ ಪ್ರಕರಣವೊಂದರ ವಿಚಾರಣೆ

ಎಂಡಿಎ ವ್ಯವಸ್ಥಾಪಕಿ ಬಿ.ಶೃತಿ ಮಾತೃ ಇಲಾಖೆಗೆ ನಿಯೋಜನೆ

ಮೈಸೂರು,ಮಾ.10(ಎಂಕೆ)–ಕ್ರಿಮಿನಲ್ ಪ್ರಕರಣವೊಂದರ ವಿಚಾರಣೆ ಹಿನ್ನೆಲೆಯಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಎಂಡಿಎ)ವ್ಯವಸ್ಥಾಪಕಿ ಬಿ.ಶೃತಿ ಅವರ ಪ್ರತಿ ನಿಯೋಜನೆಯನ್ನು ಹಿಂಪಡೆದು, ಮಾತೃ ಇಲಾಖೆಗೆ ಹಿಂದಿರುಗಿಸುವಂತೆ ಪ್ರಾದೇಶಿಕ ಆಯುಕ್ತರ ಕಾರ್ಯಾಲಯ ಅಧಿಕೃತ ಜ್ಞಾಪನ ಪತ್ರ ಹೊರಡಿಸಿದೆ.



ಬಿ.ಶೃತಿ

ನೌಕರರ ಸ್ವಯಂ ಕೋರಿಕೆ ಮೇರೆಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವ್ಯವಸ್ಥಾಪಕಿ ಹುದ್ದೆಗೆ ಪ್ರತಿ ನಿಯೋಜನೆಗೊಂಡಿದ್ದ ಬಿ.ಶೃತಿ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳದ ಕ್ರಿಮಿನಲ್ ಪ್ರಕರಣದ ವಿಚಾರಣೆ ಹಿನ್ನೆಲೆಯಲ್ಲಿ ಸಾರ್ವಜನಿಕ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಪ್ರತಿ ನಿಯೋಜನೆ ರದ್ದುಪಡಿಸಿ, ಮಾತೃ ಇಲಾಖೆಗೆ ಹಿಂಪಡೆದು ಸರ್ಕಾರ ಆದೇಶಿಸಿತ್ತು. ಆದರೆ, ಬಾಕಿ ಇರುವ ಸರ್ಕಾರಿ ಕೆಲಸಗಳನ್ನ ಪೂರೈಸುವ ದೃಷ್ಟಿಯಿಂದ ಎಂಡಿಎ ಬಿ.ಶೃತಿ ಅವರನ್ನ ಬಿಡುಗಡೆ ಮಾಡದೆ ಉಳಿಸಿಕೊಂಡಿತ್ತು.

ಕ್ರಿಮಿನಲ್ ಪ್ರಕರಣದ ಆರೋಪವನ್ನು ಗಂಭೀರವಾಗಿ ಪರಿಗಣಿಸಿರುವ ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಬಿ.ಶೃತಿ ಅವರನ್ನ ಸೇವೆಯಿಂದ ಬಿಡುಗಡೆ ಮಾಡಿ ಮಾತೃ ಇಲಾಖೆಗೆ ಹಿಂದಿರುಗುವಂತೆ ಆದೇಶಿಸಿದೆ. ಪ್ರಾದೇಶಿಕ ಆಯುಕ್ತರ ಕಾರ್ಯಾಲಯದಿಂದ ಆದೇಶ ಪತ್ರ ರವಾನೆಯಾಗಿ 5 ದಿನ ಕಳೆದರೂ ಬಿಡುಗಡೆ ಮಾಡಲು ಮೀನಾಮೇಷ ಎಣಿಸುತ್ತಿದ್ದರಿಂದ ಎಂಡಿಎ ಆಯುಕ್ತರಿಗೆ ಅಧಿಕೃತ ಜ್ಞಾಪನಾ ಪತ್ರ ಬರೆದಿರುವ ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಬಿ.ಶೃತಿ ಅವರನ್ನು ಬಿಡುಗಡೆ ಮಾಡುವಂತೆ ಸೂಚನೆ ನೀಡಿದೆ.

ಪೈಲ್ಸ್, ಪಿಸ್ತುಲಾ, ಫಿಷರ್ ನಿರ್ಲಕ್ಷಿಸಿದರೆ ಅಪಾಯಕಾರಿ: ತಜ್ಞ ವೈದ್ಯರ ಎಚ್ಚರಿಕೆ

ಮೈಸೂರು, ಮಾ.10(ಜಿಎ)–ಇತ್ತೀಚಿನ ದಿನಗಳಲ್ಲಿ ಪೈಲ್ಸ್, ಪಿಸ್ತುಲಾ, ಫಿಷರ್ ಬಹಳಷ್ಟು ಜನರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಈ ಸಮಸ್ಯೆ ಬಗ್ಗೆ ಇತರರ ಬಳಿ ಮಾತನಾಡಲು, ವೈದ್ಯರ ಸಲಹೆ ಪಡೆಯಲು ಸಂಕೋಚ ತೋರುವುದರ ಕಾರಣ ಅದು ಕ್ಯಾನ್ಸರ್ ರೂಪಕ್ಕೆ ತಿರುಗಬಹುದಾದ ಅಪಾಯವಿದೆ ಎಂದು ಹಿರಿಯ ತಜ್ಞ ವೈದ್ಯ ಡಾ.ಸಿ.ಎಂ.ಪರಮೇಶ್ವರ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಿಸ್ತುಲಾ ಸಾಮಾನ್ಯ ಕಾಯಿಲೆ ಎಂದು ಬಹಳಷ್ಟು ಜನರು ಭಾವಿಸಿ ನಿರ್ಲಕ್ಷಿಸುವುದು ಕ್ಯಾನ್ಸರ್‌ನಂತಹ ದೊಡ್ಡ ಸಮಸ್ಯೆಗೆ ಕಾರಣವಾಗಬಹುದಾಗಿದೆ. ಇನ್ನು, ಜಾಗತೀಕರಣದ ನಂತರ ನಮ್ಮ ಊಟ–ತಿಂಡಿಯಲ್ಲಿ ಸಾಕಷ್ಟು ಬದಲಾವಣೆ ಆಗಿದೆ. ಕೆಲಸ ಮಾಡುವ ವಿಧಾನವೂ ಮಾರ್ಪಾಡಾಗಿದೆ. ಪಾಶ್ಚಾತ್ಯ ಆಹಾರಗಳಾದ ಫಿಜ್ಜಾ, ಬರ್ಗರ್, ಪಾಸ್ತಾ ಮೊದಲಾದವುಗಳ ಬಳಕೆ ಹೆಚ್ಚಾಗಿದೆ. ಐಟಿ, ಬಿಟಿಯಲ್ಲಿ ಕೆಲಸ ಮಾಡುವವರು ಕುಳಿತೇ ಹೆಚ್ಚು ಸಮಯ ಕಳೆಯಬೇಕಾಗುತ್ತಿದೆ. ಇನ್ನಿತರ ಕಾರಣಗಳಿಂದಾಗಿ ಪೈಲ್ಸ್, ಫಿಷರ್, ಪಿಸ್ತುಲಾಗಳಿಂದ ಬಳಲುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಆದರೆ ಇದನ್ನು ನಿರ್ಲಕ್ಷಿಸದೇ ಸೂಕ್ತ ಸಮಯಕ್ಕೆ ಚಿಕಿತ್ಸೆ ಪಡೆಯದಿದ್ದಲ್ಲಿ ಅಪಾಯ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಸಿದರು.

ಈ ರೀತಿಯ ಸಮಸ್ಯೆ ಎದುರಿಸುತ್ತಿರುವವರು ನುರಿತ ವೈದ್ಯರ ಸಲಹೆ ಪಡೆಯದೇ ನಕಲಿ ವೈದ್ಯರ ಬಳಿಗೆ ಹೋಗುವುದು ರೂಢಿಯಲ್ಲಿದೆ. ಇವರಿಂದಾಗಿ ಅನೇಕರು ವಾಸಿ ಮಾಡಿಕೊಳ್ಳಲಾಗದೇ ಇನ್ನಿತರ ಗಂಭೀರ ಸಮಸ್ಯೆ ಎದುರಿಸುವ ಸಾಧ್ಯತೆಗಳು ಹೆಚ್ಚಾಗಿವೆ. ಆದ್ದರಿಂದ ಸರ್ಕಾರ ನಕಲಿ ವೈದ್ಯರಿಗೆ ಕಡಿವಾಣ ಹಾಕಬೇಕು. ಜೊತೆಗೆ ಜನತೆ ಸಂಕೋಚ ಪಡದೇ ಸಕಾಲದಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಬೇಕೆಂದು ಡಾ.ಸಿ.ಎಂ. ಪರಮೇಶ್ವರ್ ಕಿವಿಮಾತು ಹೇಳಿದರು.

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮಾ. 10– ಮೈಸೂರಿನ ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮಾ. 12 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಒಂದು ತಿಂಗಳಿಗೂ ಮೇಲ್ಪಟ್ಟ ವಾಸಿಯಾಗದ ಗಾಯ, ರಕ್ತಸ್ರಾವ, ಊತ, ಗಡಸುತನ, ನುಂಗುವಾಗಿನ ತೊಂದರೆ, ಗಂಟಲಲ್ಲಿ ಉರಿತ ಅಥವಾ ತಡೆತ, ಧ್ವನಿ ಬದಲಾವಣೆ ಇರುವ ರೋಗಿಗಳು ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.0821–4259259 ಸಂಪರ್ಕಿಸಬಹುದು.


ವಿಶೇಷಚೇತನ ಬಾಲಕ ನಾಪತ್ತೆ



ಮೈಸೂರು, ಮಾ.10–ಶಾಲೆಗೆಂದು ಮನೆಯಿಂದ ಹೊರ ಹೋದ ವಿಶೇಷ ಚೇತನ ಬಾಲಕ ಮನೆಗೆ ಹಿಂತಿರುಗದೆ ಮೈಸೂರಿನ ಜನತಾನಗರದಿಂದ ನಾಪತ್ತೆಯಾಗಿದ್ದಾನೆ. ಜನತಾನಗರದ ಶಂಕರ್ ಲಮಾಣಿ ಮತ್ತು ಸರೋಜ ಲಮಾಣಿ ದಂಪತಿಯ ಪುತ್ರ ಶಶಾಂಕ್ ಲಮಾಣಿ ಫೆ.26ರಂದು ಶಾಲೆ ಗೆಂದು ಮನೆಯಿಂದ ಹೋದವನು ಕಾಣೆಯಾಗಿದ್ದಾನೆ.

ಈತನ ವಯಸ್ಸು 17 ವರ್ಷ, ಎತ್ತರ 4 ಅಡಿ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಕಪ್ಪು ತಲೆಗೂದಲು, ಮೈಮೇಲೆ ಸುಟ್ಟ ಗಾಯದ ಗುರುತುಗಳು ಉಳ್ಳವರಾಗಿದ್ದು, ಕನ್ನಡ ಭಾಷೆ ಮಾತನಾಡುತ್ತಾರೆ. ಇವರು ವಿಶೇಷ ಚೇತನರಾಗಿದ್ದು, ಕಿವಿ ಕೇಳಿಸುವುದಿಲ್ಲ, ಸ್ಪಷ್ಟವಾಗಿ ಮಾತನಾಡಲು ಬರಲ್ಲ. ಕಾಣೆಯಾದ ವೇಳೆ ಕಡುನೀಲಿ ಬಣ್ಣದ ಪ್ಯಾಂಟ್ ಹಾಗೂ ನೀಲಿ ಬಣ್ಣದ ಶರ್ಟ್ ಧರಿಸಿರುತ್ತಾರೆ. ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಸರಸ್ವತಿಪುರಂ ಪೊಲೀಸ್ ಠಾಣೆಯ ದೂರವಾಣಿ: 8904144677, 9901973589 ಮೂಲಕ ಮಾಹಿತಿ ನೀಡುವಂತೆ ಪ್ರಕಟಣೆ ಕೋರಿದೆ.

ದೊಡ್ಡ ಮೂಡಲಗೂಡು ಬಾಲಕ ನಾಪತ್ತೆ



ಮೈಸೂರು: ದೊಡ್ಡ ಮೂಡಲಗೂಡು ಗ್ರಾಮದ ಡಿ.ಸಿ.ಜಯರಾಮು ಮಗ ಡಿ.ಜೆ ವೇಣುಕುಮಾರ್ ಗೌಡ ಎಂಬ ಬಾಲಕ ಮಾ.2ರಂದು ಕಾಣೆಯಾಗಿದ್ದು, ಬನ್ನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 15 ವರ್ಷ ವಯಸ್ಸಾಗಿದ್ದು, 145 ಸೆಂ.ಮೀ ಎತ್ತರ, ಗೋದಿ ಮೈಬಣ್ಣ, ಕೋಲು ಮುಖ, ಎತ್ತರವಾದ ಮೈಕಟ್ಟು, ಕಾಣೆಯಾದ ಸಂದರ್ಭದಲ್ಲಿ ನೀಲಿ ಬಣ್ಣದ ಟೀ ಶರ್ಟ್ ಹಾಗೂ ಹಳದಿ ಬಣ್ಣದ ಬರ್ಮುಡ ಚಡ್ಡಿ ದರಿಸಿರುತ್ತಾನೆ. ಕನ್ನಡ ಮತ್ತು ಇಂಗ್ಲೀಷ್ ಮಾತನಾಡುತ್ತಾನೆ. ಈ ಬಾಲಕನ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಬನ್ನೂರು ಪೊಲೀಸ್ ಠಾಣೆಗೆ ಹಾಗೂ ನಿಯಂತ್ರಣ ಕೊಠಡಿ ದೂ.ಸಂಖ್ಯೆ 08227–275632, 08211–226249, 0821–2520040, 05212445168ಗೆ ಕರೆ ಮಾಡಿ ಮಾಹಿತಿ ನೀಡಬೇಕಾಗಿ ಬನ್ನೂರು ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಲನಹಳ್ಳಿ ಕೃಷ್ಣ ಅವರ 'ಸಮಗ್ರ ಕಥೆಗಳು' ಸಂಕಲನ ಬಿಡುಗಡೆ

ಒಡನಾಡಿಯ ಕಥೆಗಳ ಗುಚ್ಛ ಅನಾವರಣಗೊಳಿಸಿ ಸವಿನೆನಪು ಮೆಲುಕು ಹಾಕಿದ ದೇಮ


ಮೈಸೂರು, ಮಾ.10– ಪ್ರಸಿದ್ಧ ಸಾಹಿತಿ ದಿವಂಗತ ಶ್ರೀಕೃಷ್ಣ ಆಲನಹಳ್ಳಿ ಅವರ 'ಸಮಗ್ರ ಕಥೆಗಳು' ಸಂಕಲನವನ್ನು ಹಿರಿಯ ಸಾಹಿತಿ ದೇವನೂರು ಮಹಾದೇವ ಅವರು ತಮ್ಮ ಮೈಸೂರು ನಿವಾಸದಲ್ಲಿ ಬಿಡುಗಡೆ ಮಾಡಿದರು.

ಬಳಿಕ ಆಲನಹಳ್ಳಿ ಕೃಷ್ಣ ಅವರೊಂದಿಗಿನ ತಮ್ಮ ಒಡನಾಟವನ್ನು ಮೆಲುಕು ಹಾಕಿದ ಅವರು, ನವ್ಯ ಸಾಹಿತಿಗಳೊಂದಿಗೆ ಆಪ್ತ ಒಡನಾಟ ಹೊಂದಿದ್ದ ಕೃಷ್ಣ ತಮಗೂ ಸಾಹಿತ್ಯ ರಚನೆಗೆ ಹುರಿದುಂಬಿಸಿದರು. ವಿದ್ಯಾರ್ಥಿ ಜೀವನದಲ್ಲೇ ಶ್ರೀಕೃಷ್ಣ ಆಲನಹಳ್ಳಿ 'ಸಮೀಕ್ಷಕ' ಎಂಬ ಸಾಹಿತ್ಯ ಪತ್ರಿಕೆ ಆರಂಭಿಸಿದ್ದರು. ಆ ಕಾಲದಲ್ಲಿ ಯುವ ಸಾಹಿತಿಗಳ ಸಾಹಿತ್ಯಿಕ ಚಿಂತನೆಗಳಿಗೆ ವೇದಿಕೆಯಾಗಿದ್ದ ಆ ಪತ್ರಿಕೆ, ಸಾಹಿತ್ಯ ವಲಯದಲ್ಲಿ ವಿಶಿಷ್ಟ ಗಮನ ಸೆಳೆದಿತ್ತು ಎಂದರು.

ಈ ವೇಳೆ ಆಲನಹಳ್ಳಿ ಕೃಷ್ಣ ಅವರ ಪತ್ನಿ ವಿನುತಾ ಆಲನಹಳ್ಳಿ, ಪುತ್ರ ಪ್ರದ್ಯುಮ್ನ ಆಲನಹಳ್ಳಿ, ಪುತ್ರಿ ಕೃತಿಕಾ ಆಲನಹಳ್ಳಿ, ಪ್ರಕಾಶಕರಾದ ಕೃಷ್ಣ ಚೆಂಗಡಿ, ಕತೆಗಾರರಾದ ಶಿವಾಗ್ ಮತ್ತಿತರರು ಉಪಸ್ಥಿತರಿದ್ದರು.



ಪ್ರಸಿದ್ಧ ಸಾಹಿತಿ ದಿವಂಗತ ಆಲನಹಳ್ಳಿ ಕೃಷ್ಣ ಅವರ 'ಸಮಗ್ರ ಕಥೆಗಳು' ಸಂಕಲನವನ್ನು ಅವರ ಒಡನಾಡಿಯಾಗಿದ್ದ ಹಿರಿಯ ಸಾಹಿತಿ ದೇವನೂರು ಮಹದೇವ ಅವರು ಬಿಡುಗಡೆ ಮಾಡಿದರು.



ಪುಸ್ತಕದ ಮುಖಪುಟ

ಸಮಗ್ರ ಕಥೆಗಳ ಗುಚ್ಛ: ಆಲನಹಳ್ಳಿ ಕೃಷ್ಣ ಅವರ ಎಲ್ಲಾ ಕಥೆಗಳು 'ಸಮಗ್ರ ಕಥೆಗಳು' ಪುಸ್ತಕದಲ್ಲಿ ಒಟ್ಟುಗೂಡಿವೆ. ತಪ್ತ, ಫೀನಿಕ್ಸ್ ಮತ್ತು ಅಪೂರ್ಣ ಕಥೆಗಳು ಎಂಬ ಮೂರು ಕಥಾಗುಚ್ಛಗಳಲ್ಲಿ ಒಟ್ಟು 232 ಪುಟಗಳ ಸಂಕಲನ ರೂಪುಗೊಂಡಿದೆ. ಈ ಕೃತಿಯನ್ನು ಅಮೂಲ್ಯ ಪುಸ್ತಕ ಪ್ರಕಾಶನ ಪ್ರಕಟಿಸಿದ್ದು, ಸುಧಾಕರ ದರ್ಬೆ ಮುಖಪುಟ ಹಾಗೂ ಒಳಪುಟಗಳ ವಿನ್ಯಾಸವನ್ನು ಜೆಆರ್‌ಎಂ ಡಿಸೈನ್ಸ್ ಅವರು ಮಾಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಗುರುತು ಮೂಡಿಸಿದ ಶ್ರೀಕೃಷ್ಣ ಆಲನಹಳ್ಳಿ ಅವರ ಕಥೆಗಳ ಸಮಗ್ರ ಸಂಕಲನ ಪ್ರಕಟವಾಗುತ್ತಿರುವುದು ಸಾಹಿತ್ಯಾಸಕ್ತರಿಗೆ ಸಂತಸ ತಂದಿದೆ.

ಸೂಕ್ಷ್ಮ ಸಂವೇದನೆಯ ಲೇಖಕ: ಕನ್ನಡ ಸಾಹಿತ್ಯದಲ್ಲಿ ಗ್ರಾಮೀಣ ಬದುಕಿನ ಸೊಗಡು, ಮಾನವ ಸಂಬಂಧಗಳ ಸೂಕ್ಷ್ಮತೆ ಮತ್ತು ಪ್ರಕೃತಿಯ ಅಂತರಾಳವನ್ನು ಅಚ್ಚುಕಟ್ಟಾಗಿ ಹಿಡಿದಿಟ್ಟ ಸೂಕ್ಷ್ಮ ಸಂವೇದನೆಯ ಲೇಖಕರಲ್ಲಿ ಶ್ರೀಕೃಷ್ಣ ಆಲನಹಳ್ಳಿ ಪ್ರಮುಖರು. ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆದ ಅತ್ಯಂತ ಕಿರಿಯ ಸಾಹಿತಿ ಎಂಬ ದಾಖಲೆ ಇವರ ಹೆಸರಿನಲ್ಲಿದೆ. ಕೇವಲ 4 ದಶಕಗಳ ಜೀವನಯಾನದಲ್ಲಿ ಅವರು ಕನ್ನಡ ಸಾಹಿತ್ಯಕ್ಕೆ ಅಪಾರ ಹಾಗೂ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಮೈಲುಗಲ್ಲುಗಳಾಗಿರುವ ಕಾಡು(1972), ಪರಸಂಗದ ಗೆಂಡೆತಿಮ್ಮ (1978) ಮತ್ತು ಭುಜಂಗಯ್ಯನ ದಶಾವತಾರ(1982) ಕಾದಂಬರಿಗಳು ಸೇರಿದಂತೆ ಇವರ ಬಹುತೇಕ ಕೃತಿಗಳು ಚಲನಚಿತ್ರಗಳಾಗಿ ನಿರ್ಮಾಣಗೊಂಡು ಅಪಾರ ಜನರ ಮನಮುಟ್ಟಿವೆ.

ಕಥೆಗಾರರಾಗಿ, ಕವಿಯಾಗಿಯೂ ಗುರುತಿಸಿಕೊಂಡ ಆಲನಹಳ್ಳಿ ಕೃಷ್ಣ ಅವರು ಮಣ್ಣಿನ ಹಾಡು, ಕಾಡು ಗಿಡದ ಹಾಡು ಪಾಡು, ಡೋಗ್ರಾ ಪಹಾರಿ ಪ್ರೇಮಗೀತೆಗಳು ಸೇರಿದಂತೆ ಹಲವಾರು ಕವನ ಸಂಕಲನಗಳನ್ನು ರಚಿಸಿದ್ದಾರೆ. ಅವರ 'ಮಣ್ಣಿನ ಹಾಡು' ಕವನ ಸಂಕಲನಕ್ಕಾಗಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದ್ದು, 1989ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮರಣೋತ್ತರವಾಗಿ ಸಂದಿದೆ. ಅವರ ಕೃತಿಗಳು ಅನೇಕ ಭಾರತೀಯ ಭಾಷೆಗಳ ಜೊತೆಗೆ ಇಂಗ್ಲಿಷ್, ಜರ್ಮನ್, ರಷ್ಯನ್ ಇನ್ನಿತರ ವಿದೇಶಿ ಭಾಷೆಗಳಿಗೂ ಅನುವಾದಗೊಂಡಿವೆ.

ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷ ಪೂರೈಕೆ: ಡಿಸಿಎಂ ಡಿಕೆಶಿ ಪರ ವಿಶೇಷ ಪೂಜೆ



ಮೈಸೂರಿನ 101 ಗಣಪತಿ ದೇವಸ್ಥಾನದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಅಧ್ಯಕ್ಷರಾಗಿ ಆರು ವರ್ಷ ಪೂರೈಸಿದ ಹಿನ್ನಲೆಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮೈಸೂರು,ಮಾ.10(ಎಂಕೆ)– ಮೈಸೂರಿನ ಅಗ್ರಹಾರದಲ್ಲಿರುವ 101 ಗಣಪತಿ ದೇವಸ್ಥಾನದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಅಧ್ಯಕ್ಷರಾಗಿ ಆರು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಅವರ ಪರ ವಿಶೇಷ ಪೂಜೆ ಸಲ್ಲಿಸಲಾಯಿತು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಭಾವಚಿತ್ರ ಹಿಡಿದು ಈಡುಗಾಯಿ ಒಡೆದು, ಪೂಜೆ ಸಲ್ಲಿಸಿದ ಕಾಂಗ್ರೆಸ್ ಕಾರ್ಯಕರ್ತರು, ಸಿಹಿ ಹಂಚಿ ಸಂಭ್ರಮಿಸಿದರಲ್ಲದೆ ರಾಜ್ಯದ 'ಮುಂದಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್' ಘೋಷಣೆ ಕೂಗಿ ಅಭಿಮಾನ ಮೆರೆದರು. ರಾಜ್ಯದಲ್ಲಿ ಕಾಂಗ್ರೆಸ್ ಬಹುಮತದೊಂದಿಗೆ ಅಧಿಕಾರಕ್ಕೆ ಬರಲು ಕಾರಣರಾದ ಡಿಸಿಎಂ ಡಿ.ಕೆ.ಶಿವಕುಮಾರ್, ಒಗ್ಗಟ್ಟಿನ ಮಂತ್ರದೊಂದಿಗೆ ಐದು ಗ್ಯಾರಂಟಿ ಯೋಜನೆ ಸೇರಿದಂತೆ ಅನೇಕ ಜನಪರ ಕಾರ್ಯಗಳ ಮೂಲಕ ಸಾಗುತ್ತಿದ್ದು, ರಾಜ್ಯದ ಮುಂದಿನ ಮುಖ್ಯಮಂತ್ರಿ ಆಗಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ನಗರ ಪಾಲಿಕೆ ಮಾಜಿ ಸದಸ್ಯ ರಾಜಶೇಖರ ಮೂರ್ತಿ, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಮುಖಂಡರಾದ ಜಿ.ಶ್ರೀನಾಥ್ ಬಾಬು, ಕೆ.ಪಿ.ಭಾಗ್ಯರಾಜ್, ಜಿ.ರಾಘವೇಂದ್ರ, ಎಸ್.ಎನ್.ರಾಜೇಶ್, ಮಂಜೇಶ್, ಜಿ.ಕಿರಣ, ರಮೇಶ, ರಾಕೇಶ್, ಮುಶಿ, ಆರ್.ಯೋಗೇಶ್, ಶ್ರೀಧರ್, ಬೋಗಾದಿ ಚಂದ್ರು, ಮಹೇಶ್, ಲಕ್ಷ್ಮಣ, ರಂಜು, ವಿಜೇಂದ್ರ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ

ಬುಧವಾರ 11 ಮಾರ್ಚ್ 2026

ವಿಜೃಂಭಣೆಯಿಂದ ನಡೆದ ಶ್ರೀ ದೊಡ್ಡಮ್ಮತಾಯಿ ಹಬ್ಬ




ಶ್ರೀ ದೊಡ್ಡಮ್ಮತಾಯಿ ದೇವಸ್ಥಾನದಲ್ಲಿ ಮಹಿಳೆಯರು ಪೂಜೆಗೆ ಸಿದ್ಧವಾಗಿರುವುದು.

ಮಂಡ್ಯ,ಮಾ.10– ತಾಲೂಕು ಹೊಳಲು ಗ್ರಾಮದಲ್ಲಿ ಗ್ರಾಮ ದೇವತೆಯಾದ ಶ್ರೀ ದೊಡ್ಡಮ್ಮತಾಯಿ ಹಬ್ಬವು ಬಹಳ ವಿಜೃಂಭಣೆಯಿಂದ ಅಪಾರ ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಗ್ರಾಮದ ಮಕ್ಕಳು ಮಹಿಳೆಯರು ಸೇರಿ ಗ್ರಾಮದ ಮಾರಮ್ಮನ ದೇವಸ್ಥಾನಗಳಾದ ಮದ್ದೂರಮ್ಮ ದೇವಿ, ಮಾರಮ್ಮ ದೇವಿ, ಶ್ರೀ ದೊಡ್ಡಮ್ಮತಾಯಿ ದೇವಸ್ಥಾನದಲ್ಲಿ ಬಾಯಿ ಬೀಗ ಹಾಕಿಕೊಂಡು ತಮಟೆ ನಾರಿಯೊಂದಿಗೆ ಗ್ರಾಮ ದೇವಾಲಯಗಳಿಗೆ ತಂಬಿಟ್ಟಿನ ಆರತಿ ಬೆಳಗಿಸಿದರು. ನಂತರ ಗ್ರಾಮ ದೇವತೆಯಾದ ಶ್ರೀ ದೊಡ್ಡಮ್ಮ ತಾಯಿ ದೇವಸ್ಥಾನದಲ್ಲಿ ಎಲ್ಲಾ ಸಮುದಾಯದವರು ಸೇರಿ ಬಾಯಿ ಬೀಗ ಧರಿಸಿ ಮಹಿಳೆಯರು ಹರಕೆ ತೀರಿಸಿದರು. ಅಮ್ಮನಿಗೆ ವಿಶೇಷ ಹೂವಿನ ಅಲಂಕಾರ ಹಾಗೂ ಮಹಾಮಂಗಳಾರತಿ ನೆರವೇರಿಸಿ ಪ್ರಸಾದ ವಿನಿಯೋಗ ಮಾಡಲಾಯಿತು.

ಶ್ರೀ ಮಡಿವಾಳ ಮಾಚಿದೇವರ ಸಮುದಾಯದವರು ಬಾಯಿ ಬೀಗ ಧರಿಸಿ ಹರಕೆ ಹೊತ್ತ ಮಹಿಳೆಯರಿಗೆ (ಕಾಲ್ನಡಿಯಲ್ಲಿ ಬರುವ ಮಹಿಳೆಯರಿಗೆ) ನೆಲಕ್ಕೆ ಮಡಿ ಸೀರೆಯನ್ನು ಹಾಸಿ ಸೇವೆಯನ್ನು ನೆರವೇರಿಸಿಕೊಟ್ಟರು. ರಾಜ್ಯ ಒಕ್ಕಲಿಗ ಸಂಘದ ಮಾಜಿ ಉಪಾಧ್ಯಕ್ಷ ಎಚ್. ಎಲ್. ಶಿವಣ್ಣನವರು ದೇವಿ ದರ್ಶನ ಪಡೆದು ಮಾತನಾಡಿದರು. ಮಾಜಿ ಶಾಸಕರಾದ ಎಚ್. ಬಿ. ರಾಮು, ಎಚ್.ಎಸ್. ಹರಿಪ್ರಸಾದ್, ಡಾಕ್ಟರ್ ಅಶಾಲತಾ, ಎಚ್.ಎಸ್. ಯೋಗೇಶ್ ಕುಮಾರ್, ಸಚ್ಚಿದಾನಂದ (ಪಪ್ಪಿ), ಎಚ್.ಎಲ್. ಅಭಿನಂದನ್, ವಿಜಯ್ ಕುಮಾರ್, ಎಚ್.ಎಸ್. ನಂದೀಶ್, ಎಚ್.ಡಿ.ರವಿ, ನಾರಾಯಣ, ಪ್ರದೀಪ್ ಕುಮಾರ್, ಹೆಚ್. ಎಂ ಕುಮಾರ್, ಶ್ರೀಧರ್, ಮಂಜು, ರಾಮಕೃಷ್ಣ ಹೆಚ್.ಎನ್. ನಾಗರಾಜು, ಎಚ್. ಎಸ್. ಆನಂದ್, ಚೇತನ್, ಸುನೀಲ್, ಮಾತೃಶ್ರೀ ಶಂಕರ್, ಪುಟ್ಟಸ್ವಾಮಿ, ಲಿಂಗಪ್ಪ, ಲಿಂಗರಾಜು, ಮಾದಯ್ಯ, ಶಂಕರ್ ಪೂಜಾರಿ, ಶಿವರಾಂ, ಪ್ರಕಾಶ್, ನಿಂಗರಾಜಮ್ಮ, ಶ್ಯಾಮ್, ಚಂದನ್, ಸಂತೋಷ್, ಮಣಿಗಾರ ನಿಂಗರಾಜ್, ನಿಂಗೇಗೌಡ, ಜಗ, ಗುಣ.ರವಿ (ಬೆಲ್ಲ) ಕುಮಾರ್, ದೇವಸ್ಥಾನದ ಅರ್ಚಕರಾದ ಶಿವರಾಜ್, ಅರುಣ್ ಹಾಗೂ ಇತರರು ಉಪಸ್ಥಿತರಿದ್ದರು.

ಮಂತ್ರ ಮಾಂಗಲ್ಯ



ಬೆಂಗಳೂರಿನ ರಾಂಯುಸಂದ್ರ ಗ್ರಾಮದ ಕೃಷ್ಣಪ್ಪ, ಗೌರಮ್ಮ ದಂಪತಿ ಪುತ್ರರಾದ ವಕೀಲ ಕೆ.ಸಂದೀಪ್ ಮತ್ತು ಮಂಡ್ಯ ಜಿಲ್ಲೆ ಚಿಕ್ಕಬಳ್ಳಿ ಗ್ರಾಮದ ವೀರಣ್ಣ, ಭಾರತಿ ದಂಪತಿ ಪುತ್ರಿಯಾದ ಸಿ.ವಿ ಚಂದನ ಕುವೆಂಪು ಆಶಯದಂತೆ 'ಮಂತ್ರ ಮಾಂಗಲ್ಯ' ಮೂಲಕ ಭಾನುವಾರ ರಾಮನಗರದ ದೊಡ್ಡಮನೆ ಎಂಬಲ್ಲಿ ಸರಳ ವಿವಾಹವಾಗಿದ್ದಾರೆ.ಬಸವಣ್ಣ, ಡಾ.ಬಿ.ಆರ್ ಅಂಬೇಡ್ಕರ್ ಮತ್ತು ಕುವೆಂಪು ರವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು. ಮೈಸೂರು ವಕೀಲರಾದ ಸಂದೀಪ್ ಜೆವೂರ್, ತೋಂಟದಾರ್ಯ, ನಾಗೇಂದ್ರ, ಪಚ್ಚುರಾಜ್, ಸಿದ್ದಪ್ಪಾಜಿ(ಮಧು) ವಕೀಲರು ಜೋಡಿಗೆ ಶುಭ ಹಾರೈಸಿದರು.

ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಲು ವಾಟಾಳ್ ಪ್ರತಿಭಟನೆ



ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಮಂಡ್ಯ, ಮಾ.10– ರಾಜ್ಯದಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿಗತಿ ಶೋಚನೀಯವಾಗಿದ್ದು, ಸರ್ಕಾರ ಈ ಕೂಡಲೇ ಎಚ್ಚೆತ್ತುಕೊಂಡು ಶಾಲೆಗಳನ್ನು ಉಳಿಸಬೇಕು ಎಂದು ಆಗ್ರಹಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಕನ್ನಡಪರ ಸಂಘಟನೆಗಳ ಕಾರ್ಯಕರ್ತರೊಂದಿಗೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಅವರು, ಸರ್ಕಾರ ಹಾಗೂ ಜನಪ್ರತಿನಿಧಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, ಕನ್ನಡಿಗರ ತೆರಿಗೆ ಹಣದಲ್ಲಿ ಆಡಳಿತ ನಡೆಸುವ ಸರ್ಕಾರಕ್ಕೆ ಕನ್ನಡ ಮಾಧ್ಯಮ ಶಾಲೆಗಳನ್ನು ಉಳಿಸಲು ಯೋಗ್ಯತೆ ಇಲ್ಲವೇ? 30 ವರ್ಷಗಳಿಂದ ಕನ್ನಡ ಶಾಲೆಗಳನ್ನು ಹಂತ ಹಂತವಾಗಿ ಕಗ್ಗೊಲೆ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಕನ್ನಡ ಶಾಲೆಗಳಿಗೆ ಅನುದಾನ ನೀಡಲು ಸರ್ಕಾರದ ಬಳಿ ಹಣವಿಲ್ಲವೇ? 30 ವರ್ಷಗಳಿಂದ ಕನ್ನಡ ಶಾಲೆಗಳನ್ನು ಕತ್ತಲೆಯಲ್ಲಿ ಇಟ್ಟಿದ್ದೀರಿ. ಶಾಲಾ ಕಟ್ಟಡಗಳು ಕುಸಿದು ಬೀಳುತ್ತಿವೆ, ಶಿಕ್ಷಕರ ಕೊರತೆಯಿದೆ. ಈ ಕೂಡಲೇ ವಿಶೇಷ ಪ್ಯಾಕೇಜ್ ಮೂಲಕ ಕನ್ನಡ ಮಾಧ್ಯಮ ಶಾಲೆಗಳನ್ನು ಸಬಲೀಕರಣಗೊಳಿಸಬೇಕು ಎಂದು ಒತ್ತಾಯಿಸಿದರು.

ನಮ್ಮ ಈ ಎಚ್ಚರಿಕೆಯನ್ನು ಸರ್ಕಾರ ಹಗುರವಾಗಿ ಪರಿಗಣಿಸಿದರೆ ತಕ್ಕ ಶಾಸ್ತಿ ಕಾದಿದೆ. ಮಾ. 12ರಂದು ರಾಜ್ಯಾದ್ಯಂತ ಕನ್ನಡ ಶಾಲೆಗಳ ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಲಾಗುವುದು. ಅಂದು ಮಂಡ್ಯದಲ್ಲಿ ನಾವು ಹೆದ್ದಾರಿ ತಡೆ ನಡೆಸಲಿದ್ದೇವೆ. ಇಡೀ ಸಾರಿಗೆ ವ್ಯವಸ್ಥೆ ಸ್ಥಗಿತಗೊಳಿಸಿ ಕ್ರಾಂತಿ ಮಾಡುತ್ತೇವೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಹನಿಯಂಬಾಡಿ ಪಾರ್ಥಸಾರಥಿ, ಗಿರೀಶ್ ಗೌಡ, ಜಗದೀಶ್, ಗಂಗಾಧರ್, ಖಲೀಮ್, ಕನ್ನಡ ಸೇನೆಯ ಜಿಲ್ಲಾಧ್ಯಕ್ಷ ಮಂಜುನಾಥ್, ಸೌಭಾಗ್ಯ, ಎಂ.ಎಸ್. ಮಂಜುನಾಥ್, ಪ್ರಸನ್ನ ಭಾಗವಹಿಸಿದ್ದರು.

ನಿರಾಶ್ರಿತರಿಗೆ ವಾತ್ಸಲ್ಯ ತುಂಬುವ ಕೆಲಸ ಆದ್ಯತೆ ಆಗಬೇಕು



ಪಾರ್ವತಮ್ಮ ದೇವರಾಜಯ್ಯ ಕುಟುಂಬಕ್ಕೆ ವಾತ್ಸಲ್ಯ ಮನೆಯನ್ನು ಹಸ್ತಾಂತರಿಸಿದರು. ಮಲ್ಲಿಕಾರ್ಜುನ್, ಯೋಗೇಶ್, ಪ್ರಸಾದ್, ನಂದಿನಿ ಮತ್ತಿತರರಿದ್ದರು.

ಕಿಕ್ಕೇರಿ, ಮಾ.10– ನಿರಾಶ್ರಿತರಿಗೆ ಶಕ್ತಿ ತುಂಬುವ ಕೆಲಸವನ್ನು ಸಂಸ್ಥೆ ಮೊದಲ ಆದ್ಯತೆಯಲ್ಲಿ ಮಾಡುತ್ತಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಆರ್‌ಟಿಪಿ ಮಲ್ಲಿಕಾರ್ಜುನ್ ಹೇಳಿದರು.

ಹೋಬಳಿಯ ಅನೆಗೊಳ ಗ್ರಾಮವಲಯದ ಅಂಚೆಬೀರನಹಳ್ಳಿ ಗ್ರಾಮದ ಪಾರ್ವತಮ್ಮ ದೇವರಾಜಯ್ಯ ಅವರಿಗೆ ವಾತ್ಸಲ್ಯ ಮನೆ ಹಸ್ತಾಂತರಿಸಿ ಮಾತನಾಡುತ್ತ, ಶ್ರೀಕ್ಷೇತ್ರ ಆರೋಗ್ಯ, ಶಿಕ್ಷಣ, ಧಾರ್ಮಿಕ ದಾಸೋಹದ ಜೊತೆಗೆ ಆಶ್ರಯ ಯೋಜನೆಯನ್ನು ತಂದಿದೆ. ನಿರಾಶ್ರಿತರು ಭಯಪಡದೆ ನಿರಾತಂಕವಾಗಿ ಬದುಕಲು ಮುಂದಾಗಿ ಎಂದರು.

ಜಿಲ್ಲಾ ನಿರ್ದೇಶಕ ಯೋಗೀಶ್ ಮಾತನಾಡಿ, ಐದು ವರ್ಷಗಳಿಂದ ಈ ವಾತ್ಸಲ್ಯ ಕಾರ್ಯಕ್ರಮ ಆರಂಭಗೊಂಡಿದ್ದು ಅಸಹಾಯಕರಿಗೆ ಮನೆ ಕಟ್ಟಿ ಕೊಡುವ, ಮಾಸಾಶನ ನೀಡುವ, ಮನೆ ದುರಸ್ತಿ ಮಾಡುವ, ಶೌಚಾಲಯ ನಿರ್ಮಾಣ, ದೈನಂದಿನ ಬಟ್ಟೆ ಕಿಟ್, ವಾತ್ಸಲ್ಯ ಕಿಟ್ ನೀಡುತ್ತಾ ಬಂದಿದೆ. ರಾಜ್ಯಾದ್ಯಂತ ಸುಮಾರು 20ಸಾವಿರಕ್ಕೂ ಹೆಚ್ಚು ಸದಸ್ಯರಿಗೆ ಮಾಸಾಶನ ನೀಡಿದೆ. ನಿರಾಶ್ರಿತರಿಗೆ ಸೋರುವ ಮನೆಗಳನ್ನು ದುರಸ್ಥಿ ಮಾಡಲಾಗುವುದು ಎಂದು ಆತ್ಮಸ್ಥೈರ್ಯ ತುಂಬಿದರು.

ತಾಲೂಕು ಯೋಜನಾಧಿಕಾರಿ ಮೂಕಾಂಬಿಕಾ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಯೋಗೇಶ್, ನಂಜೇಶ್, ಆನೆಗೊಳ ಶ್ರೀನಿವಾಸ್, ನಿವೃತ್ತ ಶಿಕ್ಷಕ ನಂಜೇಗೌಡ, ಶಂಕರ್, ಜನಜಾಗೃತಿ ವೇದಿಕೆ ಸದಸ್ಯ ನಳಿನಿ, ಸುನೀತಾ, ಮಂಜು, ಶಿವರಾಮು, ಜ್ಞಾನವಿಕಾಸ ಸಮನ್ವಯಾಧಿಕಾರಿ ನಂದಿನಿ, ಸೇವಾ ಪ್ರತಿನಿಧಿ ಸುಮಾ, ಲತಾ, ಮಂಜುಳಾ, ಪವಿತ್ರಾ, ಜಯಶೀಲಾ ಮತ್ತಿತರರಿದ್ದರು.

ಮೇಲ್ವಿಚಾರಕಿ ವಿರುದ್ಧ ಸುಳ್ಳು ಜಾತಿ ನಿಂದನೆ ದೂರು ತಿರಸ್ಕರಿಸಲು ಮನವಿ



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ.ಶೋಭಾರಾಣಿ ಅವರಿಗೆ ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಲ್ಲೂಕು ಅಂಗನವಾಡಿ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಕೆ.ಬಿ.ಧನಲಕ್ಷ್ಮೀ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಕೆ.ಆರ್.ಪೇಟೆ, ಮಾ.10– ತಾಲೂಕಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಮೇಲ್ವಿಚಾರಕಿಯಾಗಿ ಸೇವೆ ಸಲ್ಲಿಸುತ್ತಿರುವ ಪದ್ಮಮ್ಮ ವಿರುದ್ಧ ಅಂಗನವಾಡಿ ಕಾರ್ಯಕರ್ತೆಯೊಬ್ಬರು ಸುಳ್ಳು ಜಾತಿ ನಿಂದನೆ ದೂರು ನೀಡಿರುವುದನ್ನು ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಸಂಘ ತೀವ್ರವಾಗಿ ಖಂಡಿಸಿದೆ

ಸಂಘದ ಅಧ್ಯಕ್ಷೆ ಕೆ.ಬಿ.ಧನಲಕ್ಷಿ ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಿದ 100ಕ್ಕೂ ಹೆಚ್ಚು ಅಂಗನವಾಡಿ ಕಾರ್ಯಕರ್ತೆಯರು ಗಂಜಿಗೆರೆ ಗ್ರಾಮದ ಅಂಗನವಾಡಿ ಕೇಂದ್ರದ ಕಾರ್ಯಕರ್ತೆ ಡಿ.ಸುಜಾ ತಮ್ಮನ್ನು ಬೇರೆ ಕೇಂದ್ರಕ್ಕೆ ವರ್ಗಾವಣೆ ಮಾಡಿಸಿಕೊಡಲಿಲ್ಲ ಎಂಬ ಸಣ್ಣಕಾರಣಕ್ಕಾಗಿ ನಿರಪರಾಧಿ ಮೇಲ್ವಿಚಾರಕಿ ಪದ್ಮಮ್ಮ ವಿರುದ್ಧ ಜಾತಿ ನಿಂದನೆ ಮಾಡಿದ್ದಾರೆ ಎಂದು ಗ್ರಾಮಾಂತರ ಪೊಲೀಸ್ ಠಾಣೆಗೆ ಸುಳ್ಳು ದೂರು ನೀಡಿ ಎಫ್‌ಐಆರ್ ಮಾಡಿಸಿರುವುದನ್ನು ತೀವ್ರವಾಗಿ ಖಂಡಿಸಿದರು.

ಉತ್ತಮ ಅಧಿಕಾರಿ ಎನಿಸಿರುವ ಅಂಗನವಾಡಿ ಮೇಲ್ವಿಚಾರಕಿ ಪದ್ಮಮ್ಮ ವಿರುದ್ದ ಮಾಡಿರುವ ಸುಳ್ಳು ದೂರನ್ನು ತಿರಸ್ಕರಿಸುವ ಮೂಲಕ ಅವರಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಕೆ.ಆರ್. ಪೇಟೆಗೆ ಭೇಟಿ ನೀಡಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ವಿ.ಜೆ. ಶೋಭಾ ರಾಣಿ ಅವರಿಗೆ ಮನವಿ ಸಲ್ಲಿಸಿದರು.

ಸಭೆಯಲ್ಲಿ ತಾಲೂಕು ಅಂಗನವಾಡಿ ಕಾರ್ಯಕರ್ತೆಯರ ಸಂಘದ ಪದಾಧಿಕಾರಿಗಳಾದ ಪಿ.ಸುಶೀಲ, ಕೃಷ್ಣವೇಣಿ, ಕೆ.ಜೆ.ರೂಪಾ, ಹೆಚ್.ಕೆ. ಜ್ಯೋತಿ, ವಿನೋಧ, ಎ.ಎಸ್.ಸಾವಿತ್ರಿ, ವಲ್ಲೀದೇವಿ, ಶಶಿಕಲಾ, ಮಮತಾ ಸೇರಿದಂತೆ ನೂರಾರು ಮಂದಿ ಅಂಗನವಾಡಿ ಕಾರ್ಯಕರ್ತೆಯರು ಸಭೆಯಲ್ಲಿ ಭಾಗವಹಿಸಿ ಅಂಗನವಾಡಿ ಇಲಾಖೆಯ ಮೇಲ್ವಿಚಾರಕಿ ಆರ್.ಪದ್ಮಮ್ಮ ಅವರ ವಿರುದ್ದ ಸುಳ್ಳು ದೂರು ದಾಖಲಿಸಿ, ಅವರ ಹೆಸರಿಗೆ ಕೆಟ್ಟ ಹೆಸರು ತರಲು ಪಿತೂರಿ ನಡೆಸುತ್ತಿರುವ ಅಂಗನವಾಡಿ ಕಾರ್ಯಕರ್ತೆ ಡಿ.ಸುಜಾ ಅವರ ನಡವಳಿಕೆಗಳನ್ನು ಖಂಡಿಸಿದರು.

ಮೂರನೇ ಪುಟದಿಂದ

ಟೇಕ್ ಇಟ್ ಈಜಿ...!

ಆದರೆ ಇಲ್ಲಿನ ಸೇಲ್ ಅಗ್ರಿಮೆಂಟ್‌ನಲ್ಲಿ ಸ್ವಲ್ಪ ಮೊತ್ತಕ್ಕೆ ಮಾತ್ರ ಚೆಕ್ ಹಾಗೂ ಡಿಡಿ ಸಂಖ್ಯೆ ನಮೂದಿಸಿ, ಉಳಿದ ಹಣವನ್ನು ಪಡೆಯಲಾಗಿದೆ ಎಂದು ಮಾರಾಟಗಾರರು ಒಪ್ಪಿ ಸಹಿ ಹಾಕಿದ್ದಾರಷ್ಟೇ. ಆ ಹಣವನ್ನು ಯಾವ ರೂಪದಲ್ಲಿ ಪಡೆದರು ಎಂಬ ಮಾಹಿತಿಯನ್ನೇ ನಮೂದಿಸಿಲ್ಲ. ಇದಕ್ಕೆ ಸಬ್ ರಿಜಿಸ್ಟಾರ್ ಹೇಗೆ ಅವಕಾಶ ನೀಡಿದರು ಎಂಬುದೇ ಯಕ್ಷಪ್ರಶ್ನೆಯಾಗಿದೆ ಎಂದು ಹೇಳಿದರು.

ತಪ್ಪಿತಸ್ಥರ ವಿರುದ್ಧ ಕ್ರಮವೇಕಿಲ್ಲ: ಸರ್ಕಾರಿ ಆಸ್ತಿಯನ್ನು ಭೂಗಳ್ಳರ ಪಾಲಾಗಲು ಅವಕಾಶ ನೀಡಿದ ಅಧಿಕಾರಿಗಳ ವಿರುದ್ಧ ಈ ತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಸರ್ಕಾರದ ಆಸ್ತಿಯನ್ನು ಯಾರೂ ಸುಲಭವಾಗಿ ನೋಂದಣಿ ಮಾಡಿಸಿಕೊಳ್ಳಲು ಸಾಧ್ಯವಿಲ್ಲ. ಆರ್‌ಟಿಸಿಯಲ್ಲಿ ಅದು ಸರ್ಕಾರದ ಆಸ್ತಿ ಎಂದು ಫ್ಲ್ಯಾಗ್ ಆಗಿದಿದ್ದರೆ ನೋಂದಣಿ ಸಾಧ್ಯವಾಗುತ್ತಿರಲಿಲ್ಲ ಎಂದು ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಹಾಗಾದರೆ ಇದೊಂದು ಆಸ್ತಿಯಲ್ಲಿ ಮಾತ್ರ ಫ್ಲ್ಯಾಗ್ ತೆರವು ಮಾಡಿದ್ದೇಕೆ, 24.10 ಎಕರೆಯ ಸರ್ಕಾರಿ ಆಸ್ತಿಯ ಆರ್‌ಟಿಸಿಯಲ್ಲಿ ಖಾಸಗಿ ವ್ಯಕ್ತಿಗಳ ಹೆಸರು ಹೇಗೆ ಸೇರಿಸಲಾಯಿತು. ಸರ್ಕಾರದ ಆಸ್ತಿಯನ್ನು ಯಾವ ಆಧಾರದ ಮೇಲೆ ಸಬ್ ರಿಜಿಸ್ಟ್ರಾರ್ ನೋಂದಣಿ ಮಾಡಿಕೊಟ್ಟರು ಎಂದು ಶ್ರೀವತ್ಸ ಸರಣಿ ಪ್ರಶ್ನೆಗಳನ್ನಿತ್ತರು.

ಹಲವರು ಶಾಮೀಲು ಶಂಕೆ: ಈ ಹಗರಣದಲ್ಲಿ ಬಹಳಷ್ಟು ಅಧಿಕಾರಿಗಳು ಶಾಮೀಲಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿ ಸಬ್ ರಿಜಿಸ್ಟ್ರಾರ್, ಕಂದಾಯ ಅಧಿಕಾರಿ ಸೇರಿದಂತೆ ಯಾರೇ ತಪ್ಪು ಮಾಡಿದ್ದರೂ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಿ ಜೈಲಿಗೆ ಕಳುಹಿಸಲೇಬೇಕು. ಆದರೆ ಈ ತನಕ ಯಾರ ವಿರುದ್ಧವೂ ಕ್ರಮ ಕೈಗೊಂಡಿಲ್ಲ. ಹಾಗಾದರೆ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ರಾಜಾರೋಷವಾಗಿ ಸರ್ಕಾರದ ಜಮೀನು ಕಬಳಿಸುವ ಭ್ರಷ್ಟ ಅಧಿಕಾರಿಗಳನ್ನು ಸರ್ಕಾರವೇ ರಕ್ಷಣೆ ಮಾಡುತ್ತಿದೆಯೇ ಅಥವಾ ಕ್ರಮ ಕೈಗೊಳ್ಳಲು ಭಯವೇ ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತವೆ. ಈಗಲಾದರೂ ಸರ್ಕಾರ ಈ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಕೃಷ್ಣರಾಜ ಕ್ಷೇತ್ರದ ಅಧ್ಯಕ್ಷ ಗೋಪಾಲರಾಜ್ ಅರಸ್, ನಗರ ವಕ್ತಾರ ಮೋಹನ್, ಮಾಧ್ಯಮ ವಕ್ತಾರ ಮಹೇಶ್ ರಾಜ್ ಅರಸ್, ಮಾಜಿ ಮೇಯರ್ ಶಿವಕುಮಾರ್ ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯರ ಪ್ರಕರಣವೇ ಭೂಗಳ್ಳರಿಗೆ ಪ್ರೇರಣೆ!

ಮೈಸೂರಿನಲ್ಲಿ ಸರ್ಕಾರಿ ಆಸ್ತಿಯನ್ನು ಅತಿಕ್ರಮಿಸಿಕೊಳ್ಳುವುದು, ಒತ್ತುವರಿ ಮಾಡಿಕೊಳ್ಳುವುದು, ಹಗರಣ ಬಯಲಾದ ನಂತರ ಅದನ್ನು ವಾಪಾಸ್ಸು ಕೊಡುವುದು ವಾಡಿಕೆಯಾಗಿಬಿಟ್ಟಿದೆ. ಇದಕ್ಕೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 14 ಮುಡಾ ನಿವೇಶನ ವಾಪಾಸಾತಿ ಪ್ರಕರಣವೇ ಪ್ರೇರಣೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.

ಮೈಸೂರಿನ ಕೆ.ಸಿ.ಬಡಾವಣೆಯ ಕೆರೆ ಒತ್ತುವರಿ ಮಾಡಿಕೊಂಡಾಗ ನಾವು ಅದನ್ನು ಬಯಲಿಗೆಳೆದೆವು. ತರುವಾಯ ಒತ್ತುವರಿದಾರರೇ ಕಾಂಪೌಂಡ್ ತೆರವು ಮಾಡಿದಾಗ ಆ ಸ್ಥಳವನ್ನು ಜಿಲ್ಲಾಡಳಿತ ತನ್ನ ವಶಕ್ಕೆ ಪಡೆಯಿತು. ನಂಜನಗೂಡು ರಸ್ತೆಯ ಸೈಕಲ್ ಸ್ಟ್ಯಾಂಡ್ ಜಾಗವನ್ನೂ ಕೂಡ ತೆರವು ಮಾಡಿ ಸ್ವಾಧೀನಕ್ಕೆ ಪಡೆದರು. ಈಗ 24.10 ಎಕರೆ ಸರ್ಕಾರಿ ಆಸ್ತಿಯ ಸೇಲ್ ಅಗ್ರಿಮೆಂಟ್ ರದ್ದು ಮಾಡಿ ವಾಪಾಸ್ಸು ನೀಡಿದ್ದಾರೆ ಎಂದರು. ಹೀಗೆ ಕಬಳಿಸಿರುವ ಸರ್ಕಾರದ ಆಸ್ತಿಯನ್ನು ವಾಪಾಸು ನೀಡಿದರೆ ಸಾಕು ಕಾನೂನು ಕುಣಿಕೆಯಿಂದ ಪಾರಾಗಲು ಅವಕಾಶವಿದೆ. ಒಂದು ವೇಳೆ ತನಿಖೆಯಾದರೂ ಸಿದ್ದರಾಮಯ್ಯ ಅವರ ಪ್ರಕರಣದಂತೆ ಬಿ ರಿಪೋರ್ಟ್ ಹಾಕಿಸಿಕೊಂಡು ಕೇಸ್ ವಜಾ ಮಾಡಿಕೊಳ್ಳಬಹುದು ಎಂಬ ಧೈರ್ಯದಲ್ಲಿ ಈ ರೀತಿಯ ವಾಮಮಾರ್ಗ ಹಿಡಿದಿದ್ದಾರೆ ಎಂದು ದೂರಿದರು.

ಸರ್ಕಾರದ ಆಸ್ತಿಯನ್ನು ರಾಜಾರೋಷವಾಗಿ ಹಾಗೂ ಸರಾಗವಾಗಿ ಕಬಳಿಸುವುದು. ಅಕ್ರಮ ಬಯಲಾದ ನಂತರ ಮತ್ತೆ ವಾಪಾಸು ನೀಡುವುದು ಮೈಸೂರಲ್ಲಿ ಮಾಮೂಲಾಗಿಬಿಟ್ಟಿದೆ. ಆದರೆ ಮೂರು ಪ್ರಕರಣದಲ್ಲೂ ಆಸ್ತಿ ಕಬಳಿಸಿದವರ ವಿರುದ್ಧ ಈ ತನಕ ಯಾವುದೇ ಕ್ರಮ ಕೈಗೊಂಡಿಲ್ಲ. ಹಾಗಾದರೆ ಯಾರು ಬೇಕಾದರೂ ಸರ್ಕಾರದ ಆಸ್ತಿ ಕಬಳಿಸಬಹುದು, ಅಕ್ರಮ ಬಯಲಾದ ನಂತರ ಸುಲಭವಾಗಿ ವಾಪಾಸು ನೀಡಬಹುದೇ ಎಂದು ಶ್ರೀವತ್ಸ ಪ್ರಶ್ನಿಸಿದರು.

ಭಾರೀ ಮಸಲತ್ತೇ ನಡೆದಂತಿದೆ

ಮೈಸೂರಿನ ಮಹಾರಾಣ ಪ್ರತಾಪ್ ಸಿಂಗ್ ರಸ್ತೆಯ 24.10 ಎಕರೆ ಭೂಮಿ ತಮ್ಮ ಕುಟುಂಬದ ಮಾಲೀಕತ್ವಕ್ಕೆ ಸೇರಿದೆ ಎಂದು ಪ್ರಶಾಂತ್ ಎಂ.ಉಚ್ಚಿಲ್ ಸೇರಿದಂತೆ 13 ಮಂದಿ ಬೆಂಗಳೂರಿನ ಬಿ.ಎಸ್.ಡೆವಲಪರ್ಸ್ ಅಂಡ್ ಇನ್ಫ್ರಾಸ್ಟಕ್ಚರ್ ಹಾಗೂ ಆದೀಶ ಡೆವಲಪರ್ಸ್‌ನವರಿಗೆ 40 ಕೋಟಿಗೆ ಬೆಲೆ ನಿಗದಿ ಮಾಡಿ 4.75 ಕೋಟಿಗೆ ಮಾರಾಟ ಒಪ್ಪಂದ (ಸೇಲ್ ಅಗ್ರಿಮೆಂಟ್) ಮಾಡಿಕೊಂಡಿದ್ದರು ಎಂದು ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ಆದರೆ 24.10 ಎಕರೆ ಆರ್‌ಟಿಸಿಯಲ್ಲಿ ಸರ್ಕಾರದ ಆಸ್ತಿ ಎಂದು ನಮೂದಾಗಿದ್ದರೂ ಸಬ್ ರಿಜಿಸ್ಟ್ರಾರ್ ಅವರು ಸೊಲ್ಲೆತ್ತದೆ ನೋಂದಣಿ ಮಾಡಿದ್ದರು. ಸರ್ಕಾರಿ ಆಸ್ತಿಯನ್ನು ಕಬಳಿಸುತ್ತಿರುವ ಭೂ ಹಗರಣವನ್ನು ಮಾರ್ಚ್ 5 ರಂದು ನಾನು ಬಯಲಿಗೆಳೆದಿದ್ದೆ. ಇದಾದ ಕೇವಲ 24 ಗಂಟೆಯೊಳಗೆ, ಅಂದರೆ ಮಾರ್ಚ್ 6ರಂದು ಪ್ರಶಾಂತ್ ಎಂ.ಉಚ್ಚಿಲ್ ಅವರು ಬೆಂಗಳೂರಿನ ಇಬ್ಬರು ಡೆವಲಪರ್ಸ್‌ಗೆ ಮಾಡಿಕೊಟ್ಟಿದ್ದ ಸೇಲ್ ಅಗ್ರಿಮೆಂಟ್ ಅನ್ನು ರದ್ದು ಮಾಡಿದ್ದಾರೆ. ಆದರೆ ಸೇಲ್ ಅಗ್ರಿಮೆಂಟ್ ಮಾಡುವಾಗ ಸಹಿ ಮಾಡಿದ್ದ ಉಳಿದ 12 ಮಂದಿ ಇದಕ್ಕೆ ಸಹಿ ಮಾಡಿಲ್ಲ ಎಂದು ಶ್ರೀವತ್ಸ ಮಾಹಿತಿ ನೀಡಿದರು.

ನಾನು ಭೂ ಅಕ್ರಮ ಬಯಲಿಗೆಳೆದ ಕೇವಲ 24 ಗಂಟೆಯೊಳಗೆ ಸೇಲ್ ಅಗ್ರಿಮೆಂಟ್ ರದ್ದು ಮಾಡಿರುವುದು ಹಾಗೂ ಇದಕ್ಕೆ ಒಬ್ಬರು ಮಾತ್ರ ಸಹಿ ಮಾಡಿ ಉಳಿದ 12 ಮಂದಿ ಸಹಿ ಹಾಕದಿರುವುದರ ಹಿಂದೆ ಏನೋ ಮಸಲತ್ತಿದೆ! ಈ ಮೊದಲು ಇದೇ ವ್ಯಕ್ತಿಗಳು 24.10 ಎಕರೆ ತಮಗೆ ಸೇರಬೇಕೆಂದು ಹೈಕೋರ್ಟ್‌ನಲ್ಲಿ ಪ್ರಶ್ನಿಸಿ, ತರುವಾಯ ಅರ್ಜಿಯನ್ನು ವಾಪಸ್ಸು ಪಡೆದು, ನಂತರ ಇದೇ ಆಸ್ತಿಯನ್ನು ಮಾರಾಟ ಮಾಡಿದ್ದರು. ಈಗ ಅದೇ ರೀತಿಯ ಬೆಳವಣಿಗೆ ನಡೆದಿದ್ದು, ನನಗೆ ವ್ಯವಸ್ಥೆಯ ಬಗ್ಗೆಯೇ ಅನುಮಾನ ಮೂಡಿಸಿದೆ ಎಂದು ತಿಳಿಸಿದರು.

ಈ ಮಧ್ಯೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತರೆಡ್ಡಿ ಅವರು, ಸರ್ಕಾರದ ಆಸ್ತಿಯನ್ನು ಉಳಿಸುವ ನಿಟ್ಟಿನಲ್ಲಿ ಆರ್‌ಟಿಸಿಯಲ್ಲಿರುವ ಖಾಸಗಿ ವ್ಯಕ್ತಿಗಳ ಹೆಸರು ಕೈ ಬಿಟ್ಟು ಪೂರ್ಣವಾಗಿ ಸರ್ಕಾರದ ಹೆಸರಿಗೆ ಬದಲಾಯಿಸಲಾಗುವುದು ಎಂದು ಭರವಸೆ ನೀಡಿದ್ದಾರೆ. ತಂತ್ರಾಂಶದ ತಾಂತ್ರಿಕ ತೊಂದರೆಯಿಂದ ಸಾಧ್ಯವಾಗದ ಕಾರಣ ಗುರುವಾರದೊಳಗೆ ಈ ಕೆಲಸ ಮಾಡಿ ಮುಗಿಸುವುದಾಗಿ ಸ್ಪಷ್ಟನೆ ನೀಡಿದ್ದಾರೆ. ಈ ಮೂಲಕ ಸರ್ಕಾರಿ ಆಸ್ತಿ ಕಬಳಿಕೆದಾರರ ಪಾಲಾಗಲು ಬಿಡದೆ ತಕ್ಷಣ ಕ್ರಮ ಕೈಗೊಂಡಿರುವುದಕ್ಕೆ ಡಾ.ಮಹದೇವಪ್ಪ ಹಾಗೂ ಲಕ್ಷ್ಮಿ ಕಾಂತರೆಡ್ಡಿ ಅವರನ್ನು ಅಭಿನಂದಿಸುತ್ತೇನೆ ಎಂದರು.

ಮೈಸೂರು ಮಾಡಿದ್ದಾರೆ!

ಬಜೆಟ್ ಮಂಡಿಸಿದ ಸಿದ್ದರಾಮಯ್ಯ ಏನು ಏನು ಕೊಡುಗೆ ನೀಡಿದ್ದಾರೆ ಎಂದು ಮರು ಪ್ರಶ್ನಿಸಿದರು. ಫಿಲಂ ಸಿಟಿ ಎಂಬುದು ಸಿದ್ದರಾಮಯ್ಯ ಅವರ ಬಜೆಟ್‌ನಲ್ಲಿ ಮೆಗಾ ಸಿರಿಯಲ್ ಆಗಿದೆ. ಈ ತನಕ ಫಿಲಂ ಸಿಟಿಯ ಸಣ್ಣ ಪ್ರಕ್ರಿಯೆಯೂ ನಡೆದಿಲ್ಲ. ಈ ಮೂಲಕ ತವರು ಜಿಲ್ಲೆಗಾಗಿ ಅವರು ಒಂದಾದರೂ ಘನ ಕಾರ್ಯ ಮಾಡಿದ್ದಾರೆಯೇ ಎಂದು ಕೇಳಿದರು.

ಜಯದೇವ ಆಸ್ಪತ್ರೆ, ಕಿದ್ವಾಯಿ ಆಸ್ಪತ್ರೆ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸೇರಿದಂತೆ ಬಹಳಷ್ಟು ಅಭಿವೃದ್ಧಿ ಬಿಜೆಪಿ ಸರ್ಕಾರದ ಕೊಡುಗೆಯಾಗಿದೆ. ಹಾಗಾದರೆ ಇವರು ನೀಡಿರುವ ಕೊಡುಗೆಯಾದರೂ ಏನು ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ಸಭೆ, ಸಮಾರಂಭಗಳಲ್ಲಿ ಉಡಾಫೆ ಮಾತಾಡುವುದಷ್ಟೆ ಸಿದ್ದರಾಮಯ್ಯ ಅವರಿಗೆ ಗೊತ್ತು ಎಂದು ಟೀಕಿಸಿದರು. ಇನ್ನು ಒಂದು ತಿಂಗಳು ಅಧಿಕಾರದಲ್ಲಿ ಇರುತ್ತಾರೋ ಅಥವಾ ಹೀಗೆ ಗುದ್ದಾಡಿಕೊಂಡು ಅಧಿಕಾರ ಪೂರ್ಣಗೊಳಿಸುತ್ತಾರೆಯೋ ಗೊತ್ತಿಲ್ಲ. ಆದರೆ ತಮ್ಮ ಅಧಿಕಾರಾವಧಿಯಲ್ಲಿ ಯಾವ ಅಭಿವೃದ್ಧಿಯನ್ನು ಮಾಡಿಲ್ಲ ಎಂದು ದೂರಿದರು.

ಮುಂದೆ ಹಾಕುತ್ತೇವೆ!!

ಇದನ್ನು ತೆರವು ಮಾಡುವಂತೆ ಕಳೆದ 15 ದಿನದ ಹಿಂದೆ ನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದ್ದೆವು. ಆದರೆ ಈ ತನಕ ಒಂದೇ ಒಂದು ಫ್ಲೆಕ್ಸ್ ತೆರವು ಮಾಡಿಲ್ಲ ಎಂದು ಪ್ರತಾಪ್ ಸಿಂಹ ಆಕ್ರೋಶ ವ್ಯಕ್ತಪಡಿಸಿದರು. ನಗರ ಪಾಲಿಕೆ ಆಯುಕ್ತ ಷೇಕ್ ಆಸೀಫ್ ತನ್ವೀರ್ ಅವರು ನಾವು ಕೊಟ್ಟ ಮನವಿಗೆ ಬೆಲೆ ಕೊಟ್ಟಿಲ್ಲ. ಹೋಗಲಿ ಜನರ ಸಮಸ್ಯೆಯನ್ನೂ ಆಲಿಸುತ್ತಿಲ್ಲ. ಸಿಎಂ ಸಿದ್ದರಾಮಯ್ಯ ಬಂದಾಗ ಅವರ ಹಿಂದೆ ನಿಂತು ಸಲಾಂ ಹೊಡೆಯುವುದಷ್ಟೆ ಇವರ ಕೆಲಸವೇ ಎಂದು ತರಾಟೆಗೆ ತೆಗೆದುಕೊಂಡರು. ಏರ್ ಕಂಡಿಷನ್ ಕೊಠಡಿಯಲ್ಲಿ ಕುಳಿತು ಕೆಲಸ ಮಾಡುವುದಲ್ಲ, ಹೊರಗೆ ಬಂದು ಜನರ ಕೆಲಸ ಮಾಡಬೇಕು. ಮೈಸೂರು ಜನರು ಬಹಳ ತಾಳ್ಮೆ ವಹಿಸಿದ್ದಾರೆ. ಒಂದು ದಿನ ತಿರುಗಿ ಬಿದ್ದರೆ ಯಾರಿಗೂ ಉಳಿಗಾಲವಿಲ್ಲ ಎಂದು ಪ್ರತಾಪ್ ಸಿಂಹ ಕಟು ಶಬ್ಧಗಳಲ್ಲಿ ಎಚ್ಚರಿಸಿದರು.

ವರಿಷ್ಠರ ಬುಲಾವ್

ನಮ್ಮವರಿಗೆ ಒಳ್ಳೆಯ ಸುದ್ದಿ ದೊರೆಯಲಿದೆ ಎಂದು ವಿಧಾನಸಭೆ ಮೊಗಸಾಲೆಯಲ್ಲಿ ಹೇಳಿಕೊಳ್ಳುತ್ತಿದ್ದರು. ದೆಹಲಿಯಿಂದ ಹಿಂತಿರುಗಿದ ನಂತರ ನೇರವಾಗಿ ವಿಧಾನಸಭೆಗೆ ಆಗಮಿಸಿದ ಶಿವಕುಮಾರ್, ಸದನ ನಡೆಯುವ ಸಂದರ್ಭದಲ್ಲೇ ಪಕ್ಷದ ಎಲ್ಲಾ ಶಾಸಕರನ್ನು ಖುದ್ದಾಗಿ ಮಾತನಾಡಿಸಿ, ಸಂಜೆ ಔತಣಕೂಟಕ್ಕೆ ಆಹ್ವಾನ ನೀಡಿದರು.

ಕೆಪಿಸಿಸಿ ಅಧ್ಯಕ್ಷರಾಗಿ ಇಂದಿಗೆ ಆರು ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಪಕ್ಷದ ಸಚಿವರು ಮತ್ತು ಶಾಸಕರಿಗೆ ನಗರದ ಪಂಚತಾರಾ ಹೋಟೆಲೊಂದರಲ್ಲಿ ರಾತ್ರಿ ಔತಣಕೂಟ ಏರ್ಪಡಿಸಿದ್ದರು.

ಡಿ.ಕೆ.ಶಿವಕುಮಾರ್ ಭರ್ಜರಿ ಭೋಜನಕೂಟ

ಡಿ.ಕೆ.ಶಿವಕುಮಾರ್ ಅವರಿಗೆ ಟಾಂಗ್ ನೀಡುತ್ತಿದ್ದ ಸಿದ್ದರಾಮಯ್ಯರ ಅತ್ಯಾಪ್ತರೂ ಖುಷಿಯಿಂದಲೇ ಜೊತೆಯಲ್ಲಿ ನಿಂತು ಫೋಟೋಗೆ ಪೋಸ್ ನೀಡಿದರು. ಬಿಜೆಪಿ ಶಾಸಕರಾದ ಎಸ್.ಟಿ.ಸೋಮ ಶೇಖರ್, ಶಿವರಾಮ್ ಹೆಬ್ಬಾರ್ ಕೂಡ ಭೋಜನಕೂಟಕ್ಕೆ ಆಗಮಿಸಿದ್ದರು.

ಗೃಹಸಚಿವ ಡಾ.ಜಿ.ಪರಮೇಶ್ವರ್, ಕಾನೂನು ಸಚಿವ ಹೆಚ್.ಕೆ.ಪಾಟೀಲ್, ಕೆ.ಹೆಚ್.ಮುನಿಯಪ್ಪ, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ಚಲುವರಾಯಸ್ವಾಮಿ, ಕೃಷ್ಣಭೈರೇಗೌಡ, ಆರ್.ವಿ. ದೇಶಪಾಂಡೆ, ರಾಮಲಿಂಗಾರೆಡ್ಡಿ, ಸಿ.ಪಿ.ಯೋಗೇಶ್ವರ್, ಭೈರತಿ ಸುರೇಶ್, ಜಮೀರ್ ಅಹಮದ್, ದಿನೇಶ್ ಗೂಳಿಗೌಡ, ಟಿ.ಬಿ.ಜಯಚಂದ್ರ ಕುಣಿಗಲ್ ರಂಗನಾಥ್, ಪ್ರಿಯಾಂಕ್ ಖರ್ಗೆ, ಡಿ.ಸುಧಾಕರ್, ಶರತ್ ಬಚ್ಚೇಗೌಡ, ಬಸಂತಪ್ಪ, ಎಂ,ಕೃಷ್ಣಪ್ಪ, ಎಸಿ ಶ್ರೀನಿವಾಸ್, ಪುಟ್ಟರಂಗ ಶೆಟ್ಟಿ, ಕೆ.ಎನ್.ರಾಜಣ್ಣ, ಮಾಗಡಿ ಬಾಲಕೃಷ್ಣ, ಬಿ.ನಾಗೇಂದ್ರ, ಲಕ್ಷ್ಮಣ್ ಸವದಿ, ಜಿ.ಟಿ.ಪಾಟೀಲ್, ಕೆ.ಎಂ.ಶಿವಲಿಂಗೇಗೌಡ, ಯು.ಬಿ.ಬಣಕಾರ್, ಚನ್ನರಾಜ್ ಹಟ್ಟಿಹೊಳಿ, ಸುನಿಲ್ ಕುಮಾರ್, ಚಂದ್ರಶೇಖರ ಪಾಟೀಲ್, ಎಸ್.ಎಸ್.ಮಲ್ಲಿಕಾರ್ಜುನ, ಪುಟ್ಟಸ್ವಾಮಿಗೌಡ, ಮಂಜುನಾಥ್ ಭಂಡಾರಿ, ಅಶೋಕ್ ರೈ, ಎ.ಆರ್.ಕೃಷ್ಣಮೂರ್ತಿ, ಎನ್.ಎಸ್.ಭೋಸರಾಜು, ಬೇಳೂರು ಗೋಪಾಲಕೃಷ್ಣ, ಜಗದೇವ್ ಗುತ್ತೇದಾರ್, ಮಧು ಬಂಗಾರಪ್ಪ ಇತರರು ಡಿನ್ನರ್ ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು.

ಡಿಕೆಶಿ ಧನ್ಯವಾದ ಭೋಜನಕೂಟದಲ್ಲಿ ಪಾಲ್ಗೊಂಡು ಶುಭಕೋರಿದ ಎಲ್ಲರಿಗೂ ಡಿ.ಕೆ.ಶಿವಕುಮಾರ್ ಧನ್ಯವಾದ ತಿಳಿಸಿದ್ದಾರೆ. ಎಲ್ಲಾ ನನ್ನ ಆತ್ಮೀಯರಿಗೆ ಹೃದಯಪೂರ್ವಕ ಧನ್ಯವಾದಗಳು. 6 ವರ್ಷಗಳ ಹಿಂದೆ ಕೆಪಿಸಿಸಿಯನ್ನು ಮುನ್ನಡೆಸುವ ಮಹತ್ವದ ಜವಾಬ್ದಾರಿಯನ್ನು ನನಗೆ ವಹಿಸಲಾಯಿತು. ಅಂದಿನಿಂದ ಎದುರಿಸಿದ ಪ್ರತಿಯೊಂದು ಸವಾಲು ಮತ್ತು ಸಾಧಿಸಿದ ಪ್ರತಿಯೊಂದು ಗೆಲುವು, ನಮ್ಮ ತಂಡದ ಹಾಗೂ ನಿಷ್ಠಾವಂತ ಕಾರ್ಯಕರ್ತರ ಪ್ರಯತ್ನವಾಗಿದೆ. ರಾಜ್ಯದ ಅಭಿವೃದ್ಧಿ, ಜನಸೇವೆ ಮತ್ತು ಪಕ್ಷದ ಬಲವರ್ಧನೆಗಾಗಿ ನಾವೆಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ. ನಿಮ್ಮೆಲ್ಲರ ಸಹಕಾರ ಮತ್ತು ಬೆಂಬಲ ಸದಾ ಹೀಗೆಯೇ ಮುಂದುವರಿಯಲಿ ಎಂದು ಮನವಿ ಮಾಡಿದ್ದಾರೆ.

ರಾಜ್ಯಾದ್ಯಂತ ಎಂದಿನಂತೆ ಓಪಿಡಿ ಸೇವೆ

ಬೇಡಿಕೆಯೊಂದನ್ನು ಒಪ್ಪಿಲ್ಲ. ವೃಂದ, ನೇಮಕಾತಿ, ಮುಂಬಡ್ತಿ, ಎನ್‌ಎಚ್‌ಎಂ ಸೇರಿದಂತೆ ಇತರೆ ಬೇಡಿಕೆಗಳ ಈಡೇರಿಕೆ ಬಗ್ಗೆ ಮತ್ತೆ ಒಂದು ವಾರದಲ್ಲಿ ಸಭೆ ನಡೆಸಿ ಕ್ರಮ ವಹಿಸಲಿದ್ದೇವೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಬೇಡಿಕೆಗಳು: ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಕಾಲಕಾಲಕ್ಕೆ ಸಮರ್ಪಕವಾಗಿ ಔಷಧಿಗಳನ್ನು ಸರಬರಾಜು ಮಾಡುವುದು, ನೇಮಕಾತಿ ನಿಯಮಗಳನ್ನು ಪ್ರತಿ 3 ವರ್ಷಕ್ಕೊಮ್ಮೆ ತಿದ್ದುಪಡಿ ಮಾಡುವುದು, ಇಲಾಖೆಯ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಕಾಲಕಾಲಕ್ಕೆ ಪ್ರಕಟಿಸುವುದು, ಅಧಿಕಾರಿ–ನೌಕರರಿಗೆ ಕೂಡಲೇ ಮುಂಬಡ್ತಿಗಳನ್ನು ನೀಡುವುದು, ಸೇವಾನಿರತ ವೈದ್ಯರು, ಅಧಿಕಾರಿ–ನೌಕರರ ಉನ್ನತ ವ್ಯಾಸಂಗ/ ಸ್ನಾತಕೋತ್ತರ ವ್ಯಾಸಂಗಕ್ಕೆ ಅವಕಾಶ ನೀಡುವುದು, ವರ್ಗಾವಣೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸುವುದು, ವೈದ್ಯಕೀಯ ಶಿಕ್ಷಣ ಇಲಾಖೆ, ಸ್ವಾಯತ್ತ ಸಂಸ್ಥೆಗಳು ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ಹುದ್ದೆಗಳಿಗೆ ನೇಮಕಾತಿ, ಮುಂಬಡ್ತಿ ಹಾಗೂ ವರ್ಗಾವಣೆಗಾಗಿ ಆರೋಗ್ಯ ಇಲಾಖೆಯ ವೈದ್ಯರು, ಅಧಿಕಾರಿ–ನೌಕರರನ್ನೇ ನಿಯೋಜಿಸುವುದು ಸೇರಿದಂತೆ ಇನ್ನಿತರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ವೈದ್ಯರು ಮುಷ್ಕರಕ್ಕೆ ಮುಂದಾಗಿದ್ದರು.

ವಿಧಾನಸಭೆಗೆ ಆರೋಗ್ಯ ಸಚಿವರ ಉತ್ತರ: ಇದಕ್ಕೂ ಮುನ್ನ ವಿಧಾನಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಸುನಿಲ್ ಕುಮಾರ್ ಸೇರಿದಂತೆ ಮೂವರು ಶಾಸಕರು ಎತ್ತಿದ ಪ್ರಶ್ನೆಗೆ ಉತ್ತರಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ನಾವು ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಯೊಂದಿಗೆ ಚರ್ಚಿಸಿದ್ದೇವೆ. ನಾವು ಅವರೊಂದಿಗೆ ಎರಡು ಬಾರಿ ಮಾತನಾಡಿದ್ದೇವೆ. ನಿನ್ನೆ, ನಮ್ಮ ಆಯುಕ್ತರ ಮೂಲಕ ಸರ್ಕಾರದ ಕ್ರಮಗಳನ್ನು ಅವರಿಗೆ ತಿಳಿಸಿದ್ದೇವೆ. ಇಲಾಖೆ ಮತ್ತು ಮುಖ್ಯವಾಗಿ ಸಾರ್ವಜನಿಕರ ಹಿತದೃಷ್ಟಿಯಿಂದ ನಾವು ಏನು ಮಾಡಬಹುದು ಎಂಬುದನ್ನು ಚರ್ಚಿಸಿ ಪರಿಹರಿಸುತ್ತೇವೆ ಎಂದು ತಿಳಿಸಿದರು.

ಮೈಸೂರು ಹೋಟೆಲ್‌ಗಳಲ್ಲಿ ಗ್ಯಾಸ್ ಟ್ರಬಲ್

(ಸ್ಟ್ರೀಟ್ ಫುಡ್) ಮೇಲೂ ಮುಂದಿನ ದಿನಗಳಲ್ಲಿ ಇದರ ಬಿಸಿ ತಟ್ಟಬಹುದು. ಇಲ್ಲಿ ಶೇ.80ರಷ್ಟು ಗೃಹ ಬಳಕೆ ಅಡುಗೆ ಅನಿಲವನ್ನೇ ಬಳಸುತ್ತಿರುವ ಕಾರಣ ಸಮಸ್ಯೆ ಆಗದೆಯೂ ಇರಬಹುದು. ವಾಣಿಜ್ಯ ಸಿಲಿಂಡರ್ ಸಮಸ್ಯೆ ಇದೇ ರೀತಿ ಮುಂದುವರೆದಲ್ಲಿ ಈ ಹಿಂದಿನ ಸೌದೆ, ಹೊಟ್ಟು, ಇದ್ದಿಲು ಒಲೆ ವ್ಯವಸ್ಥೆ ಅಳವಡಿಸಿಕೊಳ್ಳಲು ಸಜ್ಜಾಗಲು ಹೋಟೆಲ್ ಮಾಲೀಕರಿಗೆ ಸಲಹೆ ನೀಡಲಾಗಿದೆ ಎಂದರು. ಮೈಸೂರು ನಗರದ ಅಮರ್‌ದೀಪ್ ಗ್ಯಾಸ್ ಏಜೆನ್ಸಿ ಮಾಲೀಕರೂ ಆದ ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಜೆ.ಪಟೇಲ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಮೈಸೂರಿನಲ್ಲಿ ವಾಣಿಜ್ಯ ಸಿಲಿಂಡರ್ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದ್ದು, ಹೋಟೆಲ್ ಉದ್ಯಮಕ್ಕೆ ಭಾರೀ ಹೊಡೆತ ಬಿದ್ದಿದೆ. ಜೊತೆಗೆ ವಾಣಿಜ್ಯ ಸಿಲಿಂಡರ್ ಬಳಕೆಯಾಗುವ ಮದುವೆ ಸೇರಿದಂತೆ ಇನ್ನಿತರ ಸಮಾರಂಭಕ್ಕೂ ತೊಂದರೆ ಎದುರಾಗಲಿದೆ. ಈ ಸಂಕಷ್ಟ ಯಾವಾಗ ನಿವಾರಣೆಯಾಗುತ್ತದೆ ಎಂಬುದನ್ನು ಕಾದು ನೋಡಬೇಕಿದೆ ಎಂದು ತಿಳಿಸಿದರು.

ಸರ್ಕಾರಿ ಸ್ವಾಮ್ಯದ ಕಂಪನಿಗಳು ಸೇರಿದಂತೆ ಎಲ್ಲಾ ಖಾಸಗಿ ಕಂಪನಿಗಳು ಉತ್ಪಾದನೆ ಹಾಗೂ ಪೂರೈಕೆ ನಿಲ್ಲಿಸಿವೆ. ಕೆಲ ಡೀಲರ್‌ಗಳ ಬಳಿ ಐದು ಕೆಜಿಯ ಫ್ರೀ ಟ್ರೇಡ್ ಎಲ್‌ಪಿಜಿ ಸಿಲಿಂಡರ್‌ಗಳು (ಎಫ್‌ಟಿಎಲ್) ದಾಸ್ತಾನು ಇದ್ದು, ಅವುಗಳನ್ನು ಪೂರೈಕೆ ಮಾಡಲು ನಿರ್ದೇಶನ ಬಂದಿದೆ. ಆದರೆ ರಿಯಾಯಿತಿ ದರದಲ್ಲಿ ನೀಡಲು ಅವಕಾಶವಿಲ್ಲ ಎಂದು ತಿಳಿಸಿದರು.

ಮೈಸೂರಿನ ಕಡಕೊಳದಲ್ಲಿರುವ ಐಓಸಿಎಲ್ ಘಟಕ ಹಾಗೂ ಮೈಸೂರಿನ ಹೆಬ್ಬಾಳಿನ ಹೆಚ್‌ಪಿಸಿಎಲ್ ಘಟಕದಲ್ಲಿ ಸಹ ಉತ್ಪಾದನೆ ಮತ್ತು ಪೂರೈಕೆ ಸ್ಥಗಿತಗೊಳಿಸಿವೆ ಯುದ್ಧ ನಿಂತರೂ ಎಲ್ಲವೂ ಸಹಜ ಸ್ಥಿತಿಗೆ ಮರಳಲು ಕನಿಷ್ಠ 6 ತಿಂಗಳು ಬೇಕಾಗಬಹುದು ಎಂದರು.

ಭವಿಷ್ಯವಿದೆ: ಸಿಎಂ

ನಡವಳಿಕೆ ಆಗಿದೆ ಎಂದಿದ್ದಾರೆ. ಕೋಮುವಾದಿ ಶಕ್ತಿಗಳನ್ನು ಸೋಲಿಸಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಪಕ್ಷದ ನಾಯಕರು ಮತ್ತು ಕಾರ್ಯಕರ್ತರ ಜೊತೆಯಲ್ಲಿ ಡಿ.ಕೆ.ಶಿವಕುಮಾರ್ ಹಗಲಿರುಳು ದುಡಿದಿದ್ದಾರೆ. ರಾಜ್ಯವನ್ನು ಸರ್ವ ಜನಾಂಗದ ಶಾಂತಿಯ ತೋಟವಾಗಿ ಮತ್ತೆ ಕಟ್ಟುವಲ್ಲಿ ಶಿವಕುಮಾರ್ ನನ್ನ ಹೆಗಲಿಗೆ ಹೆಗಲಾಗಿ ನಿಂತಿದ್ದಾರೆ. ನನಗಿಂತ ಕಿರಿಯರಾದ ಶಿವಕುಮಾರ್ ಅವರಿಗೆ ಉಜ್ವಲವಾದ ರಾಜಕೀಯ ಭವಿಷ್ಯವಿದೆ. 2028ರಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎನ್ನುವುದು ನಮ್ಮೆಲ್ಲರ ಬಯಕೆಯಾಗಿದೆ. ಇದಕ್ಕಾಗಿ ನಡೆಯುವ ಪಕ್ಷದ ಸಂಘಟನೆ ಮತ್ತು ಹೋರಾಟದಲ್ಲಿ ನಾನು ಕೂಡಾ ಜೊತೆ ಇರುತ್ತೇನೆ ಎಂದು ತಿಳಿಸಿದ್ದಾರೆ.

ತೈಲ ಬಿಕ್ಕಟ್ಟು

ಮತ್ತು ಇದು ಅಲ್ಪಾವಧಿಯ ಪ್ರವಾಸ ಆಗಲಿದೆ ಎಂಬುದನ್ನು ನೀವು ನೋಡುತ್ತೀರಿ ಎಂದು ನಾನು ಭಾವಿಸುತ್ತೇನೆ ಎನ್ನುವ ಮೂಲಕ ಶೀಘ್ರದಲ್ಲೇ ಯುದ್ಧ ಕೊನೆಯಾಗಲಿದೆ ಎಂಬ ಸುಳಿವನ್ನು ನೀಡಿದ್ದರು. ಇದೇ ವೇಳೆ ಇರಾನ್‌ನಿಂದ ಜಾಗತಿಕ ಪೂರೈಕೆಯಲ್ಲಿ ಅಡ್ಡಿ ಉಂಟಾದರೆ ಈ ಯುದ್ಧ ಇನ್ನಷ್ಟು ಭೀಕರಗೊಳ್ಳಬಹುದು ಎಂದು ಎಚ್ಚರಿಕೆ ಸಂದೇಶ ರವಾನಿಸಿದ್ದರು.

ಇನ್ನೂ ಮುಗಿದಿಲ್ಲ: ಯುದ್ಧದ ಬಗ್ಗೆ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಮಂಗಳವಾರ ಭಿನ್ನ ಹೇಳಿಕೆ ನೀಡಿದ್ದಾರೆ. ಇರಾನ್‌ನ ಜನರನ್ನು ದೌರ್ಜನ್ಯದ ನೊಗದಿಂದ ಮುಕ್ತ ಗೊಳಿಸುವುದು ನಮ್ಮ ಆಕಾಂಕ್ಷೆಯಾಗಿದೆ. ಇಲ್ಲಿಯವರೆಗೆ ಕೈಗೊಂಡ ಕ್ರಮಗಳಿಂದ ನಾವು ನಮ್ಮ ಶತ್ರುಗಳ ಮೂಳೆ ಮುರಿದಿದ್ದೇವೆ. ನಮ್ಮ ಕೆಲಸ ಇನ್ನೂ ಮುಗಿದಿಲ್ಲ ಎಂದಿದ್ದಾರೆ. ಈ ಮೂಲಕ ಇರಾನ್ ಮೇಲಿನ ವೈಮಾನಿಕ ದಾಳಿಯನ್ನು ಮುಂದುವರೆಸುವ ಸ್ಪಷ್ಟ ಸೂಚನೆ ನೀಡಿದ್ದಾರೆ.

ಮೈಸೂರು ಎಸ್‌ಎಂಟಿ ಆಸ್ಪತ್ರೆಯಲ್ಲಿ ಗರ್ಭಕಂಠ ಕ್ಯಾನ್ಸರ್ ನಿರೋಧಕ ಲಸಿಕೆ ಅಭಿಯಾನಕ್ಕೆ ಚಾಲನೆ

ಮೈಸೂರು, ಮಾ.10(ಎಂಕೆ)– ಮೈಸೂರಿನ ಎಸ್‌ಎಂಟಿ(ಸೇಠ್ ಮೋಹನ್ ದಾಸ್ ತುಳಸಿದಾಸ್ ತಾಯಿ ಮತ್ತು ಮಕ್ಕಳ ಆಸ್ಪತ್ರೆ) ಆಸ್ಪತ್ರೆಯಲ್ಲಿ 14 ವರ್ಷದ ಹೆಣ್ಣು ಮಕ್ಕಳಿಗೆ ಗರ್ಭಕಂಠ ಕ್ಯಾನ್ಸರ್ ನಿರೋಧಕ(ಹೆಚ್‌ಪಿವಿ) ಲಸಿಕಾ ಅಭಿಯಾನಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಜಿಲ್ಲಾ ಮಟ್ಟದ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ, ಹೆಚ್‌ಪಿವಿ(ಹ್ಯೂಮನ್ ಪ್ಯಾಪಿಲೋಮವೈರಸ್ ಲಸಿಕೆ) ಲಸಿಕೆಯು ಸೋಂಕುಗಳಿಂದ ಉಂಟಾಗುವ ಗರ್ಭಕಂಠ ಕ್ಯಾನ್ಸರ್, ಯೋನಿ, ಶಿಶ್ನ, ಗುದ ಮತ್ತು ಇನ್ನಿತರೆ ಭಾಗದಲ್ಲಿ ಕಂಡುಬರುವ ಕ್ಯಾನ್ಸರ್ ಅನ್ನು ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು.

ಹೆಣ್ಣು ಮಕ್ಕಳ ಆರೋಗ್ಯ ದೇಶದ ಭವಿಷ್ಯವಾಗಿದ್ದು, 14 ವರ್ಷ ತುಂಬಿದ ಹಾಗೂ 15 ವರ್ಷದೊಳಗಿನ ಹೆಣ್ಣು ಮಕ್ಕಳಿಗೆ ಮಾರ್ಗಸೂಚಿ ಅನುಸಾರ ಲಸಿಕೆ ನೀಡಲಾಗುವುದು. ಲಸಿಕಾ ಅಭಿಯಾನವು ಜಿಲ್ಲೆಯ ಎಲ್ಲಾ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪಡೆದುಕೊಳ್ಳಬಹುದಾಗಿದೆ ಎಂದು ಮಾಹಿತಿ ನೀಡಿದರು.


ಮೈಸೂರಿನ ಎಸ್‌ಎಂಟಿ ಆಸ್ಪತ್ರೆಯಲ್ಲಿ ಹೆಚ್‌ಪಿವಿ ಲಸಿಕಾ ಅಭಿಯಾನಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ಲಸಿಕೆ ಪಡೆದ ಹೆಣ್ಣು ಮಕ್ಕಳು ಯೂ–ವಿನ್ ತಂತ್ರಾಂಶದಲ್ಲಿ ನೋಂದಣಿ ಮಾಡಿದಲ್ಲಿ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ. ಅಲ್ಲದೆ ಲಸಿಕೆ ಪಡೆಯಲು ಆಧಾರ್ ಕಾರ್ಡ್ ಕಡ್ಡಾಯವಾಗಿದ್ದು, ಸುರಕ್ಷಿತ ಮತ್ತು ಪರಿಣಾಮಕಾರಿ ಲಸಿಕೆ ಇದಾಗಿದೆ. ಹೆಣ್ಣು ಮಕ್ಕಳ ಆರೋಗ್ಯದ ದೃಷ್ಟಿಯಿಂದ ಪೋಷಕರು ಕಡ್ಡಾಯವಾಗಿ ಲಸಿಕೆ ಹಾಕಿಸಲು ಸಹಕರಿಸುವಂತೆ ಕೋರಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ ಮಹಮ್ಮದ್ ಸಿರಾಜ್ ಅಹಮ್ಮದ್, ಮೈಸೂರು ತಾಲೂಕು ಆರೋಗ್ಯಾಧಿಕಾರಿ(ಪ್ರ) ಡಾ. ಅರುಣಕುಮಾರ, ಎಸ್‌ಎಂಟಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಅನುರಾಧ ಮತ್ತಿತರರು ಉಪಸ್ಥಿತರಿದ್ದರು.

ಟಿಬೆಟಿಯನ್ನರ ಮೇಲಿನ ಚೀನಾ ದಬ್ಬಾಳಿಕೆ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಟಿಬೆಟಿಯನ್ನರ 67ನೇ ರಾಷ್ಟ್ರೀಯ ಬಂಡಾಯ ದಿನದ ಅಂಗವಾಗಿ ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೈಸೂರು, ಮಾ.10(ಎಂಕೆ)– ಟಿಬೆಟಿಯನ್ನರ 67ನೇ ರಾಷ್ಟ್ರೀಯ ಬಂಡಾಯ ದಿನದ ಅಂಗವಾಗಿ ಹಾಗೂ ಟಿಬೆಟಿಯನ್ನರ ಮೇಲಿನ ಚೀನಾ ದಬ್ಬಾಳಿಕೆ ಖಂಡಿಸಿ ಹುಣಸೂರು, ಬೈಲಕುಪ್ಪೆ, ಕೊಳ್ಳೇಗಾಲದ ಮಿಡಲ್ ವೇ ಟಿಬೆಟಿಯನ್ ಯೂತ್ ಕಾಂಗ್ರೆಸ್, ಪ್ರಾದೇಶಿಕ ಟಿಬೆಟಿಯನ್ ವುಮೆನ್ಸ್ ಅಸೋಸಿಯೇಷನ್ ಮತ್ತು ಮೈಸೂರು ಟಿಬೆಟಿಯನ್ ಸ್ಟೂಡೆಂಟ್ ಯೂನಿಯನ್ ವತಿಯಿಂದ ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೈಸೂರಿನ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ಜಮಾಯಿಸಿದ ನೂರಾರು ಮಂದಿ ಟಿಬೆಟಿಯನ್ನರು ದೇವರಾಜ ಅರಸು ರಸ್ತೆ ಮಾರ್ಗವಾಗಿ ಹಳೆ ಜಿಲ್ಲಾಧಿಕಾರಿ ಕಚೇರಿಯವರೆಗೆ ಮೆರವಣಿಗೆ ನಡೆಸಿದರು. ಮೆರವಣಿಗೆಯುದ್ದಕ್ಕೂ ಚೀನಾ ಕಮ್ಯೂನಿಸ್ಟ್ ಸರ್ಕಾರದಿಂದ ಟಿಬೆಟಿಯನ್ನರ ಮೇಲಾಗುತ್ತಿರುವ ದಬ್ಬಾಳಿಕೆ ನಿಲ್ಲಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಟಿಬೆಟ್‌ನಲ್ಲಿ ಟಿಬೆಟಿಯನ್ನರು ಚೀನಾ ಆಳ್ವಿಕೆಯಲ್ಲಿ ಊಹಿಸಲಾಗದ ಹಿಂಸೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಟಿಬೆಟಿಯನ್ನರ ಕೇಂದ್ರೀಯ ಆಡಳಿತ ವ್ಯವಸ್ಥೆಯೊಂದಿಗೆ 14ನೇ ದಲಾಯಿಲಾಮರ ಮಧ್ಯಸ್ಥಿಕೆಯಲ್ಲಿ ಮಾತುಕತೆಗೆ ಮುಂದಾಗಬೇಕು. ಟಿಬೆಟಿನ ಅಸ್ತಿತ್ವದ ಬಗ್ಗೆ ವರದಿ ಮಾಡಲು ಅಂತಾರಾಷ್ಟ್ರೀಯ ಮಾಧ್ಯಮಕ್ಕೆ ಒಪ್ಪಿಗೆ ಸೂಚಿಸಬೇಕು. ಟಿಬೆಟಿಯನ್ನರ ಭಾವನೆಗಳನ್ನು ಗೌರವಿಸಿ ಗಣಿಗಾರಿಕೆ ಮೂಲಕ ಆಗುತ್ತಿರುವ ಪರಿಸರದ ಮೇಲಿನ ಮಾಲಿನ್ಯ ತಡೆಯಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ಹೆಣ್ಣು ಮಕ್ಕಳೇ ಸ್ಟ್ರಾಂಗ್...! ಹಳ್ಳಿ, ಸಿಟಿ ಎಂಬುದಿಲ್ಲ!!

ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಫುಲ್ ಮಾರ್ಕ್ಸ್


ಮಹಾರಾಣಿ ಮಹಿಳಾ ಕಲಾ ಕಾಲೇಜಿನ 'ಪ್ರಿನ್ಸೆಸ್ ಅಥ್ಲೆಟಿಕ್ ಕ್ರೀಡಾಕೂಟ'ಕ್ಕೆ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಚಾಲನೆ ನೀಡಿದರು.

ಮೈಸೂರು, ಮಾ.10(ಎಂಕೆ)– ಹೆಣ್ಣು ಮಕ್ಕಳೇ ಸ್ಟ್ರಾಂಗ್. ಇದರ ಹೊರತಾಗಿ ಹಳ್ಳಿ ಮತ್ತು ಸಿಟಿಯ ಹೆಣ್ಣು ಮಕ್ಕಳು ಎಂಬುದಿಲ್ಲ ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಿಳಿಸಿದರು.

ಮೈಸೂರಿನ ಓವೆಲ್ ಮೈದಾನದಲ್ಲಿ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ವತಿಯಿಂದ ಹಮ್ಮಿಕೊಂಡಿದ್ದ 'ಪ್ರಿನ್ಸೆಸ್ ಅಥ್ಲೆಟಿಕ್ ಕ್ರೀಡಾಕೂಟ' ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾಕೂಟದಲ್ಲಿ ಗೆಲ್ಲುವುದಕ್ಕಿಂತ ಭಾಗವಹಿಸುವಿಕೆ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಕ್ರೀಡಾಕೂಟದಲ್ಲಿ ಭಾಗವಹಿಸುವ ಹೆಣ್ಣು ಮಕ್ಕಳು ಉತ್ತಮ ಪಥಸಂಚಲನ ಅಭ್ಯಾಸ ಮಾಡಬೇಕು ಎಂದರು.

ಜೀವನದಲ್ಲಿ ಶಿಸ್ತು ಬಹಳ ಮುಖ್ಯವಾಗಿದ್ದು, ಶಿಸ್ತಿನ ಜೀವನದಲ್ಲಿನ ಪ್ರತಿದಿನವೂ ಉತ್ತಮವಾಗುತ್ತಿರುತ್ತದೆ. ಅದೇ ರೀತಿ ಉತ್ತಮ ವ್ಯಕ್ತಿತ್ವವನ್ನು ವೃದ್ಧಿಸಿಕೊಳ್ಳಬೇಕು. ಅತೀ ಮುಖ್ಯವಾಗಿ ಮಾದಕ ವಸ್ತುಗಳಿಂದ ಹೆಣ್ಣು ಮಕ್ಕಳು ದೂರವಿರಬೇಕು. ಯಾವುದೋ ಅಥವಾ ಯಾರದೋ ಆಮಿಷಕ್ಕೊಳಗಾಗಿ ಮಾದಕ ವಸ್ತುಗಳ ಸೇವನೆ ಮಾಡಿದರೆ, ಅದು ನಿಮ್ಮ ಬದುಕನ್ನೇ ನಾಶ ಮಾಡುತ್ತದೆ ಎಂದು ಎಚ್ಚರಿಸಿದರು.

ಮೈಸೂರು ನಗರವನ್ನು ಮಾದಕ ವಸ್ತು ಮುಕ್ತ ನಗರವನ್ನಾಗಿಸುವ ದೃಷ್ಟಿಯಿಂದ ವ್ಯಾಪಕವಾಗಿ ವಿಮುಕ್ತಿ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಈ ಅಭಿಯಾನಕ್ಕೆ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳು ಸಹಕಾರ ನೀಡಬೇಕು. ಶಾಲಾ–ಕಾಲೇಜು ನೋಟಿಸ್ ಬೋರ್ಡ್‌ನಲ್ಲಿ ಅಭಿಯಾನಕ್ಕೆ ಸಂಬಂಧಿಸಿದ ಮಾಹಿತಿ ಜೊತೆಗೆ ಅನುಮಾನಾಸ್ಪದ ವ್ಯಕ್ತಿ ಅಥವಾ ಸ್ಥಳಗಳ ಮಾಹಿತಿಗಾಗಿ ಸಂಪರ್ಕ ಸಂಖ್ಯೆಯನ್ನು ನೀಡಲಾಗಿದೆ. ವಿಮುಕ್ತಿ ಅಭಿಯಾನಕ್ಕೆ ಪ್ರತಿಯೊಂದು ಶಾಲಾ–ಕಾಲೇಜು ಸಂಪೂರ್ಣ ಸಹಕಾರ ನೀಡಬೇಕು. ಹಾಗೆಯೇ ಕ್ರೀಡೆಯಲ್ಲಿ ಸೋಲು–ಗೆಲುವು ಸಹಜ. ಸೋಲು–ಗೆಲುವಿನ ಪಾಠ ಕಲಿತು, ಸೋಲಾದರೂ ಉತ್ತಮ ಮಾರ್ಗದಲ್ಲಿ ಸಾಗುವುದನ್ನು ಕಲಿಯಿರಿ ಎಂದರು. ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲರಾದ ಪ್ರೊ.ಎಂ.ಎಸ್. ಅನಿತಾ, ದೈಹಿಕ ಶಿಕ್ಷಣ ವಿಭಾಗದ ಮುಖ್ಯಸ್ಥ ಡಾ.ಮೋಹನ್‌ಕುಮಾರ್, ವ್ಯವಸ್ಥಾಪಕ ಕೆ.ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ದೇವಸ್ಥಾನದ ಹುಂಡಿ ಹಣ, ತಾಳಿ ಕಳವು

ಮೈಸೂರು, ಮಾ.10(ಎಂಕೆ)– ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನವೊಂದರ ಗೋಲಕ ಹುಂಡಿ ಒಡೆದು ಹಣ ದೋಚಿರುವ ಘಟನೆ ಸೋಮವಾರ ರಾತ್ರಿ ನಡೆದಿದೆ.

ವಿಜಯನಗರ ರೈಲ್ವೆ ಬಡಾವಣೆ ಸಮೀಪದ ಮಹದೇಶ್ವರ ಬಡಾವಣೆಯಲ್ಲಿರುವ ಚಾಮುಂಡೇಶ್ವರಿ ದೇವಸ್ಥಾನದ ಹುಂಡಿ ಒಡೆದಿರುವ ಖದೀಮರು, ಹುಂಡಿಯಲ್ಲಿದ್ದ ಹಣ ಹಾಗೂ 4 ಗ್ರಾಂ ಚಿನ್ನದ ತಾಳಿ ಕದ್ದೊಯ್ದಿದ್ದಾರೆ ಎಂದು ವಿಜಯನಗರ ಠಾಣೆ ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.

ನಾಳೆ ಉಚಿತ ಕಿವಿ ತಪಾಸಣೆ ಶಿಬಿರ

ಮೈಸೂರು, ಮಾ.10– ಮೈಸೂರಿನ ಅಗ್ರಹಾರದ ಸಯ್ಯಾಜಿರಾವ್ ರಸ್ತೆಯಲ್ಲಿರುವ ಒಟಿಕೇರ್ ಸ್ಪೀಚ್ ಅಂಡ್ ಹಿಯರಿಂಗ್ ಕ್ಲಿನಿಕ್ ವತಿಯಿಂದ ಮಾ.12 ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 3 ರವರೆಗೆ ಉಚಿತ ಕಿವಿ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9686699899 ಗೆ ಸಂಪರ್ಕಿಸುವಂತೆ ಶಿಬಿರದ ಆಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಡಿವಾಳ ಸಮುದಾಯ ಎಸ್‌ಸಿ ಸೇರ್ಪಡೆಗೆ ಆಗ್ರಹಿಸಿ ಮಾ.16 ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ

ಮೈಸೂರು,ಮಾ.10(ಜಿಎ)–ಮಡಿವಾಳ ಸಮುದಾಯವನ್ನು ಎಸ್‌ಸಿಗೆ ಸೇರ್ಪಡೆ ಮಾಡುವಂತೆ ಹಲವಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಸರ್ಕಾರ ನಿರ್ಲಕ್ಷಿಸುತ್ತಿದೆ. ಹೀಗಾಗಿ ಮಾ.16ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಂಡಿದ್ದು, ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಜಿಲ್ಲಾ ಮಡಿವಾಳ ಸಮುದಾಯದ ಮುಖಂಡ ಸಿದ್ದನಕೊಪ್ಪಲು ಕುಮಾರ್ ಕರೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಸವ ಮಾಚಿದೇವ ಸ್ವಾಮೀಜಿ, ಮುಕ್ತಾನಂದ ಸ್ವಾಮೀಜಿ ಹಾಗೂ ರಾಜ್ಯ ಮಡಿವಾಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹನುಮಂತಪ್ಪ ನೇತೃತ್ವದಲ್ಲಿ ಈ ಧರಣಿ ನಡೆಯಲಿದೆ. ಸರ್ಕಾರದ ಪರವಾಗಿ ಸಿಎಂ ಇಲ್ಲವೇ ಸಚಿವರು ಭೇಟಿ ನೀಡಿ ಮನವಿ ಸ್ವೀಕರಿಸಿ, ಭರವಸೆ ನೀಡುವವರೆಗೂ ಈ ಅಹೋರಾತ್ರಿ ಧರಣಿ ಮುಂದುವರಿಯಲಿದೆ.

ಶತ ಶತಮಾನಗಳಿಂದ ಸಮುದಾಯ ಇತರೆ ಸಮುದಾಯಗಳ ಸೇವೆ ಮಾಡಿಕೊಂಡು ಬರುತ್ತಿದೆ. ಆದರೆ ಸಂವಿಧಾನ ಬದ್ಧ ಹಕ್ಕುಗಳು, ಸವಲತ್ತು ಸಿಗದೇ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ತೀರಾ ಹಿಂದುಳಿದಿದೆ. ಈ ಹಿಂದೆ ನಡೆಸಿದ ಹೋರಾಟದ ಫಲವಾಗಿ ಸಮುದಾಯವನ್ನು ಎಸ್‌ಸಿಗೆ ಸೇರಿಸುವ ಸಲುವಾಗಿ ರಾಜ್ಯ ಸರ್ಕಾರ ಕುಲಶಾಸ್ತ್ರೀಯ ಅಧ್ಯಯನ ಮಾಡಿತ್ತಲ್ಲದೆ, ರಾಜ್ಯ ಸರ್ಕಾರ ಸಹ ಅದನ್ನು ಸ್ವೀಕರಿಸಿದೆ. ಆದರೂ ಯಾವುದೇ ಸರ್ಕಾರ ಕೇಂದ್ರಕ್ಕೆ ವರದಿ ಕಳುಹಿಸುವ ಕೆಲಸ ಮಾಡಿಲ್ಲ. ಹೀಗಾಗಿ ಈ ನಿಟ್ಟಿನಲ್ಲಿ ಈಗ ಹೋರಾಟ ಹಮ್ಮಿಕೊಳ್ಳಲಾಗುತ್ತಿದೆ ಎಂದರು. ಗೋಷ್ಠಿಯಲ್ಲಿ ಸತ್ಯನಾರಾಯಣ್, ಬಿ.ಜಿ.ಕೇಶವ್, ಕೆಂಪಶೆಟ್ಟಿ, ಸ್ವಾಮಿ ಉಪಸ್ಥಿತರಿದ್ದರು.

ಮಾ.13ರಂದು ರಾಜ್ಯ ಮಟ್ಟದ ಕಲಾಸೃಷ್ಟಿ–2026 ಕಾರ್ಯಕ್ರಮ

ಮೈಸೂರು, ಮಾ.10–ಮೈಸೂರಿನ ಸೇಂಟ್ ಜೋಸೆಫರ ಕಾಲೇಜ್ ಆಫ್ ಎಜುಕೇಷನ್ ವತಿಯಿಂದ ಮಾ.13ರಂದು ರಾಜ್ಯ ಮಟ್ಟದ ಅಂತರ್ ಬಿ.ಇಡಿ ಕಾಲೇಜುಗಳ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸಮ್ಮಿಲನ–ಕಲಾಸೃಷ್ಟಿ–2026 ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ರಂಗೋಲಿ, ನಾಟ್ಯ ವಿಸ್ಮಯ, ಸ್ವರಾಂಜಲಿ, ನೃತ್ಯಾಂಜಲಿ, ಸಮೂಹ ಗೀತಗಾಯನ ಸ್ಪರ್ಧೆಗಳು, ಸಾಹಿತ್ಯಿಕ ಕಾರ್ಯಕ್ರಮದಲ್ಲಿ ಕಾವ್ಯರಚನೆ, ಕಥಾಲಿಖಿತ, ಭಾಷಣ ಸ್ಪರ್ಧೆಗಳು ನಡೆಯಲಿವೆ. ಕಥೆಗಾರರು, ಆಕಾಶವಾಣಿಯ ನಿವೃತ್ತ ಸಹಾಯ ನಿರ್ದೇಶಕ ಅಬ್ದುಲ್ ರಷೀದ್, ಎಂಡಿಇಎಸ್ ಸಂಸ್ಥೆಯ ಕಾರ್ಯದರ್ಶಿ ಎಡ್ವರ್ಡ್ ವಿಲಿಯಂ ಸಲ್ಡಾನ್ಹ, ಖಜಾಂಚಿ ನವೀನ್‌ಕುಮಾರ್, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೆಬಿವಾವೇಲಿ ಭಾಗಿಯಾಗಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಗ್ಯಾರಂಟಿಗಳಿಂದ ಮಹಿಳಾ ಸಬಲೀಕರಣ

ಮೈಸೂರು,ಮಾ.10–ರಾಜ್ಯ ಸರ್ಕಾರದ ಮಹತ್ವದ ಪಂಚ ಗ್ಯಾರಂಟಿ ಯೋಜನೆಗಳಿಂದ ಮಹಿಳಾ ಸಬಲೀಕರಣ ಸಾಧ್ಯವಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷ ಎಸ್.ಅರುಣ್‌ಕುಮಾರ್ ತಿಳಿಸಿದರು.

ಜಿಲ್ಲಾ ಪಂಚಾಯತ್ ಹಾಗೂ ಮೈಸೂರು ತಾಲೂಕು ಪಂಚಾಯತ್ ವತಿಯಿಂದ ಇಲವಾಲ ಗ್ರಾಮದ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಬಗ್ಗೆ ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ, ನಂತರ ಮಾತನಾಡಿದರು.

ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿ ನುಡಿದಂತೆ ನಡೆದಿದೆ. ಬಡವರು ಹಾಗೂ ಮಹಿಳೆಯರ ಏಳಿಗೆಗೆ ಗ್ಯಾರಂಟಿ ಯೋಜನೆ ಸಹಕಾರಿಯಾಗಿದೆ. ಕುಟುಂಬ ನಿರ್ವಹಣೆಯ ಜೊತೆಗೆ ಅನೇಕ ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಂಡಿದ್ದಾರೆ ಎಂದರು.

ಜಿಪಂ ಉಪಕಾರ್ಯದರ್ಶಿ ಎಂ.ಬಿ. ಸವಿತಾ ಮಾತನಾಡಿ, ಮಹಿಳೆಯರು ತಮ್ಮ ಸಾಮರ್ಥ್ಯದಿಂದ ಹಕ್ಕುಗಳನ್ನು ಪಡೆದುಕೊಳ್ಳಬೇಕು. ಇಂದು ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮದೇ ಆದ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಹಿಸುತ್ತಿದ್ದಾರೆ. ಯಾವುದೇ ಹಿಂಜರಿಕೆಗೆ ಒಳಗಾಗಬಾರದು ಎಂದು ಕಿವಿಮಾತು ಹೇಳಿದರು.


ಇಲವಾಲದ ಸಮುದಾಯ ಭವನದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಪಂಚ ಗ್ಯಾರಂಟಿ ಯೋಜನೆಗಳ ಅರಿವು ಕಾರ್ಯಕ್ರಮದ ಉದ್ಘಾಟನಾ ಸಂದರ್ಭ.

> “ಗೃಹಲಕ್ಷ್ಮೀ ಯೋಜನೆಯ ಹಣದಲ್ಲಿ ಹಸು ಖರೀದಿಸಿದ್ದೇನೆ. ಇದರಿಂದ ನಮ್ಮ ಕುಟುಂಬ ನಿರ್ವಹಣೆ ಸುಧಾರಿಸಿದೆ. ಭೂರಹಿತರಾದ ನಮಗೆ ಅನ್ನಭಾಗ್ಯದಿಂದ ಹೊಟ್ಟೆತುಂಬ ಊಟ ಮಾಡುವಂತಾಗಿದೆ. ಶಕ್ತಿ ಯೋಜನೆಯಿಂದ ಪ್ರಯಾಣದ ಹಣ ಉಳಿತಾಯವಾಗುತ್ತಿದೆ. ಗ್ಯಾರಂಟಿ ಯೋಜನೆಯಿಂದ ನಮಗೆ ಅನುಕೂಲವಾಗಿದೆ. –ರತ್ನಮ್ಮ, ಆನಂದೂರು, ಇಲವಾಲ ಹೋಬಳಿ, ಮೈಸೂರು ತಾ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಾಲೂಕು ಅಧ್ಯಕ್ಷ ಗುರುಸ್ವಾಮಿ ಮಾತನಾಡಿ, ಗ್ಯಾರಂಟಿ ಯೋಜನೆಗಳಿಂದ ಅನೇಕರು ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ಮಹಿಳೆಯರ ಜೀವನ ಸುಧಾರಣೆ ಕಂಡಿದೆ. ಪ್ರತಿ ಕುಟುಂಬವು ನೆಮ್ಮದಿಯಿಂದ ಬದುಕುವಂತಾಗಿದೆ ಎಂದರು.

ತಾಪಂ ಇಓ ಸಿ.ಕೃಷ್ಣ ಮಾತನಾಡಿ, ಪ್ರಕೃತಿ ಸ್ವರೂಪಿಯಾದ ಮಹಿಳೆಯರು ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಗ್ರಾಮೀಣ ಭಾಗದ ಮಹಿಳೆಯರು ಕೀಳರಿಮೆ ಬೆಳೆಸಿಕೊಳ್ಳದೆ ಆತ್ಮವಿಶ್ವಾಸದಿಂದ ಬದುಕಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರಾದ ಬಿ.ಕರೀಗೌಡ, ಬಸವಣ್ಣ, ತಾಲೂಕು ಸಮಿತಿ ಸದಸ್ಯರಾದ ಚನ್ನಪ್ಪ, ಕರೀಗೌಡ, ರಾಣಿ, ನವೀನ್, ಗ್ರಾಮಾಂತರ ಸಿಡಿಪಿಒ ತಿಮ್ಮಯ್ಯ, ಆಹಾರ ಶಿರಸ್ತೇದಾರ್ ಮಹೇಶ್ ಕುಮಾರ್, ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ರಾಣಿ, ಆಹಾರ ನಿರೀಕ್ಷಕಿ ನಂದಿನಿ, ಇಲವಾಲ ಗ್ರಾಪಂ ಪಿಡಿಒ ಹೇಮಂತ್ ಇನ್ನಿತರರಿದ್ದರು.

ವೀರಶೈವ ಲಿಂಗಾಯಿತ ಮಹಾಸಭಾದ ಮಹಿಳಾ ಘಟಕದಿಂದ ಸಾಧಕರಿಗೆ ಸನ್ಮಾನ

ಮೈಸೂರು,ಮಾ.10(ಜಿಎ)–ಮೈಸೂರಿನ ಅಗ್ರಹಾರದ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಮಹಿಳಾ ಘಟಕದ ವತಿಯಿಂದ ಏರ್ಪಡಿಸಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಡೆಂಟಲ್ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಬ್ರಿಂದಾ ಸುಹಾಸ್ ಗೋದಿ ಹಾಗೂ ಬಿಎಸ್‌ಸಿ ಪದವಿಯಲ್ಲಿ ಚಿನ್ನದ ಪದಕ ಪಡೆದ ಕೀರ್ತನಾ ಅವರನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಅಭಿನಂದಿಸಿದರು.

ನಂತರ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಈ ಹಿಂದೆ ಮಹಿಳೆಯರು ಅಂದರೆ ಮಕ್ಕಳನ್ನು ಓದಿಸಬೇಕು, ಮನೆಯ ಕೆಲಸವನ್ನು ಮಾಡಿಕೊಂಡಿರಬೇಕು ಎಂಬ ಮಾತಿತ್ತು. ಆದರೆ ಇಂದು ಕೆಲ ಮನೆಗಳಲ್ಲಿ ಮಹಿಳೆಯರು ಹೊರಗೆ ಕೆಲಸ ಮಾಡಿಕೊಂಡು ಪತಿ ಸೇರಿದಂತೆ ಇಡೀ ಕುಟುಂಬವನ್ನು ಮುನ್ನಡೆಸುತ್ತಿದ್ದಾರೆ. ಇದು ಸಂತಸದ ಸಂಗತಿ ಎಂದರು.

ಸಣ್ಣ ಕೈಗಾರಿಕೆ, ಕೃಷಿ ಸೇರಿದಂತೆ ಅಂತರರಾಷ್ಟ್ರೀಯ ಮಟ್ಟದ ಬೃಹತ್ ಕಂಪನಿಗಳನ್ನೂ ಕೂಡ ಮುನ್ನಡೆಸುವ ಮೂಲಕ ನಾವು ಕೂಡ ಸಾಧಕರು ಎಂಬುದನ್ನು ಮಹಿಳೆಯರು ನಿರೂಪಿಸಿದ್ದಾರೆ. ಶ್ರದ್ಧೆ, ಬದ್ಧತೆ ಇದ್ದಲ್ಲಿ ಸರ್ಕಾರಿ ಶಾಲೆಯಲ್ಲಿ ಓದಿದರೂ ಸಾಧನೆ ಮಾಡಬಹುದು ಎಂಬುದನ್ನು ಗ್ರಾಮೀಣ ಪ್ರತಿಭೆ ಕೀರ್ತನ ಅವರು ಬಿಎಸ್‌ಸಿಯಲ್ಲಿ ಚಿನ್ನದ ಪದಕ ಪಡೆದುಕೊಳ್ಳುವ ಮೂಲಕ ಸಾಧಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ಮೈಸೂರಿನ ಅಗ್ರಹಾರದ ರಾಜೇಂದ್ರ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಮಹಿಳಾ ಘಟಕದ ವತಿಯಿಂದ ಏರ್ಪಡಿಸಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಡೆಂಟಲ್ ಕಾಲೇಜಿನ ಸಹ ಪ್ರಾಧ್ಯಾಪಕಿ ಡಾ.ಬ್ರಿಂದಾ ಸುಹಾಸ್ ಗೋದಿ ಹಾಗೂ ಬಿಎಸ್‌ಸಿ ಪದವಿಯಲ್ಲಿ ಚಿನ್ನದ ಪದಕ ಪಡೆದ ಕೀರ್ತನಾ ಅವರನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಆತ್ಮೀಯವಾಗಿ ಅಭಿನಂದಿಸಿದರು.

ವಿಶ್ವವಿದ್ಯಾನಿಲಯಗಳಲ್ಲಿ ನಡೆಯುವ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಚಿನ್ನದ ಪದಕ ಪಡೆದುಕೊಳ್ಳುವವರಲ್ಲಿ ಶೇ.80 ವಿದ್ಯಾರ್ಥಿನಿಯರೇ ಇರುತ್ತಾರೆ. ವಿಶೇಷವಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಹೆಚ್ಚು ಗಣನೀಯವಾಗಿ ಸಾಧನೆ ಮಾಡಿರುತ್ತಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಹೆಚ್.ವಿ. ಬಸವರಾಜು, ಬಸವ ಜಯಂತಿ ಸಮಿತಿ ಅಧ್ಯಕ್ಷ ಎಂ.ಚಂದ್ರಶೇಖರ್, ಮಹಿಳಾ ಘಟಕದ ಅಧ್ಯಕ್ಷೆ ಧನ್ಯಾ ಸತ್ಯೇಂದ್ರ ಮೂರ್ತಿ, ಉಪಾಧ್ಯಕ್ಷೆ ಮೀನಾಕ್ಷಿ ಶ್ರೀಶೈಲಾ, ಪ್ರಧಾನ ಕಾರ್ಯದರ್ಶಿ ಮಲ್ಲಿಕಾ ಮಹದೇವಸ್ವಾಮಿ, ಖಜಾಂಚಿ ಎಂ.ಎನ್.ಶೈಲಾ ಸಿದ್ದರಾಮಪ್ಪ, ಕಾರ್ಯದರ್ಶಿ ಮಾಲಿನಿ ಪ್ರವೀಣ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ದೇಶ – ವಿದೇಶ

ಕಾಡ್ಗಿಚ್ಚು ನಂದಿಸಲು ಐಎಎಫ್ ಹೆಲಿಕಾಪ್ಟರ್ ಕಾರ್ಯಾಚರಣೆ



ಇಟಾನಗರ: ಅರುಣಾಚಲ ಪ್ರದೇಶದ ಪಾಸಿಘಾಟ್‌ನ ಮೆಬೊ ಮತ್ತು ಸಿಗರ್ ಪ್ರದೇಶಗಳಲ್ಲಿ ಭಾರೀ ಪ್ರಮಾಣದ ಕಾಡ್ಗಿಚ್ಚು ಕಾಣಿಸಿಕೊಂಡಿದ್ದು, ಬೆಂಕಿ ನಂದಿಸಲು ಭಾರತೀಯ ವಾಯುಪಡೆ 66,000 ಲೀಟರ್ ನೀರನ್ನು ಬಳಸಿದೆ.

ಬೆಂಕಿ ನಂದಿಸಲು ಭಾರತೀಯ ವಾಯುಪಡೆಯು ಮಂಗಳವಾರ ಮಿ–17 ವಿ 5 ಹೆಲಿಕಾಪ್ಟರ್ ಬಳಸಿ ಕಾರ್ಯಾಚರಣೆ ನಡೆಸಿರುವ ಫೋಟೋ ಹಾಗೂ ವೀಡಿಯೋವನ್ನು ಎಕ್ಸ್‌ನಲ್ಲಿ ಹಂಚಿಕೊಳ್ಳಲಾಗಿದೆ. ಹೆಲಿಕಾಪ್ಟರ್‌ನ ಸಾಮರ್ಥ್ಯ ಹಾಗೂ ನಿಖರ ಕಾರ್ಯಾಚರಣೆಯನ್ನು ಅದರಲ್ಲಿ ನೋಡಬಹುದು. ಹಲವಾರು ಬಾರಿ ಹಾರಾಟ ನಡೆಸಿದ ಹೆಲಿಕಾಪ್ಟರ್ ಬೆಂಕಿ ಹೊತ್ತಿದ್ದ ಸ್ಥಳದಲ್ಲಿ ಸುಮಾರು 66,000 ಲೀಟರ್ ನೀರನ್ನು ಸುರಿದಿದೆ. ಇತ್ತೀಚೆಗೆ ಅರುಣಾಚಲ ಪ್ರದೇಶದ ವಾಲೋಂಗ್‌ನಲ್ಲಿ, ಐಎಎಫ್ ಹೆಲಿಕಾಪ್ಟರ್‌ಗಳು ಬೆಂಕಿ ಹೊತ್ತಿಕೊಂಡ ಪ್ರದೇಶದ ಮೇಲೆ 1,39,800 ಲೀಟರ್ ನೀರನ್ನು ಹರಿಸುವ ಮೂಲಕ ಯಶಸ್ವಿಯಾಗಿ ನಂದಿಸಿದ್ದವು. ಅಸ್ಪಷ್ಟ ಗೋಚರತೆ ಮತ್ತು ಗಾಳಿಯಿಂದಾಗಿ ಈ ವೈಮಾನಿಕ ಕಾರ್ಯಾಚರಣೆ ಸವಾಲಿನಿಂದ ಕೂಡಿತ್ತು ಎಂದು ಹೇಳಿದ್ದರು. ಶುಷ್ಕ ಹವಾಮಾನ ಪರಿಸ್ಥಿತಿಗಳು ಮತ್ತು ಬೆಟ್ಟದ ಬುಡಕಟ್ಟು ಜನಾಂಗದವರು ಬಳಸುವ ಸಾಂಪ್ರದಾಯಿಕ ಜುಮ್ ಕೃಷಿ ಪದ್ಧತಿಯು ಈಶಾನ್ಯ ರಾಜ್ಯಗಳಲ್ಲಿ ಕಾಡ್ಗಿಚ್ಚಿಗೆ ಕಾರಣವಾಗಿದೆ ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ.

ವಾರ್ ಎಫೆಕ್ಟ್: ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ನಲ್ಲಿ ಹಾರಾಟ ದುಬಾರಿ



ಆಸ್ಟ್ರೇಲಿಯಾ: ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ವಿಮಾನ ಪ್ರಯಾಣ ದರಗಳನ್ನು ಹೆಚ್ಚಿಸುತ್ತಿರುವುದಾಗಿ ಆಸ್ಟ್ರೇಲಿಯಾದ ಕ್ವಾಂಟಾಸ್ ಏರ್‌ವೇಸ್ ಮತ್ತು ಏರ್ ನ್ಯೂಜಿಲೆಂಡ್ ಮಂಗಳವಾರ ತಿಳಿಸಿವೆ. ಇದು ಜಾಗತಿಕ ವಿಮಾನಯಾನ ಸಂಸ್ಥೆಗಳು ಹಠಾತ್ ಇಂಧನ ವ್ಯತ್ಯಯ ಮತ್ತು ಅಧಿಕ ವೆಚ್ಚವನ್ನು ನಿಭಾಯಿಸಲು ಹೆಣಗಾಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.

ಸಂಘರ್ಷಕ್ಕೆ ಮುಂಚಿತವಾಗಿ ಪ್ರತಿ ಬ್ಯಾರೆಲ್‌ಗೆ ಸುಮಾರು ಯುಎಸ್ ಡಾಲರ್ 85 ರಿಂದ 90ರಷ್ಟಿದ್ದ ಜೆಟ್ ಇಂಧನ ಬೆಲೆಗಳು ಇತ್ತೀಚಿನ ದಿನಗಳಲ್ಲಿ ಪ್ರತಿ ಬ್ಯಾರೆಲ್‌ಗೆ 150 ರಿಂದ 200 ಯುಎಸ್ ಡಾಲರ್‌ರವರೆಗೆ ಏರಿಕೆಯಾಗಿದೆ. ಸಂಘರ್ಷದ ಮೇಲಿನ ಅನಿಶ್ಚಿತತೆಯಿಂದಾಗಿ 2026ರ ಆರ್ಥಿಕ ಮುನ್ನೋಟವನ್ನು ಸ್ಥಗಿತಗೊಳಿಸುತ್ತಿದೆ ಎಂದು ನ್ಯೂಜಿಲೆಂಡ್‌ನ ಫ್ಲ್ಯಾಗ್ ಕ್ಯಾರಿಯರ್ ಹೇಳಿದೆ. ಡ್ರೋನ್ ಮತ್ತು ಕ್ಷಿಪಣಿ ದಾಳಿಯಿಂದಾಗಿ ವಿಮಾನಗಳ ಹಾರಾಟ ಕಡಿತಗೊಂಡಿರುವ ಮಧ್ಯಪ್ರಾಚ್ಯದಲ್ಲಿ ವಿಮಾನಯಾನ ಸಂಸ್ಥೆಗಳು ಮತ್ತು ಪ್ರಯಾಣಿಕರು ತೀವ್ರ ತೊಂದರೆಗೆ ಸಿಲುಕಿದ್ದಾರೆ. ಅಡೆತಡೆಗಳನ್ನು ತಪ್ಪಿಸುವ ಪ್ರಯತ್ನದಿಂದಾಗಿ ಅಂತರರಾಷ್ಟ್ರೀಯ ದರಗಳನ್ನು ಹೆಚ್ಚಿಸುವುದರ ಜೊತೆಗೆ, ಯುರೋಪ್‌ಗೆ ಸಾಮರ್ಥ್ಯವನ್ನು ಮರು ನಿಯೋಜಿಸುವ ಆಯ್ಕೆಗಳನ್ನು ಅನ್ವೇಷಿಸುತ್ತಿದೆ ಎಂದು ಕ್ವಾಂಟಾಸ್ ತಿಳಿಸಿದೆ.

ಮುಂಬೈನಲ್ಲಿ ಶೇ.20ರಷ್ಟು ಹೋಟೆಲ್, ರೆಸ್ಟೋರೆಂಟ್ ಬಂದ್



ಮುಂಬೈ: ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಮುಂಬೈನಲ್ಲಿ ಸುಮಾರು ಶೇ.20ರಷ್ಟು ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು ಬಂದ್ ಆಗಿವೆ ಎಂದು ನಗರದ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘ ತಿಳಿಸಿದೆ.

ಅನಿಲ ಪೂರೈಕೆ ಪರಿಸ್ಥಿತಿ ಸುಧಾರಿಸದಿದ್ದರೆ ಮುಂದಿನ 2 ದಿನಗಳಲ್ಲಿ ನಗರದ ಶೇ.50ರಷ್ಟು ಹೋಟೆಲ್‌ಗಳು ಮುಚ್ಚುವ ಸಾಧ್ಯತೆ ಇದೆ ಎಂದು ಸಂಘ ಕಳವಳ ವ್ಯಕ್ತಪಡಿಸಿದೆ. ಕಾರ್ಯನಿರ್ವಹಿಸುತ್ತಿರುವ ರೆಸ್ಟೋರೆಂಟ್‌ಗಳ ಸಂಖ್ಯೆಯು ಪ್ರಸ್ತುತ ಎಷ್ಟು ಎಲ್‌ಪಿಜಿ ಸಿಲಿಂಡರ್‌ಗಳನ್ನು ಹೊಂದಿವೆ ಎಂಬುದರ ಆಧಾರದ ಮೇಲೆ ಅವಲಂಬಿತವಾಗಿವೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ, ಮುಂಬರುವ ದಿನಗಳಲ್ಲಿ ಅಧಿಕ ಸಂಖ್ಯೆಯ ಹೋಟೆಲ್‌ಗಳು ಮುಚ್ಚುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಹೋಟೆಲ್‌ಗಳನ್ನು ಸಾಮೂಹಿಕವಾಗಿ ಮುಚ್ಚುವ ಬಗ್ಗೆ ಸಂಘವು ಯಾವುದೇ ಅಧಿಕೃತ ನಿರ್ಧಾರವನ್ನು ತೆಗೆದುಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದು, ಪರ್ಯಾಯ ಕ್ರಮಗಳೊಂದಿಗೆ ರೆಸ್ಟೋರೆಂಟ್‌ಗಳನ್ನು ತೆರೆದಿರುವ ಅಥವಾ ತಾತ್ಕಾಲಿಕವಾಗಿ ಮುಚ್ಚುವ ನಿರ್ಧಾರವನ್ನು ವೈಯಕ್ತಿಕವಾಗಿ ಹೋಟೆಲ್ ಮಾಲೀಕರು ನಿರ್ಧರಿಸುತ್ತಾರೆ ಎಂದು ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘ ಹೇಳಿದೆ.

ಪಾಕಿಸ್ತಾನದಲ್ಲಿ 2 ವಾರ ಶಾಲೆಗೆ ರಜೆ, ನಾಲ್ಕು ದಿನ ಮಾತ್ರ ಕಚೇರಿ



ಪಾಕಿಸ್ತಾನ: ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ತುರ್ತು ಕ್ರಮವಾಗಿ ಶಾಲೆಗಳಿಗೆ ಮಾ.16 ರಿಂದ 2 ವಾರ ರಜೆ ಘೋಷಿಸಿ, ಸರ್ಕಾರಿ ಕಚೇರಿಗಳು ವಾರದಲ್ಲಿ ನಾಲ್ಕು ದಿನಗಳ ಕಾಲ ಕಾರ್ಯ ನಿರ್ವಹಿಸುವಂತೆ ಸೂಚನೆ ಹೊರಡಿಸಿದ್ದಾರೆ.

ಇಂಧನ ಭೀತಿಯಿಂದ ಪಾಕಿಸ್ತಾನದಲ್ಲಿ ಕಳೆದ ದಿನಗಳಲ್ಲಿ ಬೆಲೆ ಏರಿಕೆ, ವಾಹನಗಳು ಮತ್ತು ಉದ್ಯಮಗಳಿಗೆ ತೊಂದರೆ ಉಂಟಾಗಿದೆ. ಹೀಗಾಗಿ ಶಾಲೆಗಳನ್ನು ಬಂದ್ ಮಾಡುವುದು ಮತ್ತು ಕಚೇರಿಗಳ ಕೆಲಸಗಳನ್ನು ಕಡಿಮೆ ಮಾಡುವುದು ತಾತ್ಕಾಲಿಕ ಪರಿಹಾರವೆಂದು ಸರ್ಕಾರ ತಿಳಿಸಿದೆ. ಪೆಟ್ರೋಲ್, ಡೀಸೆಲ್ ಮತ್ತು ಎಲೆಕ್ಟ್ರಿಕ್ ಬಳಕೆ ಮೇಲೆ ನಿಯಂತ್ರಣ ಕ್ರಮಗಳನ್ನು ಕೂಡ ಕೈಗೊಂಡಿದ್ದು, ಸಾರ್ವಜನಿಕರು ಅನಾವಶ್ಯಕ ಬಳಕೆಯನ್ನು ತಡೆಯುವಂತೆ ಮನವಿ ಮಾಡಿದೆ. ಶಾಲೆಗಳು ಮಾತ್ರ 2 ವಾರ ಬಂದ್ ಆಗಲಿದ್ದು, ವಿಶ್ವವಿದ್ಯಾಲಯಗಳು ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳು ತಕ್ಷಣ ಆನ್‌ಲೈನ್ ತರಗತಿಗಳಿಗೆ ಬದಲಾಗಲಿವೆ ಎಂದು ಹೇಳಲಾಗಿದೆ. ಮುಂದಿನ 2 ತಿಂಗಳಲ್ಲಿ ಸರ್ಕಾರಿ ಇಲಾಖೆಗಳು ಇಂಧನ ಭತ್ಯೆಯಲ್ಲಿ ಶೇ.50 ರಷ್ಟು ಕಡಿತಗೊಳಿಸಲಿವೆ. ಇಂಧನ ಬಳಕೆಯನ್ನು ಮತ್ತಷ್ಟು ಕಡಿಮೆ ಮಾಡಲು, ಸರ್ಕಾರವು ತನ್ನ ಅರ್ಧದಷ್ಟು ಉದ್ಯೋಗಿಗಳಿಗೆ ಮನೆಯಿಂದ ಕೆಲಸ ಮಾಡುವ ಅವಕಾಶ ನೀಡಲಾಗಿದೆ ಎಂದು ಪಾಕ್ ಪ್ರಧಾನಿ ಶೆಹಬಾಜ್ ತಿಳಿಸಿದ್ದಾರೆ.

ತಂದೆಯ 7ನೇ ಮದುವೆ ತಡೆಯಲು ಮಗನ ಹರಸಾಹಸ



ಉತ್ತರ ಪ್ರದೇಶ: ತನ್ನ ತಂದೆಯ ಏಳನೇ ಮದುವೆಯನ್ನು ತಡೆಯುವಂತೆ ಕೋರಿ ಅಪ್ರಾಪ್ತ ಮಗ ಪೊಲೀಸ್ ಠಾಣೆ ಮೆಟ್ಟಿಲೇರಿರುವ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ. ಇಲ್ಲಿನ ಆಜಂಘಡ್ ಜಿಲ್ಲೆಯ ಗ್ರಾಮದಲ್ಲಿ 55 ವರ್ಷದ ತನ್ನ ತಂದೆ ಅಮರ್ಜೀತ್ ಮೌರ್ಯ ಅವರು ಏಳನೇ ಮದುವೆಗೆ ಸಿದ್ಧತೆ ನಡೆಸುತ್ತಿದ್ದಾರೆ. ಅದನ್ನು ತಡೆಯುವಂತೆ ಅಹರೌಲಾ ಠಾಣೆಗೆ ಅಪ್ರಾಪ್ತ ಮಗ ದೂರು ಸಲ್ಲಿಸಿದ್ದಾನೆ. ತಂದೆ ಮದುವೆಗಾಗಿ ಜಮೀನು ಮಾರಾಟ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾನೆ.

ಈ ಬಗ್ಗೆ ಪೊಲೀಸರು ವಿಚಾರಣೆ ನಡೆಸಿದಾಗ, ತನ್ನ ಮಗ ತನ್ನ ಮಾತು ಕೇಳುವುದಿಲ್ಲ. ಅದಕ್ಕಾಗಿ ತಾನು ಮದುವೆಗೆ ಮುಂದಾಗಿರುವುದಾಗಿ ಆತನ ತಂದೆ ತಿಳಿಸಿದ್ದಾರೆ. ಜೊತೆಗೆ ಅವರು ಇದುವರೆಗೆ ಆರು ಮದುವೆ ಮಾಡಿಕೊಂಡಿರುವುದನ್ನೂ ಒಪ್ಪಿಕೊಂಡಿದ್ದಾರೆ. ಆರನೇ ಮದುವೆಯನ್ನು 2024ರಲ್ಲಿ ಮಾಡಿಕೊಂಡಿದ್ದು, ಕೆಲವು ದಿನಗಳು ಒಟ್ಟಿಗೆ ಇದ್ದ ನಂತರ ಆರನೇ ಪತ್ನಿ ಜಮೀನು ತನ್ನ ಹೆಸರಿಗೆ ಮಾಡಿಕೊಡು ಇಲ್ಲವೇ ಆಭರಣಗಳನ್ನು ನೀಡುವಂತೆ ಕೇಳಿದರು. ಅದಕ್ಕೆ ತಂದೆ ಒಪ್ಪದಿದ್ದಾಗ ಅವರು ಬೇರೆಡೆಗೆ ಹೋದರು. ಈಗ ಏಳನೇ ಮದುವೆಗೆ ಜಮೀನು ಮಾರಾಟ ಮಾಡಲು ಮುಂದಾಗಿದ್ದಾರೆ ಎಂದು ಮಗ ಆರೋಪಿಸಿದ್ದಾನೆ..

ಮೈಸೂರು ಮಿತ್ರ ಬುಧವಾರ 11 ಮಾರ್ಚ್ 2026

ಮಹಿಳೆಯರು ಅಂಜಿಕೆಯಿಲ್ಲದೆ ಜೀವಿಸುವುದನ್ನು ಕಲಿಯಿರಿ



ಮಿಲನಾ ಭರತ್ ಮಾತನಾಡಿದರು

ಮಡಿಕೇರಿ, ಮಾ.10–ಸೂಕ್ತ ವಿದ್ಯೆಯ ಜೊತೆಗೆ ಅಂಜಿಕೆಯಿಲ್ಲದೇ ಜೀವಿಸುವ ರೀತಿಯನ್ನು ಹೆಣ್ಣುಮಕ್ಕಳಿಗೆ ಪೋಷಕರು ಕಲಿಸುವುದು ಇಂದಿನ ಸಮಾಜದಲ್ಲಿ ಅತ್ಯಗತ್ಯವಾಗಿದೆ ಎಂದು ಜಿಲ್ಲಾ ಮೀನುಗಾರಿಕಾ ಇಲಾಖೆಯ ಸಹಾಯಕ ನಿರ್ದೇಶಕಿ ಮಿಲನಾ ಭರತ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ರೆಡ್‌ಬ್ರಿಕ್ಸ್ ಇನ್‌ನ ಸತ್ಕಾರ್ ಸಭಾಂಗಣದಲ್ಲಿ ಭಾರತೀಯ ರೆಡ್ ಕ್ರಾಸ್ ಕೊಡಗು ಜಿಲ್ಲಾ ಘಟಕದಿಂದ ಮಹಿಳಾ ದಿನಾಚರಣೆ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಕ್ಯಾನ್ಸರ್ ತಪಾಸಣಾ ಶಿಬಿರ, ಕ್ಯಾನ್ಸರ್ ಮಾಹಿತಿ ಜಾಗೃತಿ ಶಿಬಿರದಲ್ಲಿ ಅವಳ ಕನಸಿಗೊಂದು ರೆಕ್ಕೆ ಕೊಡಿ ವಿಚಾರವಾಗಿ ಮಾತನಾಡಿದ ಅವರು, 40 ವರ್ಷ ಮೀರಿದವರು ತಮ್ಮ ಜೀವನದ ಕನಸುಗಳೆಲ್ಲಾ ಮುಕ್ತಾಯಗೊಂಡಂತೆ ನೀರಸವಾಗಿರುತ್ತಾರೆ. ಇದರ ಬದಲಿಗೆ ಕನಸುಗಳ ರೆಕ್ಕೆ ಕಟ್ಟಿಕೊಂಡು ಹೊಸ ಚಿಂತನೆಯೊಂದಿಗೆ ಸಂಭ್ರಮದಿಂದ ಜೀವಿಸಲು ಮಹಿಳೆ ಮುಂದಾಗಬೇಕಾಗಿದೆ ಎಂದು ಹೇಳಿದರು.

ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಅಪಘಾತ ಮತ್ತು ತುರ್ತು ಚಿಕಿತ್ಸಾ ವಿಭಾಗದ ವೈದ್ಯಾಧಿಕಾರಿ ಡಾ.ಸುಮುಖ್ ಮಾತನಾಡಿ, ಮಹಿಳೆಯರು ಕೀಳರಿಮೆಯಿಂದ ಹೊರಬರುವುದು ಅತ್ಯಂತ ಅಗತ್ಯ. ತಮಗೆ ಮಾನಸಿಕ, ದೈಹಿಕ ಸಮಸ್ಯೆಗಳು ಕಾಡಿದಾಗ ಕೀಳರಿಮೆಯಿಂದ ಅನೇಕ ಮಹಿಳೆಯರು ಅದನ್ನು ಹೊರ ಗೆಡವದೇ ಮುಚ್ಚಿಟ್ಟುಕೊಂಡು ಬಳಿಕ ಗಂಭೀರ ಆರೋಗ್ಯ ಸಮಸ್ಯೆ ಎದುರಿಸುತ್ತಾರೆ. ಇದರ ಬದಲಿಗೆ ಯಾವುದೇ ಸಮಸ್ಯೆ ಕಾಡಿದಾಗ ವೈದ್ಯರನ್ನು ಸಂಪರ್ಕಿಸಿ ಸಮಸ್ಯೆ ಪರಿಹರಿಸಿಕೊಂಡಾಗ ಕುಟುಂಬಕ್ಕೇ ಅದು ಒಳಿತುಂಟು ಮಾಡುತ್ತದೆ ಎಂದರು.

ವಿರಾಜಪೇಟೆಯ ವಕೀಲೆ ಸಿಂಧೂರ ಎನ್.ಸ್ವಾಮಿ, 'ಕಾನೂನು ನಿಮಗೂ ಗೊತ್ತಿರಲಿ' ಎಂಬ ವಿಚಾರದ ಬಗ್ಗೆ ಮಾತನಾಡಿ, ಎಲ್ಲಿಂದಲೋ ಬಂದು ಭಾರತಕ್ಕೆ ದಾಳಿಯಿಟ್ಟಿದ್ದ ಮೊಘಲರು ಸೇರಿದಂತೆ ವಲಸಿಗರು ಭಾರತದಲ್ಲಿ ಮಹಿಳೆಯರಿಗೆ ದೊರಕುತ್ತಿದ್ದ ಗೌರವದ ಬಗ್ಗೆ ಹೆಮ್ಮೆ ವ್ಯಕ್ತಪಡಿಸುತ್ತಿದ್ದರು. ಭಾರತೀಯ ಮಹಿಳೆಯರ ಶೌರ್ಯವನ್ನೂ ಇಂತಹ ವಿದೇಶಿ ಅತಿಕ್ರಮಣಕಾರರು ಎದುರಿಸಿದ್ದರು. ಭಾರತೀಯ ಮಹಿಳೆಯರು ಶಾಂತಿಯಂತೆ ಕ್ರಾಂತಿಗೂ ಸೈ ಎಂಬುದನ್ನು ಯಾರೂ ಮರೆಯುವಂತಿಲ್ಲ ಎಂದರು.

'ಯೋಗ, ಧ್ಯಾನ ಮತ್ತು ಶಾಂತತೆ' ವಿಚಾರದ ಬಗ್ಗೆ ಉಪನ್ಯಾಸ ನೀಡಿದ ಯೋಗ ಗುರು ಶಿಲ್ಪಾ ರೈ, ಶಾಂತತೆಗೆ ಮತ್ತೊಂದು ಹೆಸರಾಗಿರುವ ಮಹಿಳೆಯ ಶಾಂತಚಿತ್ತತೆಯನ್ನು ಕದಡುವ ಕೆಲಸ ಮನೆ ಮತ್ತು ಮನೆಯ ಹೊರಗಡೆಯೂ ಆಗಿಂದಾಗ್ಗೆ ಸಂಭವಿಸುತ್ತದೆ. ಇಂತಹ ಸಂದರ್ಭ ಧ್ಯಾನ ಮತ್ತು ಯೋಗ ಕಲಿತ ಮಹಿಳೆಯರು ಮಾನಸಿಕವಾಗಿ ಶಾಂತರಾಗಿರಲು ಸಾಧ್ಯವಿದೆ ಎಂದರು. ಮಹಿಳೆಯರ ದೇಹದ ಸೌಂದರ್ಯಕ್ಕೂ ವಿವಿಧ ರೀತಿಯ ಯೋಗ ಮತ್ತು ಧ್ಯಾನ ಕಾರಣವಾಗುತ್ತದೆ ಎಂದೂ ಹೇಳಿದರು.

ಕೊಡಗು ವೈದ್ಯಕೀಯ ಸಂಸ್ಥೆಯ ಸ್ತ್ರೀ ರೋಗ ಮತ್ತು ಪ್ರಸೂತಿ ವಿಭಾಗದ ವೈದ್ಯಾಧಿಕಾರಿ ಡಾ.ಬಿ.ಕೆ.ರಾಜೇಶ್ವರಿ ಮಾತನಾಡಿದರು.

ಅತ್ಯುತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿ ಪಡೆದ ಕೊಟ್ಟುಕೊತ್ತೀರ ಯಶೋಧ ಪ್ರಕಾಶ್ ಅವರನ್ನು ಸನ್ಮಾನಿಸಿದರು. ರೆಡ್‌ಕ್ರಾಸ್ ಉಪಾಧ್ಯಕ್ಷ ಹೆಚ್.ಟಿ.ಅನಿಲ್, ಜಿಲ್ಲಾ ಸಭಾಪತಿ ಬಿ.ಕೆ.ರವೀಂದ್ರ ರೈ, ಪ್ರಧಾನ ಕಾರ್ಯದರ್ಶಿ ಎಂ.ಧನಂಜಯ್, ಖಜಾಂಜಿ ಪ್ರಸಾದ್‌ಗೌಡ, ನಿರ್ದೇಶಕ ಕೆ.ಟಿ.ಉತ್ತಯ್ಯ, ವಿಕ್ರಂ ಶೆಟ್ಟಿ, ಕೆ.ಸಿ.ವಸಂತ್, ಲೋಕೇಶ್ ಡಿ.ವಿ., ಕೆ.ಎಂ.ವೆಂಕಟೇಶ್, ಮಧುಕರ್ ಶೇಟ್, ಸವಿತಾ, ಶೀಲಾ ಅಶೋಕ್ ಹಾಜರಿದ್ದರು. ನೂರಾರು ಮಹಿಳೆಯರು ಕ್ಯಾನ್ಸರ್ ತಪಾಸಣೆಯ ಮೂಲಕ ಶಿಬಿರದ ಪ್ರಯೋಜನ ಪಡೆದರು.

ಮಹಿಳೆಯರ ರಕ್ಷಣೆಗಾಗಿ ಆಚಾರ–ವಿಚಾರಗಳು ರೂಪಿತವಾಗಿವೆ



ಕಾರ್ಯಕ್ರಮವನ್ನು ನಿವೃತ್ತ ಪ್ರಾಂಶುಪಾಲೆ ಆನೇರ ಜಾನಕಿ ಉದ್ಘಾಟಿಸಿದರು.

ನಾಪೋಕ್ಲು, ಮಾ.10 (ದುಗ್ಗಳ)–ಮಹಿಳೆಯರಿಗೆ ಪೂಜ್ಯನೀಯ ಸ್ಥಾನವಿದ್ದು ಹಲವಾರು ಆಚಾರ–ವಿಚಾರಗಳನ್ನು ಮಹಿಳೆಯರ ರಕ್ಷಣೆಗಾಗಿ ರೂಪಿಸಲಾಗಿದೆ ಎಂದು ನಿವೃತ್ತ ಪ್ರಾಂಶುಪಾಲೆ ಆನೇರ ಜಾನಕಿ ಹೇಳಿದ್ದಾರೆ.

ಮಡಿಕೇರಿಯ ಗೌಡ ಮಹಿಳಾ ಒಕ್ಕೂಟ ಮತ್ತು ಭಾಗಮಂಡಲದ ಶ್ರೀ ಕಾವೇರಿ ಗೌಡ ಮಹಿಳಾ ಘಟಕ ಸಂಯುಕ್ತವಾಗಿ ಭಾಗಮಂಡಲದ ಕೃಷಿ ಪತ್ತಿನ ಸಹಕಾರ ಸಂಘದ ಹೊಸೂರು ಶ್ರೀ ಜೋಯಪ್ಪ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಿಶ್ವ ಮಹಿಳಾ ದಿನಾಚರಣೆ ಸಮಾರಂಭವನ್ನು ಉದ್ಘಾಟಿಸಿ, ಕುಟುಂಬದಲ್ಲಿ ಮಕ್ಕಳಿಗೆ ಸಂಸ್ಕಾರ ರೂಪಿಸುವಲ್ಲಿ ತಾಯಿಯ ಪಾತ್ರ ಹಿರಿದು ಈ ಹಿನ್ನೆಲೆಯಲ್ಲಿಯೇ ಆಚಾರ–ವಿಚಾರಗಳು ಮಹಿಳೆಯರ ರಕ್ಷಣೆಗಾಗಿ ರೂಪಿತಗೊಂಡಿವೆ ಎಂದರು.

ಕೊಡಗು ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಆಮೆ ದಮಯಂತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸನ್ಮಾನ ಸ್ವೀಕರಿಸಿದ ಕೊಡಗಿನ ಗೌರಮ್ಮ ಪ್ರಶಸ್ತಿ ಪುರಸ್ಕೃತೆ ಸಾಹಿತಿ ಪೂಜಾರೀರ ಕೃಪಾ ದೇವರಾಜ್ ಮಾತನಾಡಿ, ಮಹಿಳೆಯರಲ್ಲೂ ಅಗಾಧವಾದ ಶಕ್ತಿ ಇದೆ. ಅಡುಗೆ ಮನೆಯಿಂದ ಆಕಾಶದವರೆಗೆ ಅವರ ಕಾರ್ಯವ್ಯಾಪ್ತಿ ವಿಸ್ತರಿಸಿಕೊಂಡಿದೆ. ಅದನ್ನು ಅರಿತುಕೊಂಡು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂದರು.

ವಿಶ್ವ ಮಹಿಳಾ ದಿನಾಚರಣೆ ಎನ್ನುವುದು ಪುರುಷ ವಿರೋಧಿಯಲ್ಲ. ಮಹಿಳೆ ತನ್ನ ಅಸ್ತಿತ್ವವನ್ನು ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ದಿನವಾಗಿದೆ. ಹೆಣ್ಣುಮಕ್ಕಳಿಗೂ ಧೈರ್ಯ ಮತ್ತು ಸ್ವಾವಲಂಬನೆ ಬೆಳೆಸುವ ನಿಟ್ಟಿನಲ್ಲಿ ಪೂರಕ ವಾತಾವರಣ ಸೃಷ್ಟಿಸುವ ಅಗತ್ಯವಿದೆ. ಮಹಿಳೆಯರನ್ನು ದೇವತೆ ಎಂದು ಕರೆಯುವುದಕ್ಕಿಂತ ಮನುಷ್ಯರಾಗಿ ಅವರ ಶಕ್ತಿಯ ಅನಾವರಣವಾಗಬೇಕಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಮಿಲನ ಭರತ್ ಹೇಳಿದರು.

ಕರಿಕೆ ಗೌಡ ಮಹಿಳಾ ಘಟಕದ ಅಧ್ಯಕ್ಷೆ ಕುದುಪಜೆ ಸುಗಿತಾ ಮಾತನಾಡಿದರು. ಕ್ರೀಡೋತ್ಸವವನ್ನು ಕೊಡಗು ಗೌಡ ಮಹಿಳಾ ಒಕ್ಕೂಟದ ಉಪಾಧ್ಯಕ್ಷೆ ಬೈತಡ್ಕ ಜಾನಕಿ ಬೆಳ್ಳಿಯಪ್ಪ ಉದ್ಘಾಟಿಸಿದರು. ಮಹಿಳೆಯರಿಗೆ ಮತ್ತು ಮಕ್ಕಳಿಗೆ ಓಟ, ನಡಿಗೆ, ಹಗ್ಗ ಜಗ್ಗಾಟ ಮೊದಲಾದ ಸ್ಪರ್ಧೆಗಳನ್ನು ನಡೆಸಲಾಯಿತು. ಅಧ್ಯಕ್ಷತೆಯನ್ನು ಭಾಗಮಂಡಲದ ಶ್ರೀ ಕಾವೇರಿ ಗೌಡ ಮಹಿಳಾ ಘಟಕದ ಅಧ್ಯಕ್ಷೆ ವಾರಿಜಾ ಸೂರ್ತಲೆ ವಹಿಸಿದ್ದರು.

ಮಕ್ಕಳಾಟದ ನೋಟು ನೀಡಿ ಯಾಮಾರಿಸಿದ ಗ್ರಾಹಕ



200 ರೂ. ಅಸಲಿ ಮತ್ತು ಮಕ್ಕಳಾಟದ ನೋಟು

ಸುಂಟಿಕೊಪ್ಪ, ಮಾ.10– ಮೋಸ ವಂಚನೆ ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯವಾಗಿದೆ. ವ್ಯಾಪಾರಸ್ಥರಿಗೆ ಹರಿದಿರುವ ನೋಟು, ಕೋಟಾ ನೋಟು ನೀಡಿ ವಂಚಿಸಿರುವುದನ್ನು ಕಂಡಿದ್ದೇವೆ ಆದರೆ ಇಲ್ಲೊಬ್ಬ ಆಸಾಮಿ ಮಕ್ಕಳ ಆಟದ ನೋಟು ನೀಡಿ ವ್ಯಾಪಾರಸ್ಥರನ್ನು ಯಾಮಾರಿಸಿರುವ ದೃಷ್ಟಾಂತವೊಂದು ಬೆಳಕಿಗೆ ಬಂದಿದೆ.

ವ್ಯಾಪಾರದ ಒತ್ತಡದಲ್ಲಿರುವ ಹೊತ್ತಿನಲ್ಲಿ ಅವರ ಗಮನಕ್ಕೆ ಬಾರದಂತೆ ಮಕ್ಕಳ ನೋಟು ನೀಡಿ ವಂಚಿಸಿರುವ ಪ್ರಕರಣ ಭಾನುವಾರ ನಡೆದಿದೆ. ಇಂಥ ಪ್ರಕರಣಗಳ ಬಗ್ಗೆ ವ್ಯಾಪಾರಸ್ಥರು ಎಚ್ಚರ ವಹಿಸಲೇಬೇಕಾಗಿದೆ. ಮಾ. 8ರಂದು ಇಲ್ಲಿನ ಸಂತೆಯ ವ್ಯಾಪಾರದಲ್ಲಿ ಈ ರೀತಿಯ ನೋಟು ಚಲಾವಣೆಯಾಗಿದೆ.

ಸಂತೆ ದಿನವಾದ ಭಾನುವಾರ ತರಕಾರಿ ವ್ಯಾಪಾರದ ಭರಾಟೆಯಲ್ಲಿ ಇದ್ದ ವ್ಯಾಪಾರಸ್ಥರಿಗೆ ಗ್ರಾಹಕನೊಬ್ಬ ತಿಂಡಿ, ತರಕಾರಿ ಹಾಗೂ ದಿನಸಿಗಳನ್ನು ಖರೀದಿಸಿ ರೂ 200ರ ಮುಖಬೆಲೆಯ ನೋಟನ್ನು ಎಲ್ಲ ವ್ಯಾಪಾರಸ್ಥರಿಗೂ ನೀಡಿದ್ದಾನೆ. ಆದರೆ ಯಾರೂ ಸರಿಯಾಗಿ ಪರಿಶೀಲಿಸದೆ ಪಡೆದುಕೊಂಡಿದ್ದಾರೆ. ತಿಂಡಿ ಮಾರುತ್ತಿದ್ದವ ಸಂಜೆ ತನ್ನ ಯಜಮಾನನಿಗೆ ವ್ಯಾಪಾರವಾಗಿದ್ದ ಹಣವನ್ನು ನೀಡಿದಾಗ ಅವರಿಗೆ ಇದು ಗಮನಕ್ಕೆ ಬಂದಿದೆ. ಆದರೆ ಯಾರೂ ಸಹ ಈ ಬಗ್ಗೆ ಪೊಲೀಸರಿಗೆ ದೂರು ನೀಡಿಲ್ಲ.

ಬೊಳ್ಳೆಪಂಡ ಆಶಾ ಅಪ್ಪಣ್ಣಗೆ ಸನ್ಮಾನ



ನಾಪೋಕ್ಲು, ಮಾ.10– ಇಲ್ಲಿನ ಬೇತು ಗ್ರಾಮದ ಅಂಗನವಾಡಿ ಕಾರ್ಯಕರ್ತೆ ಬೊಳ್ಳೆಪಂಡ ಆಶಾ ಅಪ್ಪಣ್ಣ ಅವರನ್ನು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಸನ್ಮಾನಿಸಿತು. ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಉತ್ತಮ ಅಂಗನವಾಡಿ ಶಿಕ್ಷಕಿ ಎಂದು ಗುರುತಿಸಿ ಅವರನ್ನು ಸನ್ಮಾನಿಸಲಾಯಿತು.

ಸುವರ್ಣ ಸಮುಚ್ಚಯ ಭವನದ ಕಾಮಗಾರಿ ವೀಕ್ಷಿಸಿದ ಡಿಸಿ



ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿದ ಡಿಸಿ ಅಧಿಕಾರಿಗಳಿಂದ ಮಾಹಿತಿ ಪಡೆದರು

ಮಡಿಕೇರಿ, ಮಾ.10–ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಕೊಡವ ಪಾರಂಪರಿಕ ಕೇಂದ್ರ, ಕರ್ನಾಟಕ ಸುವರ್ಣ ಸಮುಚ್ಚಯ ಭವನ ಕಟ್ಟಡ ಕಾಮಗಾರಿಯನ್ನು ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಮಂಗಳವಾರ ಭೇಟಿ ನೀಡಿ, ವೀಕ್ಷಿಸಿದರು.

ಕೊಡವ ಹೆರಿಟೇಜ್ ಸೆಂಟರ್‌ಗೆ ಭೇಟಿ ನೀಡಿ ಪರಿಶೀಲಿಸಿದ ಜಿಲ್ಲಾಧಿಕಾರಿ ಅವರು ಯಾವುದೇ ಕಾಮಗಾರಿಯನ್ನು ಕಟ್ಟಡದ ಒಳಾಂಗಣ ಹಾಗೂ ಹೊರಾಂಗಣ ಅಭಿವೃದ್ಧಿ ಸೇರಿದಂತೆ ಎಲ್ಲವನ್ನೂ ಒಂದೇ ಬಾರಿ ಅಂದಾಜು ಪಟ್ಟಿ ಸಲ್ಲಿಸಿ ಹಣ ಬಿಡುಗಡೆ ಮಾಡಿಸಿಕೊಳ್ಳಿ ಎಂದು ಸಲಹೆ ನೀಡಿದರು.


ಐನ್‌ಮನೆ ಮಾದರಿಯಲ್ಲಿ ಕೊಡವ ಹೆರಿಟೇಜ್ ಸೆಂಟರ್ ನಿರ್ಮಿಸಲಾಗಿದೆ. ಜಿಲ್ಲೆಯಲ್ಲಿ ಐನ್‌ಮನೆಯು ಪೂಜ್ಯ ಸ್ಥಾನವನ್ನು ಹೊಂದಿದೆ. ಕೊಡವ ಸಂಸ್ಕೃತಿ ಮತ್ತು ಪರಂಪರೆಯ ಚಟುವಟಿಕೆಗಳನ್ನು ನಡೆಸಲು ಕೊಡವ ಹೆರಿಟೇಜ್ ಸೆಂಟರ್ ಸಹಕಾರಿಯಾಗಿದೆ ಎಂದು ಕಾರ್ಯಪಾಲಕ ಎಂಜಿನಿಯರ್ ಕೆ.ಟಿ.ಪ್ರಭು ಮಾಹಿತಿ ನೀಡಿದರು.

ಈ ಸೆಂಟರ್‌ನಲ್ಲಿ ಮ್ಯೂಸಿಯಂ ಸಹ ಒಳಗೊಂಡಿದೆ. ಮೊದಲ ಹಂತದಲ್ಲಿ 3 ಕೋಟಿ ರೂ. ಬಿಡುಗಡೆಯಾಗಿತ್ತು. ಈಗ 4.95 ಕೋಟಿ ರೂ. ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಅವರು ಗಡಿ ಅಭಿವೃದ್ಧಿ ಪ್ರಾಧಿಕಾರದಿಂದ ಬಾಕಿ ಇರುವ 1.40 ಕೋಟಿ ರೂ. ಬಿಡುಗಡೆಯಾಗಲಿದ್ದು, ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಲೋಕೋಪಯೋಗಿ ಇಲಾಖೆ ಎಂಜಿನಿಯರ್‌ಗೆ ಸೂಚಿಸಿದ ಜಿಲ್ಲಾಧಿಕಾರಿಗಳು ಭವನದ ಕಾಮಗಾರಿ ಬಹಳ ಹಿಂದೆಯೇ ಪೂರ್ಣಗೊಳ್ಳಬೇಕಿತ್ತು, ಆದರೆ ಈಗಲಾದರೂ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು.

ಕಲಾಮಂದಿರ, ಕಲಾ ಗ್ಯಾಲರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಅರೆಭಾಷೆ ಸಾಹಿತ್ಯ ಅಕಾಡೆಮಿ ಕಚೇರಿಗಳು ಸ್ಥಳಾಂತರವಾಗಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಮಾಹಿತಿ ನೀಡಿದರು. ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ಪಾಲಕ ಎಂಜಿನಿಯರ್ ಗಿರೀಶ್, ಸತೀಶ, ಪ್ರವಾಸೋದ್ಯಮ ಇಲಾಖೆಯ ಸಮಾಲೋಚಕ ಜತಿನ್, ಇತರರು ಇದ್ದರು.

ಕೆರೆಯಲ್ಲಿ ಮುಳುಗಿ ತಂದೆ ಮಗ ಸಾವು



ಕೆಂಚ

ಗೋಣಿಕೊಪ್ಪ, ಮಾ.10–ಆಕಸ್ಮಿಕವಾಗಿ ಕೆರೆಯಲ್ಲಿ ಮುಳುಗಿ ತಂದೆ ಮತ್ತು ಮಗ ಸಾವನ್ನಪ್ಪಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಚಿಕ್ಕ ಮುಂಡೂರಿನಲ್ಲಿ ನಡೆದಿದೆ.

ಗ್ರಾಮದ ಅಜ್ಜಿಕುಟ್ಟೀರ ಪೂವಯ್ಯ ಎಂಬುವರ ತೋಟದ ಮನೆಯಲ್ಲಿ ವಾಸವಿದ್ದ ಜಿ.ಕೆ ಕೆಂಚ (8), ತಂದೆ ಜೇನುಕುರುಬರ ಶಿವಣ್ಣ (40) ಮೃತ ದುರ್ದೈವಿಗಳು.

ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 2ನೇ ತರಗತಿ ಓದುತ್ತಿದ್ದ ಕೆಂಚ ಭಾನುವಾರ ಸಂಜೆ ತಂದೆಯೊಂದಿಗೆ ಕೆರೆಗೆ ತೆರಳಿದ ವೇಳೆ ಈ ದುರಂತ ನಡೆದಿದೆ. ಆಳವಿದ್ದ ಕಡೆ ಹೋಗಿದ್ದ ಇವರಲ್ಲಿ ಮಗನ ಕಾಲು ಜಾರಿ ಕೆರೆಯೊಳಗೆ ಬೀಳುತ್ತಿದ್ದಾಗ ಅದನ್ನು ನೋಡಿ ರಕ್ಷಿಸಲು ಹೋದ ತಂದೆಯೂ ನೀರಿನಲ್ಲಿ ಮುಳುಗಿದ್ದಾರೆ. ರಾತ್ರಿ ತಂದೆಯ ಮೃತದೇಹ ಹೊರತೆಗೆಯ ಲಾಗಿತ್ತು, ಮಗುವನ್ನು ಸೋಮವಾರ ಹೊರಗೆತೆದು ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ನಂತರ ಮೃತದೇಹವನ್ನು ಕುಟುಂಬಸ್ಥರಿಗೆ ಒಪ್ಪಿಸಲಾಯಿತು.

ಶ್ರೀಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಘಟನಾ ಸ್ಥಳಕ್ಕೆ ಕುಟ್ಟ ವೃತ್ತ ನಿರೀಕ್ಷಕ ಶಿವರುದ್ರಪ್ಪ ಮತ್ತು ಶ್ರೀಮಂಗಲ ಠಾಣಾಧಿಕಾರಿ ರವೀಂದ್ರ ಭೇಟಿ ನೀಡಿದ್ದರು. ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಲಸೆಗಾರರ ವಿರುದ್ಧ ಕ್ರಮಕ್ಕೆ ಹಿತ ರಕ್ಷಣಾ ಸಮಿತಿ ಆಗ್ರಹ

ಮಡಿಕೇರಿ,ಮಾ.10– ಅಸ್ಸಾಂ ಹಾಗೂ ಇನ್ನಿತರ ಕಡೆಗಳಿಂದ ವಲಸೆ ಬಂದಿರುವ ಕಾರ್ಮಿಕರಿಂದ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ದೌರ್ಜನ್ಯ ಹಾಗೂ ಮಾರುಕಟ್ಟೆಯಲ್ಲಿ ಮಾರುತ್ತಿರುವ ತಂಬಾಕು ಉತ್ಪನ್ನಗಳ ಹಾಗೂ ಇನ್ನಿತರ ವಸ್ತುಗಳ ಕುರಿತು ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಕೊಡಗು ಹಿತ ರಕ್ಷಣಾ ಸಮಿತಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿತು.

ವಲಸೆ ಕಾರ್ಮಿಕರು ಆಹಾರ ಇಲಾಖೆಯ ಪರವಾನಿಗೆ ಇಲ್ಲದೇ ರಾಜಾ ರೋಷವಾಗಿ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಇದಲ್ಲದೇ ತಂಬಾಕು ಉತ್ಪನ್ನಗಳಾದ ಗುಟ್ಕಾ, ಬೀಡಿ ಸಿಗರೇಟ್‌ಗಳನ್ನು ಕೂಡ ಮಾರುತ್ತಿದ್ದಾರೆ. ಇವರ ಪೈಕಿ ಕೆಲವರು ಅಪರಾಧ ಪ್ರಕರಣಗಳಲ್ಲಿ ಕೂಡ ಭಾಗಿಯಾಗಿರುವ ಶಂಕೆ ಇದ್ದು ಮುಂದಿನ ದಿನಗಳಲ್ಲಿ ಕೊಡಗಿಗೆ ಮಾರಕವಾಗುವ ಲಕ್ಷಣಗಳು ಕಂಡು ಬರುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಡಳಿತ ಹಾಗು ಕೊಡಗು ಜಿಲ್ಲಾ ಕಾರ್ಮಿಕ ಅಧಿಕಾರಿಗಳು ಇವರುಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಂಡು ಇವರ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡುವಂತೆ ಇದೇ ಸಂದರ್ಭ ಮನವಿ ಪತ್ರ ಸಲ್ಲಿಸಲಾಯಿತು.

ಮುಂಡಂಡ ಡಿ ಉತ್ತಪ್ಪ ನಿಧನ



ನಾಪೋಕ್ಲು, ಮಾ.10– ಸಮೀಪದ ನೆಲಜಿ ಗ್ರಾಮದ ನಿವಾಸಿ ಮುಂಡಂಡ ಡಿ ಉತ್ತಪ್ಪ (ರಾಜ. 92) ಭಾನುವಾರ ನಿಧನರಾದರು.

ಮೃತರು ಪತ್ನಿ ಮತ್ತು ಪುತ್ರನನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ನೆಲಜಿ ಗ್ರಾಮದಲ್ಲಿ ನೆರವೇರಿತು

ಒಳ ಮೀಸಲಾತಿ ಇಲ್ಲದೇ ಉದ್ಯೋಗ ಭರ್ತಿ ಖಂಡಿಸಿ

ನಾಳೆ ಬೆಂಗಳೂರಲ್ಲಿ ಬೃಹತ್ ಪ್ರತಿಭಟನೆ

ಸಾವಿರಾರು ಮಂದಿ ಭಾಗಿ



ಸುದ್ದಿಗೋಷ್ಠಿಯಲ್ಲಿ ರಾಜಶೇಖರ್ ಮಾತನಾಡಿದರು.

ಚಾಮರಾಜನಗರ, ಮಾ.10– ಒಳ ಮೀಸಲಾತಿ ಇಲ್ಲದೆ ಉದ್ಯೋಗ ಭರ್ತಿ ಮಾಡುವ ಕಾಂಗ್ರೆಸ್ ಸರ್ಕಾರದ ಮಹಾದ್ರೋಹ ಖಂಡಿಸಿ ಒಳ ಮೀಸಲಾತಿ ಹೋರಾಟ ಸಮಿತಿಯಿಂದ ಮಾ.12ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯಿಂದ ಸಾವಿರಕ್ಕೂ ಅಧಿಕ ಮುಖಂಡರು 20 ಬಸ್‌ಗಳಲ್ಲಿ ತೆರಳಿ ಭಾಗವಹಿಸುತ್ತೇವೆ ಎಂದು ಡಾ. ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟ ಗೌರವಾಧ್ಯಕ್ಷ ಬಸವನಪುರ ರಾಜಶೇಖರ್ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ವಿಧೇಯಕ ರಾಜ್ಯಪಾಲರ ಸಹಿ ಪಡೆದು ಅನುಮೋದನೆಗೊಂಡಿದೆ ಎಂದು ಸಂತೋಷಪಡುವ ಸಂದರ್ಭದಲ್ಲಿ ಒಳ ಮೀಸಲಾತಿ ಅನ್ವಯವಾಗದಂತೆ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ ಎಂಬ ಸಚಿವ ಸಂಪುಟದ ತೀರ್ಮಾನ ಸಂವಿಧಾನ ಮತ್ತು ಸಾಮಾಜಿಕ ನ್ಯಾಯಕ್ಕೆ ಬಗೆದ ಘೋರ ಅನ್ಯಾಯವಾಗಿದೆ. ಸರ್ಕಾರದ ಈ ತೀರ್ಮಾನವನ್ನು ಒಳ ಮೀಸಲಾತಿ ಹೋರಾಟಗಾರರು, ಸಾಮಾಜಿಕ ನ್ಯಾಯದ ಪರವಿರುವ ಪ್ರಜ್ಞಾವಂತರೆಲ್ಲರೂ ಒಕ್ಕೊರಲಿನಿಂದ ಉಗ್ರವಾಗಿ ಖಂಡಿಸುತ್ತೇವೆ ಎಂದರು.


ಚುನಾವಣೆಗೂ ಮುನ್ನಾ ಸರ್ಕಾರ ಬಂದ ಮೊದಲ ಅಧಿವೇಶನದಲ್ಲಿಯೇ ಒಳ ಮೀಸಲಾತಿಯನ್ನು ನಮ್ಮ ಸರ್ಕಾರ ಜಾರಿಗೊಳಿಸುತ್ತದೆ ಎಂದು ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಘೋಷಿಸಿತ್ತು. ಚಿತ್ರದುರ್ಗ ಸಮಾವೇಶದಲ್ಲಿಯೂ ಅದೇ ಭರವಸೆ ನೀಡಲಾಗಿತ್ತು. ಸರ್ಕಾರ ಬಂದು 2 ವರ್ಷವಾದರೂ ಒಳ ಮೀಸಲಾತಿ ಜಾರಿಗೊಳಿಸುವ ಪ್ರಾಮಾಣಿಕ ಪ್ರಯತ್ನ ನಡೆಸಲಿಲ್ಲ. ಅಂತಿಮವಾಗಿ ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಹೋರಾಟದ ಒತ್ತಡಕ್ಕೆ ಮಣಿದು ಸಚಿವ ಸಂಪುಟದಲ್ಲಿ ಒಳ ಮೀಸಲಾತಿ ಜಾರಿಗೆ ತರುತ್ತೇವೆಂದು ತಾತ್ವಿಕವಾಗಿ ಒಪ್ಪಿಕೊಂಡು 2025ರ ಆ.25ರಂದು ಆದೇಶ ಹೊರಡಿಸಿದ್ದೀರಿ. 2025ರ ಚಳಿಗಾಲದ ಅಧಿವೇಶನದಲ್ಲಿ ಶಾಸನಬದ್ಧ ಕಾಯ್ದೆ ಮಾಡಿಕೊಂಡು ರಾಜ್ಯಪಾಲರಿಂದ ಅಂತಿಮ ಅಂಗೀಕಾರ ಪಡೆಯಲಾಗಿದೆ. ಇಷ್ಟೆಲ್ಲಾ ಇದ್ದರೂ ಒಳ ಮೀಸಲಾತಿ ಇಲ್ಲದೇ ನೇಮಕಾತಿ ಮಾಡುವಂತೆ ಸಚಿವ ಸಂಪುಟ ತೀರ್ಮಾನ ತೆಗೆದುಕೊಳ್ಳುವುದು ಸರ್ಕಾರಕ್ಕೆ ಆತ್ಮಸಾಕ್ಷಿ ಇಲ್ಲ ಎಂಬುದನ್ನು ಸಾರುತ್ತದೆ ಎಂದರು.

ಪರಿಶಿಷ್ಟರ ಮೀಸಲಾತಿ ಹೆಚ್ಚಳದಿಂದ ಶೇ.56% ಮೀಸಲಾತಿಯನ್ನು ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿದೆ. ಆದರೆ ಅರ್ಜಿದಾರರ ಪರ ವಕೀಲರು ಅದಕ್ಕೆ ತಡೆ ನೀಡುವಂತೆ ವಾದ ಮಂಡಿಸಿಲ್ಲ ಮತ್ತು ನ್ಯಾಯಾಲಯ ತಡೆಯಾಜ್ಞೆ ನೀಡಿಲ್ಲ. ಹಾಗಾಗಿ ಶೇ.56%ನಂತೆ ನೇರ ನೇಮಕಾತಿ ಮಾಡಿಕೊಳ್ಳಲು ನ್ಯಾಯಾಲಯವು ತಡೆಯಾಜ್ಞೆ ನೀಡಿದೆ ಎಂಬುದು ಸತ್ಯಕ್ಕೆ ದೂರ. ಆದರೂ ಸರ್ಕಾರ ದಿಕ್ಕು ತಪ್ಪಿಸುತ್ತಿರುವುದು ಮಹಾ ಅನ್ಯಾಯ. ಹೀಗಾಗಿ ಮಾ.12 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಬುದ್ಧಿ ಕಲಿಸಲು ಮುಂದಾಗಿದ್ದೇವೆ. ಈ ನಿರ್ಣಾಯಕ ಹೋರಾಟದಲ್ಲಿ ಜಿಲ್ಲೆಯ ಮಾದಿಗ ಸಮುದಾಯದವರು ಸ್ವಯಂ ಪ್ರೇರಿತರಾಗಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

> ಭಾರತದ ಹಲವು ರಾಜ್ಯಗಳಲ್ಲಿ ಪ.ಜಾತಿ/ಪ.ಪಂಗಡ ಸಮುದಾಯಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಸಂವಿಧಾನಬದ್ಧವಾಗಿ ಮೀಸಲಾತಿ ಪ್ರಮಾಣ ಹೆಚ್ಚಿಸಿ ಅನುಷ್ಠಾನ ಗೊಳಿಸಲಾಗಿದೆ. ಆದರೆ ಕರ್ನಾಟಕದಲ್ಲಿ 2022ರ ಡಿ.28ರಿಂದ ಜಾರಿಗೆ ಬಂದ ಪ.ಜಾತಿ 17% ಮತ್ತು ಪಪಂ 7% ಮೀಸಲು ಪ್ರಮಾಣ ಹೆಚ್ಚಳದಂತೆ ಉದ್ಯೋಗಗಳನ್ನು ನೀಡದೆ ಪ.ಜಾತಿಗೆ 2% ಕಡಿತ ಎಂದರೆ 1129 ಮತ್ತು ಪ. ಪಂಗಡಕ್ಕೆ 4% ಕಡಿತ ಎಂದರೆ 2,258 ಒಟ್ಟು ಪ.ಜಾ–ಪ.ಪ ದಲಿತ ಸಮುದಾಯಕ್ಕೆ ಸಿಗಬೇಕಾದ 3387ಕ್ಕೂ ಹೆಚ್ಚಿನ ಹುದ್ದೆಗಳನ್ನು ತಪ್ಪಿಸಿ 56,432 ಹುದ್ದೆಗಳ ಭರ್ತಿಗೆ ಮುಂದಾದ ಪರಿಶಿಷ್ಟ ಜಾತಿಗಳ ವಿರೋಧಿ ನೀತಿಯ ಆದೇಶ ಹಿಂಪಡೆಯಬೇಕು.
>
> – ರಾಜಶೇಖರ್, ಡಾ.ಬಾಬು ಜಗಜೀವನರಾಂ ಸಂಘಟನೆಗಳ ಒಕ್ಕೂಟದ ಗೌರವಾಧ್ಯಕ್ಷ.

ಒಕ್ಕೂಟದ ಜಿಲ್ಲಾಧ್ಯಕ್ಷ ಹೆಚ್.ಹೆಚ್.ನಾಗರಾಜು, ಸಂಘಟನೆ ಗೌರವ ಸಲಹೆಗಾರ ಜವರಯ್ಯ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಪಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಚನ್ನಬಸವಯ್ಯ, ಸಂಘಟನೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್, ಸಹ ಕಾರ್ಯದರ್ಶಿ ರಾಮಸಮುದ್ರ ಶಿವಕುಮಾರ್, ಯುವ ಮುಖಂಡ ಶಿವಣ್ಣ ಮುಖಂಡ ಸುಂದರ್ ಹಾಜರಿದ್ದರು.

ಸಿಲಿಂಡರ್ ಸ್ಫೋಟ: ದಂಪತಿಗೆ ಗಾಯ



ಚಾಮರಾಜನಗರ, ಮಾ.10– ಅಡುಗೆ ಅನಿಲ ಸೋರಿಕೆಯಾದ ಪರಿಣಾಮ ಸಿಲಿಂಡರ್ ಸ್ಫೋಟಗೊಂಡು ದಂಪತಿ ಗಾಯಗೊಂಡಿರುವ ಘಟನೆ ನಗರದಲ್ಲಿ ಮಂಗಳವಾರ ಬೆಳಗ್ಗೆ ನಡೆದಿದೆ.

ನಗರದ ರೈಲ್ವೆ ಬಡಾವಣೆ ನಿವಾಸಿ ಪರಮೇಶ್(45), ಅವರ ಪತ್ನಿ ಜ್ಯೋತಿ (35) ಗಾಯಗೊಂಡವರು. ಇಂದು ಬೆಳಗ್ಗೆ ಅಡುಗೆ ಅನಿಲ ಸ್ಫೋಟಗೊಂಡ ಪರಿಣಾಮ ಮನೆಯಲ್ಲಿದ್ದ ಪರಮೇಶ್ ಹಾಗೂ ಜ್ಯೋತಿ ಗಾಯಗೊಂಡಿದ್ದು, ತಕ್ಷಣ ಅವರನ್ನು ಸ್ಥಳೀಯರು ಜಿಲ್ಲಾಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಸಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಬೆಂಕಿ ಜ್ವಾಲೆಯಿಂದಾಗಿ ಮನೆಯಲ್ಲಿದ್ದ ಸಾಮಗ್ರಿಗಳು, ದವಸ–ಧಾನ್ಯ ಸೇರಿದಂತೆ ಲಕ್ಷಾಂತರ ರೂ. ಮೌಲ್ಯದ ಪರಿಕರಗಳು ಭಸ್ಮವಾಗಿವೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಸ್ಥಳಕ್ಕೆ ಪಟ್ಟಣ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಿಪಿಐ ಕಚೇರಿಯಲ್ಲಿ ಶಾರ್ಟ್ ಸರ್ಕ್ಯೂಟ್

ಕಡತಗಳು, ಕಂಪ್ಯೂಟರ್ ಭಸ್ಮ: ಎಸ್ಪಿ ಭೇಟಿ ಪರಿಶೀಲನೆ



ಕೊಳ್ಳೇಗಾಲ, ಮಾ.10– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಪಟ್ಟಣದ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಬೆಂಕಿ ಕಾಣಿಸಿಕೊಂಡು ಕಡತಗಳು, ಕಂಪ್ಯೂಟರ್ ಉಪಕರಣಗಳು ಸೇರಿದಂತೆ ಇನ್ನಿತರ ವಸ್ತುಗಳು ಭಸ್ಮವಾಗಿವೆ.

ಕಚೇರಿ ಒಳಗಿಂದ ಬೆಂಕಿ ಮತ್ತು ಹೊಗೆ ಬರುತ್ತಿದ್ದನ್ನು ಕಂಡ ಸಾರ್ವಜನಿಕರು ಪೊಲೀಸ್ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಈ ವೇಳೆ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ ವಿದ್ಯುತ್ ಸಂಪರ್ಕ ಲೈನ್‌ಮ್ಯಾನ್‌ಗಳಿಂದ ಕಡಿತಗೊಳಿಸಿ ಬಳಿಕ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಅಷ್ಟರಲ್ಲಾಗಲೇ ಸುಮಾರು 2.5 ಲಕ್ಷ ರೂ. ಮೌಲ್ಯದ 3 ಜೆರಾಕ್ಸ್ ಮಿಷನ್, ಕಂಪ್ಯೂಟರ್, ಸಿಪಿಯು, ಮೌಸ್, ಕೀಬೋರ್ಡ್ ಮತ್ತು ಇನ್ನಿತರ ವಸ್ತುಗಳು ಸುಟ್ಟು ಕರಕಲಾಗಿವೆ.

ವಿಷಯ ತಿಳಿದ ತಕ್ಷಣವೇ ಡಿವೈಎಸ್ಪಿ ಧರ್ಮೇಂದ್ರ, ಸರ್ಕಲ್ ಇನ್ಸ್‌ಪೆಕ್ಟರ್ ಶಿವಮಾದಯ್ಯ, ಎಸ್‌ಐಗಳಾದ ಸುಪ್ರೀತ್, ಚೆಲುವರಾಜು, ವರ್ಷ ಪರಿಶೀಲನೆ ನಡೆಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಇಲ್ಲಿನ ಸರ್ಕಲ್ ಇನ್ಸ್‌ಪೆಕ್ಟರ್ ಕಚೇರಿಯಲ್ಲಿದ್ದ ಕಂಪ್ಯೂಟರ್, ಪ್ರಿಂಟರ್, ಜೆರಾಕ್ಸ್ ಮಿಷಿನ್, ಟೇಬಲ್‌ಗಳು ಸುಟ್ಟು ಹೋಗಿವೆ. ಯಾವುದೇ ಅವಘಡ ಉಂಟಾಗಿಲ್ಲ ಎಂದರು.

ಇದೇ ವೇಳೆ ವೃತ್ತ ನಿರೀಕ್ಷಕ ಶಿವಮಾದಯ್ಯ, ಎಸ್‌ಐ ವರ್ಷ, ಸುಪ್ರೀತ್ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬೈಕ್‌ಗೆ ಕಾರು ಡಿಕ್ಕಿ: ಸವಾರನಿಗೆ ಗಾಯ



ಬೇಗೂರು, ಮಾ.10– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಗಾಯಗೊಂಡಿರುವ ಘಟನೆ ಅರೇಪುರ ಗೇಟ್ ಸಮೀಪದ ಹೊಸ ಕೆಇಬಿ ಎದುರು ನಡೆದಿದೆ.

ಕುಲಗಾಣ ಗ್ರಾಮದ ವಸಂತ(23) ಗಾಯಗೊಂಡವರು. ಈತ ತೊಂಡವಾಡಿ ಗ್ರಾಮದ ರಿಷಿ ಫ್ಯಾಕ್ಟರಿಯಲ್ಲಿ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ವೇಳೆ ಅರೇಪುರ ಗೇಟ್‌ನ ಹೊಸ ಕೆಇಬಿ ಎದುರು ಬೈಕ್‌ಗೆ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಗಾಯಗೊಂಡ ವಸಂತ್‌ನನ್ನು ಬೇಗೂರು ಠಾಣೆ ಪೊಲೀಸರು ಗ್ರಾಮದ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಸಂಬಂಧ ಬೇಗೂರು ಠಾಣೆ ಪೊಲೀಸರು ಎರಡೂ ವಾಹನಗಳನ್ನು ವಶಪಡಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮಾ.10– ಹರದನಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ 4ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮಾ.12ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಮೂಡ್ಲಾಕೂಡು, ಮುಕ್ಕಡಹಳ್ಳಿ, ಉಡಿಗಾಲ, ನಂಜದೇವನಪುರ, ಕಲ್ಪುರ, ದೇವಲಾಪುರ, ತಮ್ಮಡಹಳ್ಳಿ, ಎನ್.ಜೆ.ವೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸರ್ಕಾರದಿಂದ ಎಸ್‌ಇಪಿ, ಟಿಎಸ್‌ಪಿ ಅನುದಾನ ದುರ್ಬಳಕೆ



ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಮಾತನಾಡಿದರು.

ಚಾಮರಾಜನಗರ, ಮಾ.10– ರಾಜ್ಯ ಸರ್ಕಾರ ಮತ್ತೆ ಎಸ್‌ಇಪಿ, ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ದುರ್ಬಳಕೆ ಮಾಡಿಕೊಂಡಿದೆ ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ಲಾಕೂಡು ಪ್ರಕಾಶ್ ಆರೋಪಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಾಲಿನಲ್ಲಿ ಎಸ್‌ಇಪಿ, ಟಿಎಸ್‌ಪಿಗೆ ಸರ್ಕಾರ 44 ಸಾವಿರ ಕೋಟಿ ಅನುದಾನ ಮೀಸಲಿಟ್ಟಿತ್ತು. ಅದರಲ್ಲಿ 14 ಸಾವಿರ ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡಿದ್ದು, ಸಮಾಜ ಕಲ್ಯಾಣ ಇಲಾಖೆಗೆ ಕೇವಲ 7 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಅಪಾದಿಸಿದರು.

ಎಸ್‌ಇಪಿ, ಟಿಎಸ್ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡದಂತೆ ದಲಿತ ಶಾಸಕರು ಸಿಎಂ ಸಿದ್ದರಾಮಯ್ಯ ಅವರನ್ನು ಕೇಳಿಕೊಂಡರೂ ಇದಕ್ಕೆ ಕ್ಯಾರೆ ಎನ್ನದೇ ಅನುದಾನ ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದರು.

ಕಳೆದ ಬಿಜೆಪಿ ಸರ್ಕಾರದ ಅವಧಿಯಲ್ಲಿ ದಲಿತರಿಗೆ ಸಾಕಷ್ಟು ಯೋಜನೆಗಳ ಮೂಲಕ ಅನುದಾನ ಮೀಸಲಿಡಲಾಗಿತ್ತು. ಹೆಚ್.ಸಿ ಮಹದೇವಪ್ಪ ಸಮಾಜಕಲ್ಯಾಣ ಸಚಿವರು ಆಗಿದ್ದರೂ ಇಲಾಖೆಯು ಸಿಎಂ ಸಿದ್ದರಾಮಯ್ಯ, ಎಂಎಲ್‌ಸಿ ಡಾ.ಯತೀಂದ್ರ ಅವರ ಕೈಯಲ್ಲಿ ಬಂಧಿಯಾಗಿದೆ ಎಂಬ ಸಂಶಯ ಮೂಡಿದೆ ಎಂದರು.

ಇನ್ನಾದರೂ ಸಮುದಾಯದ ಸ್ವಾಮೀಜಿಗಳು, ಮುಖಂಡರು ಸಮುದಾಯದ ಒಳಿತಿಗಾಗಿ ಧ್ವನಿಯಾಗಬೇಕು. ಕೂಡಲೇ 14 ಸಾವಿರ ಕೋಟಿ ದುರುಪಯೋಗವಾಗದಂತೆ ತಡೆಯಬೇಕು. ಅನುದಾನ ದುರ್ಬಳಕೆ ಮಾಡಿಕೊಳ್ಳುವ ಬದಲು ದಲಿತರಿಗೆ ಸಂಬಂಧಿಸಿದ ನಿಗಮಗಳಿಗೆ ಬೀಗ ಹಾಕಿಸಿದರೆ ಸಮುದಾಯದ ಜನ ನೆಮ್ಮದಿಯಾಗಿ ಜೀವನ ನಡೆಸುತ್ತಾರೆ ಎಂದರು.

ಮುಖಂಡ ಮಂಜು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಮೂರ್ತಿ, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪರಮೇಶ್, ಶೇಷಪ್ಪ ಪಾಸ್ವಾನ್, ರಾಮಸಮುದ್ರ ಶಿವಣ್ಣ ಹಾಜರಿದ್ದರು.

ಸಿ.ವಿ.ನಾಗರಾಜ್ ನಿಧನ



ಚಾಮರಾಜನಗರ, ಮಾ.10– ನಗರದ ನಿವಾಸಿ ಲೇ.ಸಿ.ಎಸ್.ವಾಸುದೇವ ಶಾಸ್ತ್ರಿ ಅವರ ಪುತ್ರ ಸಿ.ವಿ.ನಾಗರಾಜ್ ವಾಸುಕಿ(65) ಸೋಮವಾರ ನಿಧನರಾದರು.

ಮೃತರು ನಗರದ ಸರ್ಕಾರಿ ಜೆಸಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಹಾಗೂ ಆರ್‌ಟಿಓ ಕಚೇರಿಯಲ್ಲಿ ಕೆಲಕಾಲ ಸೇವೆ ಸಲ್ಲಿಸಿದ್ದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಾ.11 ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀರಂಗಪಟ್ಟಣ ಬಳಿ ಅರ್ಚಕನ ಕೊಲೆ ಪ್ರಕರಣ: ಪತ್ನಿ ಸೇರಿ ನಾಲ್ವರ ಬಂಧನ

ಶ್ರೀರಂಗಪಟ್ಟಣ, ಮಾ.10–ಅರ್ಚಕನ ಕೊಲೆ ಪ್ರಕರಣವನ್ನು ಘಟನೆ ನಡೆದ ಮೂರು ದಿನಗಳಲ್ಲೇ ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಈ ಪ್ರಕರಣಕ್ಕೆ ಅಕ್ರಮ ಸಂಬಂಧವೇ ಪ್ರಮುಖ ಕಾರಣವಾಗಿದ್ದು, ಪತ್ನಿಯೇ ತನ್ನ ಪತಿಯನ್ನು ಕೊಲೆ ಮಾಡಿಸಿದ್ದಾಳೆ.

ತಾಲೂಕಿನ ಮರಳಗಾಲ ಗ್ರಾಮದ ಅರ್ಚಕ ಸಿದ್ದಲಿಂಗಪ್ಪನ ಪತ್ನಿ ಶಾಲಿನಿ (32), ಪ್ರಕರಣದ ಪ್ರಮುಖ ಆರೋಪಿ. ಉಳಿದಂತೆ ಎಂ.ಸಿ.ಹರೀಶ(33), ಎಂ.ಆರ್. ಸಂತೋಷ್ ಕುಮಾರ್(29), ಬಿ.ಆರ್. ಗಣೇಶ(29) ಸೇರಿ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮೃತ ಅರ್ಚಕ ಸಿದ್ದಲಿಂಗಪ್ಪ ತನ್ನ ಸ್ವಂತ ಅಕ್ಕನ ಮಗಳನ್ನೇ ಮದುವೆ ಮಾಡಿಕೊಂಡಿದ್ದು, ಎರಡು ಮಕ್ಕಳಿವೆ. ಅರ್ಚಕನ ಹೆಂಡತಿ ಶಾಲಿನಿ ಅದೇ ಊರಿನ ಟಿಪ್ಪರ್ ಡ್ರೈವರ್, ಅವಿವಾಹಿತ ಎಂ.ಸಿ.ಹರೀಶನೊಂದಿಗೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದ ಬಗ್ಗೆ ಪೊಲೀಸರಿಗೆ ಮಾಹಿತಿ ತಿಳಿದು ಬಂದಿದೆ. ನಂತರ ಹರೀಶನನ್ನು ಮಾ.9ರಂದು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಶಾಲಿನಿಯೊಂದಿಗೆ ತಾನು ಅಕ್ರಮ ಸಂಬಂಧ ಹೊಂದಿರುವ ಬಗ್ಗೆ ಬಾಯಿ ಬಿಟ್ಟಿದ್ದಾನೆ.

ಒಂದು ದಿನ ಶಾಲಿನಿ ಜೊತೆ ನಾನು ಅವರ ಮನೆಯಲ್ಲೇ ಇದ್ದಾಗ ಇಬ್ಬರೂ ಆಕಸ್ಮಿಕವಾಗಿ ಅರ್ಚಕರ ಕೈಗೆ ಸಿಕ್ಕಿಬಿದ್ದಿದ್ದೆವು. ಅಂದಿನಿಂದ ಅರ್ಚಕ, ತನ್ನ ಹೆಂಡತಿ ಮತ್ತು ತನಗೆ ಹಿಂಸೆ ಕೊಡುತ್ತಿದ್ದ. ಇದರಿಂದ ರೋಸಿ ಹೋದ ಶಾಲಿನಿ ಏನಾದರೂ ಮಾಡಿ ತನ್ನ ಗಂಡ ಅರ್ಚಕನನ್ನು ಮುಗಿಸು ಎಂದು ಹೇಳಿದ್ದಾಗಿ ಹರೀಶ ಹೇಳಿಕೆಯಲ್ಲಿ ತಿಳಿಸಿದ್ದಾನೆ. ಮಾ.6ರಂದು ಅರ್ಚಕ ಹೊರಗೆ ಹೋದ ಹಾಗೂ ಆತ ವಾಪಸ್ ಬರುತ್ತಿರುವ ಬಗ್ಗೆ ಪ್ರಿಯಕರನಿಗೆ ಶಾಲಿನಿ ಮೆಸೇಜ್ ಮಾಡಿದ್ದಾಳೆ. ಕೊಲೆಯಾದ ಸ್ಥಳದಿಂದ ಹಿಂದೆ ಕಿ.ಮೀ. ದೂರದಲ್ಲಿ ಒಬ್ಬನೇ ಬರುತ್ತಿರುವ ಬಗ್ಗೆ ಟಿಪ್ಪರ್ ಡ್ರೈವರ್ ಗಣೇಶ ಮಾಹಿತಿ ನೀಡಿದ್ದಾನೆ. ನಂತರ ಹರೀಶ ಮತ್ತು ಮತ್ತೊಬ್ಬ ಟಿಪ್ಪರ್ ಡ್ರೈವರ್ ಸಂತೋಷ್ ಕುಮಾರ್ ಜೊತೆಯಾಗಿ ಗ್ರಾಮದ ಬಳಿಯ ಕಾಲುವೆ ಏರಿಯ ನಿರ್ಜನ ಸ್ಥಳದಲ್ಲಿ ಅರ್ಚಕ ಸಿದ್ದಲಿಂಗಪ್ಪನನ್ನು ಅಡ್ಡಗಟ್ಟಿ ದೊಣ್ಣೆಗಳಿಂದ ಹೊಡೆದು, ಕೊಲೆ ಮಾಡಿದ್ದಲ್ಲದೆ ಅದನ್ನು ಅಪಘಾತವೆಂದು ಬಿಂಬಿಸಲು ಶವ ಹಾಗೂ ಬೈಕನ್ನು ಏರಿ ಮೇಲಿನ ರಸ್ತೆಯಿಂದ ನಾಲಾ ನೀರಿಗೆ ತಳ್ಳಿದ್ದಾರೆ. ಊರಿನಲ್ಲಿ ತಮ್ಮ ಮೇಲೆ ಯಾವ ಅನುಮಾನ ಬಾರದಂತೆ ಶವ ಸಂಸ್ಕಾರದ ವೇಳೆ ಭಾಗಿಯಾಗಿದ್ದಾಗಿ ತಿಳಿಸಿದ್ದಾನೆ.



ಸಿದ್ದಲಿಂಗಪ್ಪ | ಶಾಲಿನಿ | ಎಂ.ಸಿ.ಹರೀಶ | ಸಂತೋಷ್ ಕುಮಾರ್ | ಬಿ.ಆರ್.ಗಣೇಶ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ಮಾರ್ಗದರ್ಶನದಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಿ.ಇ.ತಿಮ್ಮಯ್ಯ, ಎಸ್.ಇ.ಗಂಗಾಧರಸ್ವಾಮಿ ಡಿವೈಎಸ್‌ಪಿ ಯು.ಡಿ.ಕೃಷ್ಣಕುಮಾರ್ ನೇತೃತ್ವದಲ್ಲಿ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಹೆಚ್. ಆನಂದ ಕುಮಾರ್ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ, ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್, ಪಾಂಡವಪುರ ಠಾಣೆ ಇನ್ಸ್‌ಪೆಕ್ಟರ್ ಹೆಚ್.ಪಿ.ಶರತ್, ಪಿಎಸ್‌ಐಗಳಾದ ಜಿ.ಎಸ್.ರಕ್ಷಿತ ವಿನೋದ್, ರಮೇಶ್ ಕರಕಿಕಟ್ಟೆ, ಸಿಬ್ಬಂದಿಗಳಾದ ಲೋಕೇಶ್, ಹಫೀಜ್ ಪಾಷ, ಚಂದ್ರಶೇಖರ್, ಶ್ರೀಧರ್, ರವಿಕಿರಣ್ ಲೋಕೇಶ್, ಶಂಕರ್, ದಿನೇಶ್, ಮಂಜುನಾಥ, ಶರತ್, ಸಂತೋಷ್, ತೌಸಿಫ್ ಅವರನ್ನೊಳಗೊಂಡ ತಂಡ ರಚನೆ ಮಾಡಲಾಗಿತ್ತು.

ಆರೋಪಿ ಹರೀಶನನ್ನು ಶ್ರೀರಂಗಪಟ್ಟಣ ಎಸಿಜೆ & ಎಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಹೆಚ್ಚಿನ ತನಿಖೆಗೆ ಪೊಲೀಸ್ ವಶಕ್ಕೆ ಪಡೆಯಲಾಗಿದೆ. ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಮೊಬೈಲ್ ಫೋನುಗಳನ್ನು ವಶಪಡಿಸಿಕೊಂಡು, ತನಿಖೆ ಮುಂದುವರಿಸಿದ್ದಾರೆ.

ಶ್ರೀರಂಗಪಟ್ಟಣ ಉಪ ವಿಭಾಗದ ಪೊಲೀಸ್ ಠಾಣಾ ಅಧಿಕಾರಿ ಸಿಬ್ಬಂದಿಯವರ ಕಾರ್ಯವೈಖರಿ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಗೂಡ್ಸ್ ಕ್ಯಾಂಟರ್ ಡಿಕ್ಕಿ; ಬೈಕ್ ಸವಾರ ಸ್ಥಳದಲ್ಲೇ ಸಾವು

ಮೈಸೂರು,ಮಾ.10(ಪಿಎಂ)– ಗೂಡ್ಸ್ ಕ್ಯಾಂಟರ್ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಟಿ.ನರಸೀಪುರ–ಮೈಸೂರು ರಸ್ತೆಯ ಗುರುಕಾರ್‌ಪುರ ಗೇಟ್ ಬಳಿ ಮಂಗಳವಾರ ಮಧ್ಯಾಹ್ನ ನಡೆದಿದೆ.



ಟಿ.ನರಸೀಪುರ ತಾಲೂಕಿನ ಎಸ್. ಮೇಗಡಹಳ್ಳಿ ನಿವಾಸಿ ಎಸ್.ಪ್ರಭಾಕರ್ ಅಲಿಯಾಸ್ ನಿಂಗರಾಜು (41) ಮೃತಪಟ್ಟ ಬೈಕ್ ಸವಾರ.

ಮೈಸೂರಿನ ವಾಲ್ ಆಫ್ ಮೈಸೂರಿನಲ್ಲಿ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡಿಕೊಂಡಿದ್ದ ಪ್ರಭಾಕರ್, ಪ್ರತಿದಿನ ಕೆಲಸಕ್ಕೆ ಮನೆಯಿಂದ ತಮ್ಮ ಬೈಕ್‌ನಲ್ಲಿ ಬಂದು ಹೋಗುತ್ತಿದ್ದರು. ಒಂದೊಂದು ದಿನ ಬಸ್ಸಿನಲ್ಲಿ ಹೋಗಿ ಬರುತ್ತಿದ್ದರು. ಅದರಂತೆ ಮಂಗಳವಾರ ಸಹ ಬೈಕ್‌ನಲ್ಲಿ ಮೈಸೂರಿಗೆ ಹೋಗುತ್ತಿದ್ದಾಗ ದುರಂತ ನಡೆದಿದೆ.

ಟಿ.ನರಸೀಪುರ ಕಡೆಯಿಂದ ಮೈಸೂರು ಕಡೆಗೆ ಪ್ರಭಾಕರ್ ಬೈಕ್‌ನಲ್ಲಿ ಹೋಗುತ್ತಿದ್ದಾಗ, ಅದೇ ಮಾರ್ಗದಲ್ಲಿ ಹೋಗುತ್ತಿದ್ದ ಗೂಡ್ಸ್ ಕ್ಯಾಂಟರ್ (ಕೆಎ–07, ಸಿ–2256) ಅತಿವೇಗವಾಗಿ ಪ್ರಭಾಕರ್ ಅವರ ಬೈಕ್‌ಗೆ (ಕೆಎ–12, ಹೆಚ್–2928) ಹಿಂದಿನಿಂದ ಡಿಕ್ಕಿ ಹೊಡೆದಿದೆ. ಪರಿಣಾಮ ಗೂಡ್ಸ್ ಕ್ಯಾಂಟರ್ ಚಕ್ರಗಳು ಪ್ರಭಾಕರ್ ಮೇಲೆ ಹರಿದಿದ್ದು, ಇದರಿಂದ ಗಂಭೀರವಾಗಿ ಗಾಯಗೊಂಡ ಪ್ರಭಾಕರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಈ ಸಂಬಂಧ ಮೃತರ ತಂದೆ ಸಿದ್ದನಾಯಕ ಅವರು ನೀಡಿದ ದೂರಿನನ್ವಯ ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ರಂಜಾನ್ ಹಿನ್ನೆಲೆಯಲ್ಲಿ ಮೀನಾ ಬಜಾರ್‌ನಲ್ಲಿ ಸಂಭ್ರಮದ ಶಾಪಿಂಗ್

ಕಣ್ಣು ಕೋರೈಸುವ ವಸ್ತುಗಳು, ತಿಂಡಿ-ತಿನಿಸುಗಳು; ಖರೀದಿ ಭರಾಟೆಯೂ ಜೋರಾಗಿದೆ





ಮೈಸೂರಿನ ಮಂಡಿ ಮೊಹಲ್ಲಾದ ಸಾಡೇ ರಸ್ತೆಯಲ್ಲಿರುವ 'ಮೀನಾ ಬಜಾರ್'ನಲ್ಲಿ ರಂಜಾನ್ ಹಿನ್ನೆಲೆಯಲ್ಲಿ ಸಂಜೆ ವೇಳೆ ಶಾಪಿಂಗ್ ಜೋರಾಗಿದೆ. ಮತ್ತೊಂದು ಚಿತ್ರದಲ್ಲಿ ಓಲೆ, ಜುಮ್ಕಿ ಖರೀದಿಯ ಕುತೂಹಲದಲ್ಲಿ ಮಹಿಳೆಯರು.

ಮೈಸೂರು, ಮಾ.10(ವಿವಿಹೆಚ್)– ಮುಸ್ಲಿಂ ಸಮುದಾಯದಲ್ಲಿ ಪವಿತ್ರ ರಂಜಾನ್ ಮಾಸದ ಸಂಭ್ರಮ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ರಂಗೇರಿದ್ದು, ಉಪವಾಸ ವ್ರತಾಚರಣೆ ನಡುವೆಯೇ 'ಈದ್ ಉಲ್ ಫಿತ್' ಆಚರಣೆಗೆ ಸಂಬಂಧಿಸಿದಂತೆ ಖರೀದಿ ಭರಾಟೆಯೂ ಜೋರಾಗಿದೆ.

ಮೈಸೂರಿನ ಮಂಡಿ ಮೊಹಲ್ಲಾದ ಸಾಡೇ ರಸ್ತೆಯ 'ಮೀನಾ ಬಜಾರ್' ರಂಜಾನ್ ಹಾಗೂ ಯುಗಾದಿ ಹಬ್ಬಗಳಿಗೆ ಶುಭ ಕೋರುವ ದೀಪಾಲಂಕಾರಗಳ ಮೂಲಕ ಕಂಗೊಳಿಸುತ್ತಿದೆ. ಸಂಜೆಯ ಇಫ್ತಾರ್ ಪ್ರಾರ್ಥನೆ ಬಳಿಕವಂತೂ ರಸ್ತೆಯ ಅಂಗಡಿಗಳು, ತನ್ನ ವಿಶಿಷ್ಟತೆಯಿಂದ ಹೆಚ್ಚೆಚ್ಚು ಜನರನ್ನು ಆಕರ್ಷಿಸುತ್ತಿದೆ.

ಮಹಿಳೆಯರು, ಮಕ್ಕಳ ಬಟ್ಟೆಗಳು, ಬಗೆಬಗೆಯ ಫ್ಯಾಷನ್ ಉತ್ಪನ್ನಗಳು, ದೇಶ–ವಿದೇಶಗಳ ವಿವಿಧ ಭಾಗಗಳಿಂದ ಹಬ್ಬಕ್ಕಾಗಿ ತಂದಿರುವ ವಿನೂತನ ಫ್ಯಾಷನ್ ಬಟ್ಟೆಗಳು, ಸುಗಂಧ ದ್ರವ್ಯಗಳು, ಚಪ್ಪಲಿಗಳು, ಫ್ಯಾನ್ಸಿ ಆಭರಣಗಳು, ಗೃಹೋಪಯೋಗಿ ವಸ್ತುಗಳು, ಮಕ್ಕಳ ಆಟಿಕೆಗಳು, ದೇಸಿಯ ಆಹಾರ, ಪಾಶ್ಚಿಮಾತ್ಯ ಬಗೆಬಗೆಯ ಖಾದ್ಯಗಳ ಅಂಗಡಿಗಳು ಜನರನ್ನು ತಮ್ಮತ್ತ ಸೆಳೆಯುತ್ತಿವೆ. ಹೀಗೆ ಸದಾ ಗಿಜಿಗುಡುವ ರಸ್ತೆಯಲ್ಲಿ ತಮಗಿಷ್ಟದ ವಸ್ತುಗಳನ್ನು ಕೊಳ್ಳಲು ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು ಸೇರಿದಂತೆ ಇತರೆ ಭಾಗಗಳಿಂದಲೂ ಬರುವ ಮುಸ್ಲಿಮರು ಪ್ರೀತಿಪಾತ್ರರಿಗೆ ಉಡುಗೊರೆ ಖರೀದಿ ಮಾಡಿ, ಹಬ್ಬವನ್ನು ಸಂಭ್ರಮದಿಂದ ಸ್ವಾಗತಿಸುತ್ತಿದ್ದಾರೆ.

ಬಗೆ–ಬಗೆಯ ಖಾದ್ಯಗಳಿಗೆ ಮಾರು ಹೋದ ಜನರು: ಮೀನಾ ಬಜಾರ್ ಎಂದರೆ ಕೇವಲ ಅಲಂಕಾರಿಕ, ಫ್ಯಾಷನ್ ವಸ್ತುಗಳ ಖರೀದಿಗೆ ಭಾರೀ ಹೆಸರು. ಆದರೆ ರಂಜಾನ್ ಮಾಸದಲ್ಲಿ ಸಂಜೆಯ ಇಫ್ತಾರ್ ಪ್ರಾರ್ಥನೆ ಬಳಿಕ ಹಬ್ಬಕ್ಕಾಗಿ ಹೊಸ ಬಟ್ಟೆಗಳು, ವಸ್ತುಗಳನ್ನು ಖರೀದಿಗೆ ಬರುವವರು ನಾನಾ ರೀತಿಯ ಆಹಾರ ಪದಾರ್ಥಗಳನ್ನು ಸವಿದರು.

ಸಾಡೇ ರಸ್ತೆ ಆಸುಪಾಸಿನ ಹೋಟೆಲ್‌ಗಳು, ಬಿಸಿ ಬಾದಾಮಿ ಹಾಲಿನ ಗಾಡಿಗಳು, ಲಸ್ಸಿ ಅಂಗಡಿಗಳು, ಜ್ಯೂಸ್ ಸೆಂಟರ್, ಕತ್ತರಿಸಿದ ಹಣ್ಣುಗಳ ಮಾರಾಟಗಾರರು, ಸಸ್ಯಾಹಾರ–ಮಾಂಸಾಹಾರದ ಚಾಟ್ಸ್ ಅಂಗಡಿಗಳು ಜನರನ್ನು ಆಕರ್ಷಿಸುತ್ತಿವೆ. ಪಾಶ್ಚಿಮಾತ್ಯರ ಪ್ರಸಿದ್ಧ ಸಿಹಿ ತಿನಿಸು ಖುನೇಫಾ, ಫತಾಯರ್ (ಅರಬ್ ಶೈಲಿಯ ಫೇಸ್ಟ್ರಿ), ಹಲೀಮ್, ಶೀರ್ ಖುರ್ಮಾ, ಬಿರಿಯಾನಿ, ಮಾವಾ ಜಿಲೇಬಿ, ಫಿರ್ನಿ, ಶಾಹಿ ತುಕ್ಡಾ, ಬಗೆಬಗೆಯ ಸಮೋಸಾ (ಸಸ್ಯಹಾರ, ಮಾಂಸಾಹಾರ), ಕಟ್ಲೆಟ್(ಸಿಹಿ ಮತ್ತು ಖಾರ), ಡ್ರೈಫ್ರೂಟ್ಸ್‌ನ ವಿವಿಧ ಬಗೆಯ ಜ್ಯೂಸ್‌ಗಳು, ಚಿಕನ್ ಶವರ್ಮ, ಚಿಕನ್ ರೋಲ್, ಎಗ್ ರೋಲ್, ವೆಜ್ ರೋಲ್, ಫಿಶ್, ಬ್ರೆಡ್ ಹಲ್ವಾ ಖಾದ್ಯಗಳನ್ನು ಸವಿಯುವುದು ಸಾಮಾನ್ಯವಾಗಿದೆ.

> ಪ್ರತಿ ವರ್ಷದಂತೆ ಈ ವರ್ಷವೂ ಹಬ್ಬದ ಖರೀದಿಗಾಗಿ ಇಲ್ಲಿಗೆ ಬಂದಿದ್ದೇನೆ. ಬಹಳ ಕಡಿಮೆ ಬೆಲೆಗೆ ಗೃಹೋಪಯೋಗಿ ವಸ್ತುಗಳು ದೊರೆಯುತ್ತವೆ. ದೇಶ–ವಿದೇಶಗಳ ಸುಗಂಧ ದ್ರವ್ಯಗಳು, ಖಾದ್ಯಗಳನ್ನು ಸವಿಯಲು ಸ್ನೇಹಿತರೊಡಗೂಡಿ ಹಬ್ಬದ ವೇಳೆ ಬರುತ್ತೇವೆ. ಚಾಮರಾಜನಗರ ಭಾಗದ ಜನರು ಈ ಮಾಸದಲ್ಲಿ ಇಲ್ಲಿಗೆ ಹೆಚ್ಚಾಗಿ ಭೇಟಿ ಕೊಡುವುದುಂಟು.
> -ಖಾತಿಫ್ ಷರೀಫ್



ಬೇಸಿಗೆ ಧಗೆಯ ಹಿನ್ನೆಲೆಯಲ್ಲಿ ಕಾಜೂ, ಗುಲ್ಕನ್, ಪಿಸ್ತಾ, ವೆನಿಲ್ಲಾ, ರಸ್ಮಲಾಯ್, ಫಲೂದಾ, ಕಲ್ಲಂಗಡಿ ಶರಬತ್ ಹೀಗೆ ನಾನಾ ತಂಪು ಪಾನೀಯಗಳತ್ತ ಹಲವರು ಆಕರ್ಷಿತರಾಗುತ್ತಿದ್ದಾರೆ. ಕಬಾಬ್ ಚಿಕನ್ ಲಾಲಿಪಾಪ್ ಹೈದರಾಬಾದಿ ಹಲೀಂ ಶವರ್ಮಾ ಕಟ್ಲೆಟ್, ಖೀಮಾ ಮೋಮೊಸ್, ಚಿಕನ್ ರೋಲ್ಸ್ ಖಾದ್ಯಗಳು ಭರ್ಜರಿ ವ್ಯಾಪಾರ ಕಾಣುತ್ತಿವೆ.

ಯಾವೆಲ್ಲಾ ಟೋಪಿಗಳು ಲಭ್ಯವಿದೆ: ಬರ್ಕತಿ, ಅಫ್ಘಾನಿ, ತುರ್ಕಿ, ಸ್ಟೋನ್ ಟೋಪಿ, ಇರ್ತುಗುಲ, ಹೈದರಾಬಾದಿ, ಕಾಶ್ಮೀರಿ ಟೋಪಿ, ಅರ್ಜೀ ಕೆ ಖ್ವಾಜ ಗರಿಬುನ್ ನವಾಜ್ ಹಾಗೂ ಹೈದರಾಬಾದ್ ನವಾಬಿ ಟೋಪಿ, ಅದ್ವಾನಿ, ನವಾಬ್ ಟೋಪಿ, ಫರ್ಕಿ ಟೋಪಿ, ರುಮಾಲಿ ಟೋಪಿಗಳ ನಡುವೆ ಪಾಕಿಸ್ತಾನದ ಸಿಂಧಿ ಟೋಪಿಯೂ ಖರೀದಿಗೆ ಲಭ್ಯವಿದೆ. ಟೋಪಿಗಳು ಕನಿಷ್ಠ 50 ರೂ. ನಿಂದ 500 ರೂ. ವರೆಗೆ ಲಭ್ಯವಿದ್ದು, ಮಾರಾಟದಲ್ಲಿ ಹೆಚ್ಚಿನ ಗಮನ ಸೆಳೆಯುತ್ತಿವೆ.

ವಿದೇಶಿ ಸುಗಂಧ ದ್ರವ್ಯ ಬಲು ದುಬಾರಿ: ಮುಸ್ಲಿಂ ಸಮುದಾಯದ ಬಲು ಪ್ರಿಯ ವಸ್ತುಗಳಲ್ಲಿ ಒಂದಾದ ಸುಗಂಧ ದ್ರವ್ಯ, ಹಬ್ಬದ ಮಾರಾಟವನ್ನು ಮತ್ತಷ್ಟು ಹೆಚ್ಚಿಸಿವೆ. ಅರೇಬಿಯನ್ ವೂದ್, ರಾಶಿಕಾ, ಮಾರ್ವಾ, ಬ್ಲ್ಯಾಕ್ ವೂದ್, ಕೂಲ್ ವಾಟರ್, ಐಸ್ ಬರ್ಗ್, ಅಲೀಮಾ ಸುಗಂಧ ದ್ರವ್ಯ ಹೆಚ್ಚು ಗಮನ ಸೆಳೆದರೆ, 'ಜನ್ನತ್ ಉಲ್ ಫಿರ್ದೋಸ್' ಹೆಸರಿನ ಅರೇಬಿಕ್ ಸುಗಂಧ ದ್ರವ್ಯಕ್ಕೆ ಹೆಚ್ಚಿನ ಬೇಡಿಕೆಯಿದೆ. 10 ಮಿ.ಲೀಗೆ 100 ರೂ. ನಿಂದ 2 ಸಾವಿರ ವರೆಗಿನ ಸುಗಂಧ ದ್ರವ್ಯಗಳು ಲಭ್ಯವಿದೆ.

ಕಡಿಮೆ ಬೆಲೆಗೆ ಬಟ್ಟೆಗಳು: ಮಹಿಳೆಯರ, ಪುರುಷರ ಬಟ್ಟೆಗಳು ಬಹಳ ಕಡಿಮೆ ಬೆಲೆಗೆ ಕೊಂಡುಕೊಳ್ಳಬಹುದಾಗಿದೆ. ಸೀರೆಗಳು 300 ರೂ., ಪುರುಷರ ಬಟ್ಟೆಗಳು 150 ರೂ., ಜೀನ್ಸ್ ಪ್ಯಾಂಟ್‌ಗಳು 350 ರೂ.ಗಳಿಗೆ ಸಿಗಲಿವೆ. ಇದರೊಂದಿಗೆ ಮಹಿಳೆಯರ ಅಲಂಕಾರಿಕ ಆಭರಣಗಳು, ಮಕ್ಕಳ ಆಟಿಕೆಗಳು, ಇತರೆ ವಸ್ತುಗಳು ಬಹಳ ಕಡಿಮೆ ಬೆಲೆಗೆ ಸಿಗುತ್ತಿವೆ.

ಟಿ20 ವಿಶ್ವಕಪ್ ಗೆದ್ದ ಟೀಂ ಇಂಡಿಯಾಗೆ 131 ಕೋಟಿ ಬಹುಮಾನ

ಮೈಸೂರು, ಮಾ.10(ವಿವಿಹೆಚ್)– 2026ರ ಟಿ20 ವಿಶ್ವಕಪ್‌ನಲ್ಲಿ ಗೆದ್ದ ಟೀಮ್ ಇಂಡಿಯಾಗೆ ಬಿಸಿಸಿಐ ಬರೋಬ್ಬರಿ 131 ಕೋಟಿ ರೂಪಾಯಿ ಬಹುಮಾನವನ್ನು ಘೋಷಿಸಿದೆ.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) 2026ರ ಐಸಿಸಿ ಪುರುಷರ ಟಿ20 ವಿಶ್ವಕಪ್‌ನಲ್ಲಿ ಐತಿಹಾಸಿಕ ಜಯ ಸಾಧಿಸಿದ ಭಾರತೀಯ ಪುರುಷರ ಕ್ರಿಕೆಟ್ ತಂಡಕ್ಕೆ 131 ಕೋಟಿ ಭಾರೀ ನಗದು ಬಹುಮಾನವನ್ನು ಘೋಷಿಸಿದೆ. ಫೈನಲ್ ಪಂದ್ಯದಲ್ಲಿ ಭಾರತ ತಂಡ ನ್ಯೂಜಿಲೆಂಡ್ ತಂಡವನ್ನು 96 ರನ್‌ಗಳಿಂದ ಸೋಲಿಸಿದ ತಕ್ಷಣ ಈ ಘೋಷಣೆ ಮಾಡಲಾಗಿದೆ.

ಕ್ರಿಕೆಟ್ ತಂಡಕ್ಕಾಗಿ ಮಂಡಳಿ ಘೋಷಿಸಿದ ಅತಿದೊಡ್ಡ ಹಣಕಾಸು ಬಹುಮಾನ ಇದಾಗಿದ್ದು, ಆಟಗಾರರು, ಕೋಚಿಂಗ್ ಸಿಬ್ಬಂದಿ, ಆಯ್ಕೆ ಸಮಿತಿ ಸದಸ್ಯರು ಹಾಗೂ ಚಾಂಪಿಯನ್ ಅಭಿಯಾನಕ್ಕೆ ಕೊಡುಗೆ ನೀಡಿದ ಸಹಾಯಕ ಸಿಬ್ಬಂದಿಗೂ ಹಂಚಲಾಗುತ್ತದೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತ ತಂಡ ಮೊದಲು ಬ್ಯಾಟಿಂಗ್ ಮಾಡಿ 5 ವಿಕೆಟ್ ನಷ್ಟಕ್ಕೆ ಭಾರೀ 255 ರನ್ ಗಳಿಸಿತು. ಬಳಿಕ ನ್ಯೂಜಿಲೆಂಡ್ ತಂಡವನ್ನು 159 ರನ್‌ಗಳಿಗೆ ನಿಯಂತ್ರಿಸಿ 96 ರನ್‌ಗಳ ಭರ್ಜರಿ ಜಯ ಸಾಧಿಸಿತು. ಈ ಜಯದ ಮೂಲಕ ಭಾರತ ತನ್ನ ಹಿಂದಿನ ಟಿ20 ಕಿರೀಟವನ್ನು ಯಶಸ್ವಿಯಾಗಿ ಕಾಪಾಡಿಕೊಂಡಿದ್ದು, ಟೂರ್ನಿಯನ್ನು ಮೂರು ಬಾರಿ ಗೆದ್ದ ಮೊದಲ ತಂಡವಾಗಿ ಇತಿಹಾಸ ನಿರ್ಮಿಸಿದೆ. ಇದು ಟಿ20 ಕ್ರಿಕೆಟ್‌ನಲ್ಲಿ ಭಾರತದ ಪ್ರಾಬಲ್ಯವನ್ನು ಮತ್ತಷ್ಟು ಬಲಪಡಿಸಿದೆ.

ಟೂರ್ನಿಯ 9 ಪಂದ್ಯಗಳಲ್ಲೂ ನೀಡಿದ ತಂಡದ ಅದ್ಭುತ ಪ್ರದರ್ಶನವನ್ನು ಬಿಸಿಸಿಐ ಅಧಿಕಾರಿಗಳು ಶ್ಲಾಘಿಸಿದ್ದಾರೆ.

2024ರ ಟಿ20 ವಿಶ್ವಕಪ್ ಜಯದ ನಂತರ ಘೋಷಿಸಿದ ಬಹುಮಾನಕ್ಕಿಂತ ಅಧಿಕ 131 ಕೋಟಿ ನಗದು ಬಹುಮಾನವನ್ನು ಈ ಬಾರಿ ಘೋಷಿಸಲಾಗಿದೆ. ತಂಡದ ಆಟಗಾರರು ಮತ್ತು ಹಿನ್ನಲೆಯಲ್ಲಿ ಕೆಲಸ ಮಾಡಿದ ಸಿಬ್ಬಂದಿಯ ಒಟ್ಟಾರೆ ಪ್ರಯತ್ನವನ್ನು ಗೌರವಿಸುವ ಉದ್ದೇಶದಿಂದ ಈ ಬಹುಮಾನ ನೀಡಲಾಗಿದೆ ಎಂದು ಮಂಡಳಿ ತಿಳಿಸಿದೆ.

ಕಳೆದ ಎರಡು ವರ್ಷಗಳಲ್ಲಿ ಭಾರತ ತಂಡವು ಐಸಿಸಿ ಟೂರ್ನಿಗಳಲ್ಲಿ ತೋರಿದ ಅಸಾಧಾರಣ ಯಶಸ್ಸಿಗೆ ಬಿಸಿಸಿಐ ಭಾರೀ ಬಹುಮಾನ ನೀಡಿದೆ. 2026ರ ಟಿ20 ವಿಶ್ವಕಪ್ ಗೆಲುವಿಗೆ 131 ಕೋಟಿ, ಮಹಿಳಾ ಏಕದಿನ ವಿಶ್ವಕಪ್‌ಗೆ 51 ಕೋಟಿ, ಚಾಂಪಿಯನ್ಸ್ ಟ್ರೋಫಿಗೆ 58 ಕೋಟಿ ಹಾಗೂ 2024ರ ಟಿ20 ವಿಶ್ವಕಪ್‌ಗೆ 125 ಕೋಟಿ ಸೇರಿ ಒಟ್ಟು 365 ಕೋಟಿ ನೀಡಿ ಗೌರವಿಸಿದೆ.

ಇದೇ ವರ್ಷ ಭಾರತ ಮಹಿಳಾ ತಂಡವು ಈ ವರ್ಷ ಟಿ20 ವಿಶ್ವಕಪ್ ಆಡಬೇಕಾಗಿದೆ. ಪುರುಷರ ತಂಡ 2027ರಲ್ಲಿ ಏಕದಿನ ವಿಶ್ವಕಪ್ ಆಡಲಿದೆ. ಹೀಗಾಗಿ ಟೀಂ ಇಂಡಿಯಾ ಹೇಗೆ ಪ್ರದರ್ಶನ ನೀಡುತ್ತದೆ ಮತ್ತು ಬಿಸಿಸಿಐ ಎಷ್ಟು ಬಹುಮಾನ ನೀಡುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ

ಕ್ರೀಡಾಶಾಲೆಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮಾ.10– ಮೈಸೂರು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಜಿಲ್ಲಾ ಕ್ರೀಡಾಶಾಲೆಯ 5ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಆಯ್ಕೆ ಬಯಸುವ ವಿದ್ಯಾರ್ಥಿಗಳು ಅಥ್ಲೆಟಿಕ್ಸ್, ಜಿಮ್ನಾಸ್ಟಿಕ್ಸ್ ಕ್ರೀಡಾಪಟುಗಳಾಗಿರಬೇಕು. (ದಿನಾಂಕ: 01–06–2016ರ ನಂತರ ಜನಿಸಿರಬೇಕು) ಜಿಲ್ಲಾ ಮಟ್ಟದ ಆಯ್ಕೆ ಪ್ರಕ್ರಿಯೆ ಮಾ.13 ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿದೆ.

ಪ್ರಥಮ ಹಂತದ ಆಯ್ಕೆ ಪ್ರಕ್ರಿಯೆ ಮಾ.10 ರಂದು ಬೆಳಗ್ಗೆ 10 ಗಂಟೆಯಿಂದ 1 ಗಂಟೆಯವರೆಗೆ ಹುಣಸೂರು ತಾಲೂಕಿನ ಕ್ರೀಡಾಂಗಣದಲ್ಲಿ, ಪಿರಿಯಾಪಟ್ಟಣ ತಾಲೂಕು ಕ್ರೀಡಾಂಗಣದಲ್ಲಿ, ತಿ.ನರಸೀಪುರ ತಾಲೂಕಿನ ವಿದ್ಯೋದಯ ಪದವಿ ಪೂರ್ವ ಕಾಲೇಜಿನಲ್ಲಿ, ಮಾರ್ಚ್ 11 ರಂದು ಬೆಳಗ್ಗೆ 10 ಗಂಟೆಯಿಂದ ಕೆ ಆರ್ ನಗರ ತಾಲೂಕು ಕ್ರೀಡಾಂಗಣದಲ್ಲಿ, ನಂಜನಗೂಡು ತಾಲೂಕು ಕ್ರೀಡಾಂಗಣದಲ್ಲಿ, ಎಚ್.ಡಿ ಕೋಟೆ ತಾಲೂಕು ಕ್ರೀಡಾಂಗಣದಲ್ಲಿ, ಮಧ್ಯಾಹ್ನ 2 ರಿಂದ ಸಂಜೆ 5 ಗಂಟೆಯವರೆಗೆ ಸರಗೂರು ಬಾಲ್ ಫೀಲ್ಡ್ ಮೈದಾನದಲ್ಲಿ, ಮಾ.12 ರಂದು ಬೆಳಗ್ಗೆ 10 ಗಂಟೆಗೆ ಸಾಲಿಗ್ರಾಮದ ಚುಂಚನಕಟ್ಟೆಯ ಬಾಲ ಜಗತ್ ವಿದ್ಯಾ ಸಂಸ್ಥೆ ಮೈದಾನದಲ್ಲಿ ಹಾಗೂ ಮೈಸೂರು ತಾಲೂಕಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821–2564179ನ್ನು ಸಂಪರ್ಕಿಸಬಹುದಾಗಿದೆ.

ರೈಲ್ವೆ ಆರ್‌ಪಿಎಫ್ ಯಶಸ್ವಿ ಕಾರ್ಯಾಚರಣೆ

51 ಮಕ್ಕಳ ರಕ್ಷಣೆ, 44.8 ಲಕ್ಷ ಮೌಲ್ಯದ ವಸ್ತುಗಳು ಮರಳಿ ಪ್ರಯಾಣಿಕರಿಗೆ ಲಭ್ಯ



142 ಮದ್ಯದ ಬಾಟಲಿಗಳನ್ನು ವಶಪಡಿಸಿಕೊಂಡಿರುವ ನೈರುತ್ಯ ರೈಲ್ವೆ ಪೊಲೀಸರು.

ಮೈಸೂರು, ಮಾ.10(ವಿವಿಹೆಚ್)– ನೈರುತ್ಯ ರೈಲ್ವೆಯ ಆರ್‌ಪಿಎಫ್ ತಂಡವು 'ನಾನ್ಹೆ ಫಾರಿಸ್ತೇಹ್' ಕಾರ್ಯಾಚರಣೆ ಅಡಿಯಲ್ಲಿ 12 ಹುಡುಗಿಯರು ಸೇರಿದಂತೆ 51 ಮಕ್ಕಳನ್ನು ರಕ್ಷಿಸಿದೆ.

ಉಪಲಬ್ದ್, ಸಟಾರ್ಕ್ ಮತ್ತು ನಾರ್ಕೊ, ರೈಲ್ವೆ ಆಸ್ತಿ (ಕಾನೂನುಬಾಹಿರ ಸ್ವಾಧೀನ) ಕಾಯ್ದೆ ಅಡಿ ಫೆಬ್ರವರಿ ತಿಂಗಳಲ್ಲಿ ಕಾರ್ಯಾಚರಣೆ ನಡೆಸಿದ ಹೆಚ್ಚುವರಿ ಪ್ರಧಾನ ವ್ಯವಸ್ಥಾಪಕ ಪಿ.ಅನಂತ್ ಮತ್ತು ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ರೈಲ್ವೆ ರಕ್ಷಣಾ ಪಡೆ (ಆರ್‌ಪಿಎಫ್) ಪ್ರಯಾಣಿಕರು ಕಳೆದುಕೊಂಡಿದ್ದ 44.8 ಲಕ್ಷ ಮೌಲ್ಯ ವಸ್ತುಗಳನ್ನು ಹಿಂದಿರುಗಿಸಿದೆ. ಹಾಗೆ 2.71 ಲಕ್ಷ ಮೌಲ್ಯದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡು, ಮೂವರನ್ನು ಬಂಧಿಸಿದೆ. "ಉಪ್ಲಬ್ಧ್" ಕಾರ್ಯಾಚರಣೆಯ ಅಡಿಯಲ್ಲಿ ರೂ. 1.75 ಲಕ್ಷ ಮೌಲ್ಯದ ಟಿಕೆಟ್‌ಗಳನ್ನು ವಶಪಡಿಸಿಕೊಂಡಿದೆ.

'ನಾನ್ಹೆ ಫಾರಿಸ್ತೇಹ್' ಕಾರ್ಯಾಚರಣೆ: 'ನಾನ್ಹೆ ಫಾರಿಸ್ತೇಹ್' ಮಿಷನ್ ಅಡಿಯಲ್ಲಿ, 51 ಮಕ್ಕಳನ್ನು (39 ಹುಡುಗರು, 12 ಹುಡುಗಿಯರು) ಅವರ ಕುಟುಂಬಗಳೊಂದಿಗೆ ಮತ್ತೆ ಒಂದುಗೂಡಿಸುವಲ್ಲಿ ಯಶಸ್ವಿಯಾಗಿದೆ. ಆಪರೇಷನ್ ಡಿಗ್ನಿಟಿ ಕಾರ್ಯಾಚರಣೆ ಅಡಿಯಲ್ಲಿ ಓರ್ವ ವೃದ್ಧೆಯನ್ನು ರಕ್ಷಿಸಿದ್ದಾರೆ.

ಉಪಲಬ್ದ್ ಕಾರ್ಯಾಚರಣೆಯಡಿ, ರೈಲ್ವೆ ಕಾಯ್ದೆಯ ಸೆಕ್ಷನ್ 143 ರ ಅಡಿಯಲ್ಲಿ 23 ಪ್ರಕರಣಗಳು ದಾಖಲಾಗಿದ್ದು, ಎಲ್ಲಾ 23 ಟೌಟ್(ಅಧಿಕ ಹಣಕ್ಕೆ ಟಿಕೆಟ್ ಮಾರಾಟ ಮಾಡುವುದು) ಗಳನ್ನು ಬಂಧಿಸಲಾಗಿದೆ. ಈ ವೇಳೆ 77,804 ಮೌಲ್ಯದ 48 ಲೈವ್ ಟಿಕೆಟ್‌ಗಳು ಮತ್ತು 97,496 ಮೌಲ್ಯದ 65 ಬಳಸಿದ ಟಿಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಸಟಾರ್ಕ್ ಮತ್ತು ನಾರ್ಕೊ ಕಾರ್ಯಾಚರಣೆಯಲ್ಲಿ ಆಪರೇಷನ್ ಸಟಾರ್ಕ್ ಅಡಿಯಲ್ಲಿ, ಆರ್‌ಪಿಎಫ್ 7 ಮದ್ಯದ ಪ್ರಕರಣಗಳಲ್ಲಿ 63,346 ಮೌಲ್ಯದ 142 ಬಾಟಲಿಗಳನ್ನು ವಶಪಡಿಸಿಕೊಂಡಿದ್ದಾರೆ. ಆಪರೇಷನ್ ನಾರ್ಕೊ ಅಡಿಯಲ್ಲಿ 7 ಪ್ರಕರಣಗಳು ದಾಖಲಾಗಿದ್ದು, 2.71 ಲಕ್ಷ ಮೌಲ್ಯದ 57 ಕೆಜಿ ಗಾಂಜಾವನ್ನು ವಶಪಡಿಸಿಕೊಂಡು, ಮೂವರನ್ನು ಬಂಧಿಸಿದ್ದಾರೆ.

44.8 ಲಕ್ಷ ಮೌಲ್ಯದ ಲ್ಯಾಪ್‌ಟಾಪ್‌ಗಳು, ಮೊಬೈಲ್ ಫೋನ್‌ಗಳು, ಆಭರಣಗಳು ಮತ್ತು ಇತರ ವೈಯಕ್ತಿಕ ವಸ್ತುಗಳಂತಹ ಪ್ರಯಾಣಿಕರು ಕಳೆದುಹೋದ ಅಥವಾ ಬಿಟ್ಟುಹೋದ ವಸ್ತುಗಳನ್ನು ವಶಪಡಿಸಿಕೊಂಡು ಮಾಲೀಕರಿಗೆ ಹಿಂತಿರುಗಿಸಿದ್ದಾರೆ.

ರೈಲ್ವೆ ಆಸ್ತಿ (ಕಾನೂನುಬಾಹಿರ ಸ್ವಾಧೀನ) ಕಾಯ್ದೆ 1966 ಅಡಿಯಲ್ಲಿ 3 ಪ್ರಕರಣಗಳನ್ನು ದಾಖಲಿಸಿ 7 ಅಪರಾಧಿಗಳನ್ನು ಬಂಧಿಸಿ, 38,458 ಮೌಲ್ಯದ ಕದ್ದ ರೈಲ್ವೆ ಆಸ್ತಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹಿರಿಯ ಕಾಂಗ್ರೆಸ್ಸಿಗ ಎಂ.ಸಣ್ಣಯ್ಯ ನಾಡನಹಳ್ಳಿ ಜನ್ಮ ಶತಮಾನೋತ್ಸವ ಸ್ಮರಣೆ

ಗಣ್ಯರಿಂದ ಗುಣಗಾನ



'ದಿವಂಗತ ಎಂ.ಸಣ್ಣಯ್ಯ ನಾಡನಹಳ್ಳಿಯವರ 100ನೇ ವರ್ಷದ ಜನ್ಮ ಶತಮಾನೋತ್ಸವ ಸ್ಮರಣೆ' ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಎಸ್.ಚಂದ್ರಶೇಖರ್ ಸೇರಿದಂತೆ ಇತರೆ ಗಣ್ಯರು ಮಂಗಳವಾರ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಮಾ.10(ಎಸ್‌ಪಿಎನ್)–ಮೈಸೂರು ವಿಶ್ವೇಶ್ವರನಗರ ಇಂಡಸ್ಟ್ರಿಯಲ್ ಸಬರ್ಬ್‌ನಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಸಭಾಂಗಣದಲ್ಲಿ 'ದಿವಂಗತ ಎಂ.ಸಣ್ಣಯ್ಯ ನಾಡನಹಳ್ಳಿಯವರ 100ನೇ ವರ್ಷದ ಜನ್ಮ ಶತಮಾನೋತ್ಸವ ಸ್ಮರಣೆ' ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸೇರಿದಂತೆ ಇತರೆ ಗಣ್ಯರು ಮಂಗಳವಾರ ಉದ್ಘಾಟಿಸಿದರು.

ಬಳಿಕ ವಿಶ್ವನಾಥ್ ಮಾತನಾಡಿ, ಇಂದಿನ ಸರ್ಕಾರ ಅಬಕಾರಿ ಇಲಾಖೆಯಲ್ಲಿ 45 ಸಾವಿರ ಕೋಟಿ ಆದಾಯ ಗಳಿಸುವ ಗುರಿ ಹೊಂದಿದೆ. ಇದರ ಕುರಿತು ವಿಧಾನಪರಿಷತ್‌ನಲ್ಲಿ ಚರ್ಚೆಗೆ ಬಂದಾಗ ಇದನ್ನು ನಾನು ವಿರೋಧಿಸಿದೆ. ಹೆಚ್ಚಿನ ಆದಾಯಕ್ಕಾಗಿ ರಾಜ್ಯ ಸರ್ಕಾರವೇ ಯುವಕರನ್ನು ಕುಡುಕರನ್ನಾಗಿ ಮಾಡುತ್ತಿರುವುದು ಬೇಸರ ತರಿಸಿದೆ ಎಂದರು.

ಸರ್ಕಾರವೇ ಮದ್ಯದ ಚಟ ಕಲಿಸುತ್ತಿದೆ: ನಾವೆಲ್ಲಾ ಯುವಕರಾಗಿದ್ದಾಗ ಸ್ನೇಹಿತರೆಲ್ಲಾ ಸೇರಿ ಒಂದೊಂದು ರೂಪಾಯಿ ಒಗ್ಗೂಡಿಸಿ ಕದ್ದುಮುಚ್ಚಿ ಬಿಯರ್ ತಂದು ಕುಡಿಯುತ್ತಿದ್ದೆವು. ಪ್ರಸ್ತುತ ಒಂದು ಬಿಯರ್ ಬಾಟಲ್ ದರ ಇನ್ನೂರೈವತ್ತು ರೂಪಾಯಿಗಳಾಗಿದೆ. ಈಗ ರಾಜ್ಯ ಸರ್ಕಾರವೇ ಯುವಕರನ್ನು ಮದ್ಯದ ಚಟಕ್ಕೆ ತಳ್ಳುತ್ತಿದೆ ಎಂದು ಕಿಡಿಕಾರಿದರು.

ಶ್ರೀಮತಿ ಯಶೋಧರ ದಾಸಪ್ಪನವರು ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರ ಸಂಪುಟದಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಒಮ್ಮೆ ಅಬಕಾರಿ ಇಲಾಖೆಯ ಆದಾಯ ಹೆಚ್ಚಿಸಲು ಮದ್ಯದ ಮೇಲಿನ ತೆರಿಗೆಯನ್ನು ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪನವರು ಹೆಚ್ಚಿಸಿದ್ದರು. ಇದನ್ನು ವಿರೋಧಿಸಿ, ಶ್ರೀಮತಿ ಯಶೋಧರ ದಾಸಪ್ಪನವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರು. ಕೂಡಲೇ ನಿಜಲಿಂಗಪ್ಪನವರು ಮದ್ಯಪಾನ ನಿಷೇಧಿಸಿದ್ದ ಪ್ರಸಂಗವನ್ನು ನೆನೆದರು.

ರಾಚಯ್ಯ, ಬಸವಲಿಂಗಪ್ಪರಂತಹವರು ಬರಲಿಲ್ಲ: ಈ ಹಿಂದಿದ್ದ ಎನ್.ರಾಚಯ್ಯ, ಬಸವಲಿಂಗಪ್ಪನವರಂತಹ ದಲಿತ ಸಚಿವರು ಇನ್ನೊಬ್ಬರು ಬಂದಿಲ್ಲ. ಅವರು, ದಲಿತರ ಉದ್ಧಾರಕ್ಕಾಗಿ ಬಲಿಷ್ಠ ಪಿಟಿಸಿಎಲ್ ಕಾಯ್ದೆಯನ್ನು ಜಾರಿಗೆ ತಂದಿದ್ದರು. ನಂತರ ಬಂದ ಸರ್ಕಾರಗಳು ಜನರ ಹಿತ ಕಾಪಾಡುವಲ್ಲಿ ಸಂಪೂರ್ಣ ವಿಫಲವಾಗಿವೆ. ಐದು ಕೆಜಿ ಅಕ್ಕಿಕೊಟ್ಟೆ ಎನ್ನುತ್ತಾರೆ. ಮತ್ತೊಮ್ಮೆ ಅಬಕಾರಿ ಇಲಾಖೆಯಲ್ಲಿ ತೆರಿಗೆ ಸಂಗ್ರಹ ಹೆಚ್ಚಳ ಮಾಡಿದ್ದೇವೆ ಎಂದು ಸಬೂಬು ಹೇಳುತ್ತಿದ್ದಾರೆ ಎಂದರು.

ನಾವೆಲ್ಲಾ ದೇವರಾಜ ಅರಸು, ಇಂದಿರಾಗಾಂಧಿ ಹೆಸರಿನಲ್ಲಿ ಗೆದ್ದವರು. ಒಮ್ಮೆ ರಾಚಯ್ಯನವರು, ಬಡವರಿಗೆ ಏನಾದರೂ ತೊಂದರೆಯಾದರೆ ನನಗೆ ಕರೆಮಾಡಿ, ನಿಮ್ಮ ಮನೆದೇವರಿಗಿಂತ ಮುಂಚೆ ನಿಮ್ಮ ಮನೆ ಬಾಗಿಲಿಗೆ ಬರುತ್ತೇನೆ ಎಂದಿದ್ದರು. ಅವರ ಹೇಳಿಕೆ ಯಥಾವತ್ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಆಗ ಎಂ.ಸಣ್ಣಯ್ಯ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ನಿಯುಕ್ತಿಗೊಂಡಿದ್ದರು ಎಂದು ನೆನಪು ಮಾಡಿಕೊಂಡರು.

> ಈಗಿನ ಚುನಾವಣೆಗಳಲ್ಲಿ ಸ್ಪರ್ಧಿಸಬೇಕೋ, ಬೇಡವೋ ಎಂಬ ಜಿಜ್ಞಾಸೆ ನನಗೆ ಶುರುವಾಗಿದೆ. ಹಾಗೊಮ್ಮೆ ಚುನಾವಣೆಗೆ ಸ್ಪರ್ಧಿಸಬೇಕೆಂದರೆ 15–20 ಕೋಟಿ ರೂ. ಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಎಂ.ಸಣ್ಣಯ್ಯನವರಂತಹ ಪ್ರಾಮಾಣಿಕ ಮುಖಂಡರು ಪಕ್ಷಕ್ಕೆ ಎಷ್ಟು ಮುಖ್ಯ ಎಂಬುದು ಮನವರಿಕೆಯಾಗುತ್ತಿದೆ.
> – ಎಂ.ಕೆ.ಸೋಮಶೇಖರ್, ಮಾಜಿ ಶಾಸಕ

ದಲಿತರ ಉದ್ಧಾರಕರು: ದಲಿತರ ಉದ್ಧಾರಕ್ಕಾಗಿ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು, ಉಳುವವನೇ ಭೂಮಿ ಒಡೆಯ ಕಾಯ್ದೆ ಜಾರಿಗೆ ತಂದಿದ್ದರು. ಕೆ.ಆರ್.ನಗರದಲ್ಲಿ ಈ ಕಾಯ್ದೆಯಡಿ 4 ಎಕರೆ ಭೂಮಿ ದಕ್ಕಿಸಿಕೊಂಡ ದಲಿತ ಕುಟುಂಬಗಳು ಅನುಭವಿಸುವ ಹಕ್ಕು ಹೊಂದಿರಲಿಲ್ಲ. ಈ ವಿಷಯವನ್ನು ರಾಚಯ್ಯನವರಿಗೆ ತಿಳಿಸಿದಾಗ ಅಂದಿನ ಮೈಸೂರು, ಡಿಸಿ, ಎಸಿ ಹಾಗೂ ತಹಸೀಲ್ದಾರ್ ಅವರನ್ನು ನನ್ನ ಕಚೇರಿಗೆ ಕಳುಹಿಸಿ, ಸಮಸ್ಯೆ ಬಗೆಹರಿಸಿದ್ದರು ಎಂದು ನೆನೆದರು.

> ಇಂದಿನ ಕಾಂಗ್ರೆಸ್‌ನಲ್ಲಿ ನೈಜ ಕಾಂಗ್ರೆಸ್ ಲೀಡರ್ ಯಾರಿದ್ದಾರೆ. ಎಲ್ಲರೂ ಬೇರೆಬೇರೆ ಪಕ್ಷಕ್ಕೆ ವಲಸೆ ಹೋಗಿದ್ದಾರೆ. ಈಗಿರುವ ಕಾಂಗ್ರೆಸ್‌ನಲ್ಲಿ ಬೇರೆ ಪಕ್ಷದ ನಾಯಕರೇ ಹೆಚ್ಚಿದ್ದಾರೆ. ಇಂತಹ ಸಂದರ್ಭದಲ್ಲಿ ಎಂ.ಸಣ್ಣಯ್ಯನವರಿಗೆ ಅಧಿಕಾರ ಇರಲಿ, ಬಿಡಲಿ ಜಿಲ್ಲಾ ಗ್ರಾಮಾಂತರ ಸಮಿತಿ ಅಧ್ಯಕ್ಷರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ.
> – ಎಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯರು

ಎಂ.ಸಣ್ಣಯ್ಯ ನಾಡನಹಳ್ಳಿ ಅವರು, ಮೈಸೂರು ತಾಲೂಕು ಅಭಿವೃದ್ಧಿ ಮಂಡಳಿ ಸದಸ್ಯರಾಗಿ, ಮೈಸೂರು ಜಿಲ್ಲಾ ಸಹಕಾರ ಬ್ಯಾಂಕ್‌ನ ನಿರ್ದೇಶಕರಾಗಿ, ಮೈಸೂರು ಜಿಲ್ಲಾ ಸಹಕಾರಿ ಬ್ಯಾಂಕ್‌ನ ಪ್ರತಿನಿಧಿಯಾಗಿ ನೇಮಕಗೊಂಡಿದ್ದರು. ಅಲ್ಲದೆ, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವುದು ಸಂತೋಷದ ವಿಷಯ. ಇಂದಿರಾಗಾಂಧಿ, ದೇವರಾಜು ಅರಸುರಂತಹ ಧೀಮಂತ ನಾಯಕರು ರಾಜಕಾರಣದಲ್ಲಿ ಅವಶ್ಯಕತೆ ಇದೆ. ಇಂದಿರಾಗಾಂಧಿ ಬಡವರು, ದಲಿತರ ಏಳಿಗೆಗಾಗಿ ಪ್ರತ್ಯೇಕ ಕಾನೂನು ರಚಿಸಿದ್ದರು.

ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಉಮಾಶಂಕರ್, ಎಸ್.ಚಂದ್ರಶೇಖರ್, ಅಪೆಕ್ಸ್ ಬ್ಯಾಂಕ್ ಮಾಜಿ ಅಧ್ಯಕ್ಷ ಸಿದ್ದಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಅಭಿವೃದ್ಧಿ ಮೂಲಕ ದಿ.ಆರ್.ಧ್ರುವನಾರಾಯಣ್ ಚಿರಸ್ಥಾಯಿ

ನಂಜನಗೂಡು, ಮಾ.10– ಒಬ್ಬ ರಾಜಕಾರಣಿ ಹೇಗೆ ಕ್ಷೇತ್ರವನ್ನು ಅಭಿವೃದ್ಧಿಪಡಿಸಿ ಜನರ ಮನಸ್ಸಿನಲ್ಲಿ ಅಜರಾಮರವಾಗಿ ಉಳಿಯಬಹುದು ಎಂಬುದಕ್ಕೆ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಸ್ಪಷ್ಟ ನಿದರ್ಶನ.

ದಿ.ಆರ್.ಧ್ರುವನಾರಾಯಣ್ ಅವರು ನಿಧನರಾಗಿ 3 ವರ್ಷ ಕಳೆದರೂ ಮೈಸೂರು–ಚಾಮರಾಜನಗರ ಜನತೆ ಇಂದಿಗೂ ಅವರನ್ನು ಮರೆತಿಲ್ಲ. ಈಗಲೂ ನಿತ್ಯ ಸಂಸದರಾಗಿ ಜನರ ಮನಸ್ಸಿನಲ್ಲಿ ಅವರು ಚಿರಸ್ಥಾಯಿಯಾಗಿ ಉಳಿದಿದ್ದಾರೆ.

ಕೃಷಿ ವಿಷಯದಲ್ಲಿ ಪದವಿ ಪಡೆದು ರಾಜಕಾರಣದಲ್ಲಿ ಬೆಳೆ ತೆಗೆದಿದ್ದ ಧ್ರುವನಾರಾಯಣ್ ಅವರು ಒಬ್ಬ ರಾಜಕಾರಣಿಯಾಗಿ ಕ್ಷೇತ್ರ ಅಭಿವೃದ್ಧಿಪಡಿಸಿ, ಜನರ ಕಷ್ಟಗಳಿಗೆ ಹೇಗೆ ಕಿವಿಯಾಗಬಹುದೆಂದು ಕ್ರಿಯಾಶೀಲವಾಗಿ ಕೆಲಸ ಮಾಡಿ ವಿಪಕ್ಷಗಳ ರಾಜಕಾರಣಿಗಳಿಂದಲೂ ಹೊಗಳಿಸಿಕೊಂಡವರು. 10 ವರ್ಷಗಳ ಕಾಲ ಸಂಸದರಾಗಿ ಅವರು ಮಾಡಿರುವ ಕೆಲಸಗಳು ನಮ್ಮ ಕಣ್ಮುಂದೆ ರಾರಾಜಿಸುತ್ತಿವೆ. ನಂಜನಗೂಡಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಕಾರ್ಮಿಕ ಆಸ್ಪತ್ರೆ, ಹುಲ್ಲಹಳ್ಳಿ ಭಾಗದ 124 ಹಳ್ಳಿಗಳಿಗೆ ಶಾಶ್ವತ ಕುಡಿಯುವ ನೀರಿನ ಪೂರೈಕೆ, ಚಾಮರಾಜನಗರ ಮುಖ್ಯರಸ್ತೆ ಅಭಿವೃದ್ಧಿ, ಮೈಸೂರು–ನಂಜನಗೂಡು ಚತುಷ್ಪಥ ರಸ್ತೆ ನಿರ್ಮಾಣ, ಹುಲ್ಲಹಳ್ಳಿ ಮುಖ್ಯರಸ್ತೆ ಅಭಿವೃದ್ಧಿ, ಆದರ್ಶ, ಕಿತ್ತೂರು ರಾಣಿ ಚೆನ್ನಮ್ಮ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಸೇರಿದಂತೆ ಹೋಬಳಿಗೊಂದು ವಸತಿ ಶಾಲೆಗಳನ್ನು ತೆರೆದು ಬಡವರ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದ ಅಪರೂಪದ ರಾಜಕಾರಣಿ ಆರ್.ಧ್ರುವನಾರಾಯಣ್.



ಸದಾ ನೊಂದವರಿಗೆ ನೆರವಾಗುತ್ತಿದ್ದ ಮಾಜಿ ಸಂಸದ ಆರ್.ಧ್ರುವನಾರಾಯಣ್. (ಫೈಲ್ ಚಿತ್ರ)

2019ರ ಲೋಕಸಭಾ ಚುನಾವಣೆಯಲ್ಲಿ ಸೋತ ನಂತರ ಪಕ್ಷದ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಧ್ರುವನಾರಾಯಣ್ 9 ಜಿಲ್ಲೆಗಳ ಉಸ್ತುವಾರಿ ವಹಿಸಿಕೊಂಡು ಪಕ್ಷವನ್ನು ತಳಮಟ್ಟದಿಂದ ಸದೃಢಗೊಳಿಸಿದರು. ಅದರ ಫಲವಾಗಿ 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿಯಲು ಸಾಧ್ಯವಾಗಿದೆ ಎಂಬುದನ್ನು ತಳ್ಳಿ ಹಾಕುವಂತಿಲ್ಲ. ಧ್ರುವನಾರಾಯಣ್ ಅವರು ತಮ್ಮ ವೈಯಕ್ತಿಕ ಜೀವನ ಲೆಕ್ಕಿಸದೆ ದಿನದ 24 ಗಂಟೆ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದರು. ಆ ಮೂಲಕ ದೇಶದ ನಂ.1 ಸಂಸದರಾಗಿದ್ದ ಅವರು ಪಕ್ಷಾತೀತವಾಗಿ ಅಭಿಮಾನಿಗಳನ್ನು ಹೊಂದುವ ಮೂಲಕ ಅಜಾತಶತ್ರುವಾಗಿದ್ದರು.

2023ರ ಸಾರ್ವತ್ರಿಕ ಚುನಾವಣೆಯಲ್ಲಿ ನಂಜನಗೂಡಿನಿಂದ ಸ್ಪರ್ಧಿಸಲು ಬಯಸಿದ್ದ ಅವರು ಕಾಡಂಚಿನ ಗ್ರಾಮಗಳಲ್ಲಿ ಹೆಚ್ಚಾಗಿದ್ದ ಮಾನವ–ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸುವ ಮತ್ತು ನಂಜನಗೂಡನ್ನು ಮಾದರಿ ಕ್ಷೇತ್ರವನ್ನಾಗಿ ರೂಪಿಸುವ ಕನಸನ್ನು ಕಂಡಿದ್ದರು. ಆದರೆ ವಿಧಿ ಅವರ ಕನಸಿಗೆ ಕೊಡಲಿ ಪೆಟ್ಟು ನೀಡಿ ಅಕಾಲಿಕ ಮರಣಕ್ಕೆ ತುತ್ತಾಗುವಂತೆ ಮಾಡಿತು. ಜನತೆ ಸಾಕಷ್ಟು ರಾಜಕಾರಣಿಗಳನ್ನು ಮರೆತಿದ್ದಾರೆ. ಆದರೆ ದಿ.ಆರ್.ಧ್ರುವನಾರಾಯಣ್ ಅವರನ್ನು ಇಂದಿಗೂ ನೆನೆಸಿಕೊಳ್ಳುವುದು ಅವರ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ.

ತಂದೆ ಹಾದಿಯಲ್ಲಿ ಪುತ್ರ ದರ್ಶನ್

ತಂದೆ ಅಕಾಲಿಕ ಮರಣದಿಂದ ವಕೀಲ ವೃತ್ತಿ ತೊರೆದು ನಂಜನಗೂಡು ಶಾಸಕರಾಗಿ ಆಯ್ಕೆಯಾಗುವ ಮೂಲಕ ರಾಜಕಾರಣಕ್ಕೆ ಆಕಸ್ಮಿಕವಾಗಿ ಬಂದವರು ದರ್ಶನ್ ಧ್ರುವನಾರಾಯಣ್. ತಂದೆಯ ಎಲ್ಲಾ ಗುಣಗಳನ್ನು ಅಳವಡಿಸಿಕೊಂಡು, ತಮ್ಮ ಜೀವನವನ್ನು ಸಾರ್ವಜನಿಕರ ಸೇವೆಗೆ ಮುಡುಪಾಗಿಟ್ಟು ಕ್ಷೇತ್ರದ ಜನತೆಯಲ್ಲಿಯೇ ತಂದೆ ತಾಯಿಯನ್ನು ಕಾಣುತ್ತಿದ್ದಾರೆ. ಅಲ್ಲದೇ 12 ಕೋಟಿ ವೆಚ್ಚದಲ್ಲಿ ಹೆಡಿಯಾಲ ಕಾಡಂಚಿನ ಪ್ರದೇಶದಲ್ಲಿ ರೈಲ್ವೆ ಬ್ಯಾರಿಕೇಡ್ ಮತ್ತು ಮೆಸ್ ಅಳವಡಿಸಿ ಮಾನವ–ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ಒದಗಿಸಿ ತಂದೆ ಕನಸನ್ನು ಈಡೇರಿಸಿದವರು. ಕಳೆದ 3 ವರ್ಷಗಳಿಂದ ಶಾಸಕರಾಗಿ ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಜನರ ಮನಸ್ಸಿನಲ್ಲಿ ಸ್ಥಾನಗಳಿಸುವ ಮೂಲಕ ತಂದೆ ಧ್ರುವನಾರಾಯಣ್ ಅವರ ಹಾದಿಯಲ್ಲೇ ಸಾಗುತ್ತಿದ್ದಾರೆ.

ಶ್ರೀಕನ್ನಂಬಾಡಿ ಅಮ್ಮನವರ ಬ್ರಹ್ಮ ರಥೋತ್ಸವ

ಪಿರಿಯಾಪಟ್ಟಣ: ಇತಿಹಾಸ ಪ್ರಸಿದ್ಧ ಶ್ರೀಕನ್ನಂಬಾಡಿ ಅಮ್ಮನವರ ಬ್ರಹ್ಮ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ಪಟ್ಟಣದಲ್ಲಿ ವಿಜೃಂಭಣೆಯಿಂದ ನಡೆಯಿತು.



ಪಿರಿಯಾಪಟ್ಟಣದಲ್ಲಿ ಶ್ರೀಕನ್ನಂಬಾಡಿ ಅಮ್ಮನವರ ಬ್ರಹ್ಮ ರಥೋತ್ಸವ ನಡೆಯಿತು.

ರಥೋತ್ಸವ ಅಂಗವಾಗಿ ಮುಂಜಾನೆಯಿಂದಲೇ ದೇವಾಲಯದಲ್ಲಿ ದೇವಿಗೆ ಅಭಿಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯಗಳು ನಡೆಯಿತು. ಬಳಿಕ ಅಮ್ಮನವರಿಗೆ ಕಳಸಾರೋಹಣ ನೆರವೇರಿಸಿ, ದೇವಿಗೆ ಬಲಿಪೂಜೆ ನಡೆಸಲಾಯಿತು. ನಂತರ ಕನ್ನಂಬಾಡಿ ಅಮ್ಮನವರನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ದೇವಸ್ಥಾನದ ಸುತ್ತ ಪ್ರದಕ್ಷಿಣೆ ಮಾಡಿ ನಂತರ ಕೊಂಬು ಕಹಳೆ, ಬ್ಯಾಂಡ್‌ಸೆಟ್, ಕೇರಳದ ಚಂಡೆ ವಾದ್ಯ, ಮಂಗಳವಾದ್ಯಗಳ ಸಮೇತ ವಿವಿಧ ಹೂಗಳಿಂದ ಸಿಂಗಾರಗೊಂಡ ರಥದಲ್ಲಿ ದೇವಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಬಳಿಕ ಸಾವಿರಾರು ಭಕ್ತರ ಜೈಕಾರದೊಂದಿಗೆ ಮಧ್ಯಾಹ್ನ 12 ರೊಳಗೆ ಸಲ್ಲುವ ವೃಷಭ ಲಗ್ನದಲ್ಲಿ ರಥೋತ್ಸವ ಜರುಗಿತು. ಈ ವೇಳೆ ಭಕ್ತರು ದೇವಸ್ಥಾನದಿಂದ ಬಿ.ಎಂ.ರಸ್ತೆವರೆಗೆ ರಥ ಎಳೆದರು. ಅಲ್ಲದೇ ರಥಕ್ಕೆ ಹಣ್ಣು ಜವನ ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ನವ ದಂಪತಿಗಳು ರಥೋತ್ಸವದಲ್ಲಿ ಭಾಗವಹಿಸಿದ್ದರು.

ರಥೋತ್ಸವ ಅಂಗವಾಗಿ ಪಿರಿಯಾಪಟ್ಟಣ ತಾಲೂಕಿನ ನೂರಾರು ಗ್ರಾಮಗಳ ಜನತೆ ಸೇರಿದಂತೆ ಮೈಸೂರು ಹಾಗೂ ಕೊಡಗು ಜಿಲ್ಲೆಯ ಸಾವಿರಾರು ಭಕ್ತರು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು. ಅಹಿತಕರ ಘಟನೆ ನಡೆಯದಂತೆ ಪಟ್ಟಣ ಠಾಣೆ ಪೊಲೀಸರು ಬಂದೋಬಸ್ತ್ ಕೈಗೊಂಡಿದ್ದರು.

ಕೋಟೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪೂರ್ವ ಸಿದ್ಧತಾ ಸಭೆ

ಹೆಚ್.ಡಿ.ಕೋಟೆ, ಮಾ.10– ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಉಪವಿಭಾಗಾಧಿಕಾರಿ ಕಾವ್ಯರಾಣಿ ನೇತೃತ್ವದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪೂರ್ವ ಸಿದ್ಧತಾ ಸಭೆ ನಡೆಯಿತು.

ಕ್ಷೇತ್ರ ಶಿಕ್ಷಣಾಧಿಕಾರಿ ರಾಜು ಮಾತನಾಡಿ, ಶಿಕ್ಷಣ ಇಲಾಖೆ ನಿರ್ದೇಶನದ ಮೇರೆಗೆ ಮಾ.18ರಿಂದ ಏ.2ರವರೆಗೆ ನಡೆಯುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಕೋಟೆ, ಸರಗೂರು ತಾಲೂಕಿನ 3115 ವಿದ್ಯಾರ್ಥಿಗಳು ಎದುರಿಸಲಿದ್ದಾರೆ. ಹೀಗಾಗಿ ಅಧಿಕಾರಿಗಳು ಎಲ್ಲಾ ರೀತಿಯ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ತಿಳಿಸಿದರು.

ಕೋಟೆ, ಸರಗೂರು ತಾಲೂಕಿನ 13 ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗುವುದು. ಈ ಬಾರಿ ಡಿ.ಬಿ.ಕುಪ್ಪೆಂಯ ಕಾಡಂಚಿನ ಗ್ರಾಮದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೊಸ ಪರೀಕ್ಷಾ ಕೇಂದ್ರ ತೆರೆಯಲಾಗಿದೆ. ಪರೀಕ್ಷೆ ಆರಂಭಗೊಂಡ ನಂತರ 3 ರಜಾ ದಿನಗಳಿದ್ದು, ಆ ಸಂದರ್ಭ ಮಕ್ಕಳು ಶಾಲೆಗೆ ಬಂದು, ಓದಲು ಪ್ರೇರೇಪಿಸಲಾಗಿದೆ ಎಂದರು.



ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪೂರ್ವ ಸಿದ್ಧತಾ ಸಭೆ ನಡೆಯಿತು.

ಕಳೆದ ಬಾರಿ ಕೋಟೆ ತಾಲೂಕು ಜಿಲ್ಲೆಗೆ 9 ಸ್ಥಾನ ಗಳಿಸಿತ್ತು. ಈ ಬಾರಿ ಶಿಕ್ಷಕರು ಉತ್ತಮವಾಗಿ ಮಕ್ಕಳಿಗೆ ಪಾಠ ಮಾಡುವ ಮೂಲಕ ಹೆಚ್ಚು ಒತ್ತು ನೀಡಿದ್ದು, ಉತ್ತಮ ಫಲಿತಾಂಶ ಬರುವ ನಿರೀಕ್ಷೆ ಇದೆ ಎಂದರು.

ಉಪವಿಭಾಗಾಧಿಕಾರಿ ಕಾವ್ಯರಾಣಿ ಮಾತನಾಡಿ, ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಪರೀಕ್ಷೆ ವೇಳೆ ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಗ್ರಾಮಗಳಿಂದ ಬರುವುದಕ್ಕೆ ಬಸ್ ಸೌಕರ್ಯ, ಆರೋಗ್ಯ ಇಲಾಖೆಯಿಂದ ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಆರೋಗ್ಯ ಸಿಬ್ಬಂದಿಗಳ ನೇಮಕ, ಪೊಲೀಸ್ ಇಲಾಖೆಯಿಂದ ಪರೀಕ್ಷಾ ಕೇಂದ್ರಗಳ ಸುತ್ತ, ಸೂಕ್ತ ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದರು.

ಸಭೆಯಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಸಿಪಿಐ ಗಂಗಾಧರ್, ಎಸ್‌ಐ ಚಿಕ್ಕನಾಯಕ, ಇಓ ಧರಣೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಕೆಎಸ್‌ಆರ್‌ಟಿಸಿ ಡಿಪೋ ಮ್ಯಾನೇಜರ್ ತ್ಯಾಗರಾಜು, ಕೆಇಬಿ ಎಇಇ ಚಂದುಕುಮಾರ್, ನಾರಾಯಣಸ್ವಾಮಿ, ನಾಗರಾಜು, ಸುಜಾತ, ಗೀತಾ, ರಾಜು, ರವೀಂದ್ರ ಬಾಬು, ದೇವಪ್ರಸಾದ್, ಪ್ರಶಾಂತ್, ರಘೋತ್ತಮ್, ನಂದೀಶ ಇತರರಿದ್ದರು.

ಗ್ರಾಮೀಣ ರಸ್ತೆಗಳ ಸುಧಾರಣೆಗೆ ಪ್ರಥಮ ಆದ್ಯತೆ

ರಸ್ತೆ, ಚರಂಡಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಚಾಲನೆ

ತಿ.ನರಸೀಪುರ, ಮಾ.10– ಗ್ರಾಮಗಳ ಅಭಿವೃದ್ಧಿಗೆ ಸರ್ಕಾರ ದಿಟ್ಟ ಕ್ರಮ ಕೈಗೊಂಡಿದ್ದು, ರಸ್ತೆಗಳ ಸುಧಾರಣೆಗೆ ಪ್ರಥಮ ಆದ್ಯತೆ ನೀಡಿ, ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ಕರೋಹಟ್ಟಿ ಗ್ರಾಮದಲ್ಲಿ 3 ಕೋಟಿ ರೂ. ವೆಚ್ಚದ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮೀಣ ರಸ್ತೆಗಳು ಅಭಿವೃದ್ಧಿಯಾದರೇ ಗ್ರಾಮಗಳು ಅಭಿವೃದ್ಧಿಯಾದಂತೆ. ಆ ನಿಟ್ಟಿನಲ್ಲಿ ಸರ್ಕಾರ ಹಲವು ಯೋಜನೆಗಳ ಮೂಲಕ ಅನುದಾನ ನೀಡಿ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇದರಿಂದ ರೈತಾಪಿ ವರ್ಗ, ಶ್ರೀಸಾಮಾನ್ಯರು ಹೊಲ ಗದ್ದೆಗಳಿಗೆ ತೆರಳಲು, ಬೆಳೆದ ಫಸಲನ್ನು ಮಾರಾಟಕ್ಕೆ ತೆಗೆದುಕೊಂಡು ಹೋಗಲು ಬಹಳಷ್ಟು ಅನುಕೂಲವಾಗಿದೆ ಎಂದರು.



ಸಂಸದ ಸುನೀಲ್ ಬೋಸ್ ಅವರನ್ನು ಯುವ ಮುಖಂಡ ಪ್ರವೀಣ್ ಸನ್ಮಾನಿಸಿದರು.

ಕ್ಷೇತ್ರದ ಗ್ರಾಮೀಣ ಭಾಗದಲ್ಲಿ ದುಸ್ಥಿತಿಯಲ್ಲಿರುವ ರಸ್ತೆಗಳನ್ನು ಕ್ರಿಯಾ ಯೋಜನೆ ತಯಾರಿಸಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುವುದು. ಗ್ರಾಮಗಳ ನಡುವೆ ಸಂಪರ್ಕ ಕಲ್ಪಿಸಲು ರಸ್ತೆಗಳ ಅಭಿವೃದ್ಧಿ ಹಾಗೂ ದುರಸ್ಥಿ ಕಾರ್ಯ ನಡೆದಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಅನುದಾನ ಸರ್ಕಾರದಿಂದ ತರುವುದಾಗಿ ಭರವಸೆ ನೀಡಿದರು.

ಗ್ರಾಮೀಣ ರೈತರ ಹಿತ ಕಾಯುವ ಮೂಲಕ ಅವರಿಗೆ ಎಲ್ಲಾ ರೀತಿಯ ಅನುಕೂಲ ಕಲ್ಪಿಸಲು ತಾವು ಸಿದ್ಧರಾಗಿದ್ದು, ಕ್ಷೇತ್ರದ ಜನತೆಯ ಕಲ್ಯಾಣ ಮುಖ್ಯವಾಗಿದೆ ಎಂದರು.

ಯುವ ಮುಖಂಡ ಪ್ರವೀಣ್ ಮಾತನಾಡಿ, ಚುನಾವಣೆ ವೇಳೆ ಗ್ರಾಮಸ್ಥರು ಜಮೀನುಗಳಿಗೆ ಹೋಗಲು ಸಂಪರ್ಕ ರಸ್ತೆ ನಿರ್ಮಾಣವಾಗಬೇಕು ಎಂದು ಮನವಿ ಮಾಡಿದ್ದರು. ಇದೀಗ ಆ ಭರವಸೆ ಈಗ ಈಡೇರುತ್ತಿದೆ ಎಂದರು.

> ಗ್ರಾಮೀಣ ಜನರಿಗೆ ಉತ್ತಮ ರಸ್ತೆ, ಶಿಕ್ಷಣ ಸೇರಿದಂತೆ ಎಲ್ಲಾ ರೀತಿಯ ಮೂಲ ಸೌಕರ್ಯ ಒದಗಿಸಲು ನಿರಂತರವಾಗಿ ಶ್ರಮಿಸಲಾಗುತ್ತಿದೆ. ಈಗಾಗಲೇ ಕ್ಷೇತ್ರದಲ್ಲಿ ನೂರಾರು ಕೋಟಿ ಅನುದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗಿದ್ದು, ಮುಂಬರುವ ದಿನಗಳಲ್ಲಿ ಉಳಿದಿರುವ ಸಣ್ಣಪುಟ್ಟ ಕಾಮಗಾರಿಗಳನ್ನು ಪೂರ್ಣಗೊಳಿಸಲು ಆದ್ಯತೆ ನೀಡುತ್ತೇವೆ.
> – ಸುನೀಲ್ ಬೋಸ್, ಸಂಸದ.

ಗ್ರಾಪಂ ಮಾಜಿ ಸದಸ್ಯ ಶೇಷಾದ್ರಿ ಯಾದವ್, ಯುವ ಮುಖಂಡರಾದ ಗಿರೀಶ್, ನಾಗೇಶ್, ರಮೇಶ್, ಜಗದೀಶ್, ಶಂಕರ್ ನಾಗ್, ರಾಜೇಶ್, ವಿಜಯ ಕುಮಾರ್, ಕರೋಹಟ್ಟಿ ಜಗದೀಶ್, ಸಂಸದರ ಆಪ್ತ ಸಹಾಯಕ ಬಸವರಾಜು, ಲೋಕೋಪಯೋಗಿ ಅಭಿಯಂತರ ಸತೀಶ್ ಚಂದ್ರ ತಹಸೀಲ್ದಾರ್ ಸುರೇಶ್ ಆಚಾರ್, ಗ್ರಾಮಸ್ಥರು ಹಾಜರಿದ್ದರು.

ಚಿಕ್ಕದೇವಮ್ಮನ ಜಾತ್ರೆಗೆ ಸಾರ್ವಜನಿಕರ ಸಹಕಾರ ಅಗತ್ಯ

ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಮೋಹನಕುಮಾರಿ

ಸರಗೂರು, ಮಾ.10– ನಾಡಿನ ಅಧಿದೇವತೆ ಚಿಕ್ಕದೇವಮ್ಮನ ಹಾಲುಗಡ, ಇಟ್ನ ಜಾತ್ರಾ ಮಹೋತ್ಸವ ಮಾ.19 ರಿಂದ 3 ದಿನಗಳ ಕಾಲ ನಡೆಯಲಿದ್ದು, ಜಾತ್ರಾ ಮಹೋತ್ಸವದ ಯಶಸ್ವಿಗೆ ಸಾರ್ವಜನಿಕರ ಸಹಕಾರ ಅಗತ್ಯ ಎಂದು ತಹಸೀಲ್ದಾರ್ ಮೋಹನಕುಮಾರಿ ತಿಳಿಸಿದರು.

ಪಟ್ಟಣದ ತಮ್ಮ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ವರ್ಷವೂ ಜಾತ್ರೆ ನಡೆಯಲಿದ್ದು, ಇದಕ್ಕಾಗಿ ಇಟ್ನ ಗ್ರಾಮಸ್ಥರು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ. ಚಂದ್ರಮಾನ ಯುಗಾದಿಯಂದು ಜಾತ್ರಾ ಮಹೋತ್ಸವ ನಡೆಯುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಭಕ್ತರಿಗೆ ತೊಂದರೆಯಾಗದಂತೆ ಎಚ್ಚರ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ತಹಸೀಲ್ದಾರ್ ಮೋಹನಕುಮಾರಿ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಜಾತ್ರೆ ಕಮಿಟಿ ಅಧ್ಯಕ್ಷ ದೊಡ್ಡವೀರನಾಯಕ ಮಾತನಾಡಿ, ಜಾತ್ರೆಗೆ ಹೆಚ್ಚಿನ ಭಕ್ತರು ಬರುವ ನಿರೀಕ್ಷೆ ಇದೆ. ಬೆಟ್ಟದಿಂದ ದೇವಿಯ ಉತ್ಸವಮೂರ್ತಿಯನ್ನು ತಂದು ಕಪಿಲ ನದಿಯ ಜಪದಕಟ್ಟೆಯಲ್ಲಿ ಪ್ರತಿಷ್ಠಾಪಿಸಿ, ವಿಶೇಷ ಪೂಜೆ ನಡೆಸಲಾಗುವುದು. ಹೀಗಾಗಿ ಭಕ್ತರ ಅನುಕೂಲಕ್ಕಾಗಿ ಸಕಲ ಸೌಲಭ್ಯ ಒದಗಿಸುವಂತೆ ಮನವಿ ಮಾಡಿದರು.

ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿ, ಭಕ್ತರು ಜಪದಕಟ್ಟೆಗೆ ಬರಲು ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆ. ವಾಹನಗಳಿಗೆ ಪ್ರತ್ಯೇಕ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗುವುದು. ಅಲ್ಲದೆ ಭಕ್ತರು ಸುಗಮವಾಗಿ ದೇವಿ ದರ್ಶನ ಪಡೆಯಲು ಸಕಲ ವ್ಯವಸ್ಥೆ ಕಲ್ಪಿಸಲಾಗುವುದು. ಈ ಬಗ್ಗೆ ಯಾವುದೇ ಗೊಂದಲ ಬೇಡ. ಎಲ್ಲರೂ ಒಗ್ಗೂಡಿ ಎಂದಿನಂತೆ ಜಾತ್ರೆ ಯಶಸ್ವಿಗೆ ಶ್ರಮಿಸೋಣ. ಶಾಸಕ ಅನಿಲ್ ಚಿಕ್ಕಮಾದು ಅವರು ಜಾತ್ರಾ ಮಹೋತ್ಸವದ ಯಶಸ್ವಿಗೆ ಸೂಚನೆ ನೀಡಿದ್ದಾರೆ. ಅದನ್ನು ಪಾಲಿಸೋಣ ಎಂದರು.

ಈ ವೇಳೆ ದೇವಾಲಯದ ಇಓ ರಘು, ಕ್ರೈಂ ವಿಭಾಗದ ಎಸ್‌ಐ ಗೋಪಾಲ್ ಮಾತನಾಡಿದರು. ಪಾರುಪತ್ತೇದಾರ ಮಹದೇವಸ್ವಾಮಿ, ತಾಲೂಕು ನಾಯಕ ಸಮಾಜದ ಅಧ್ಯಕ್ಷ ಬಸವರಾಜು, ಎನ್.ಬಸವನಾಯಕ, ಯಜಮಾನರಾದ ಬಿ.ಬೆಟ್ಟನಾಯಕ, ಚಿನ್ನನಾಯಕ, ತಮ್ಮರಾಜು, ಬೆಟ್ಟನಾಯಕ, ಅನಿಲ್ ನಾಯಕ, ಕಾಳಿಂಗನಾಯಕ, ಸಣ್ಣಸ್ವಾಮಿನಾಯಕ, ಐಬಿ ರವಿಕುಮಾರ್, ಜಯರಾವ್, ನಾಗೇಂದ್ರ, ಸೋಮಣ್ಣ, ಚಿಕ್ಕಣ್ಣ, ಬಿ.ಬಸವರಾಜು ಸೇರಿದಂತೆ ಹಾಲುಗಡ, ಇಟ್ನ ಗ್ರಾಮಸ್ಥರು ಹಾಜರಿದ್ದರು.

ಪೌರಸೇವಾ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ

ರಾಜ್ಯ ಪೌರಸೇವಾ ನೌಕರರ ಸಂಘದ ಅಧ್ಯಕ್ಷೆ ಕೆ.ಡಿ.ಶೈಲಾ ಆಗ್ರಹ

ಹುಣಸೂರು, ಮಾ.10– ಸಮಾಜದ ಸ್ವಾಸ್ಥ್ಯ ಕಾಪಾಡುವ ಪೌರಸೇವಾ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು ಎಂದು ಕರ್ನಾಟಕ ರಾಜ್ಯ ಪೌರಸೇವಾ ನೌಕರರ ಸಂಘದ ಅಧ್ಯಕ್ಷೆ ಕೆ.ಡಿ.ಶೈಲಾ ಆಗ್ರಹಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಪೌರಸೇವಾ ನೌಕರರ ಸಂಘದಿಂದ ಆಯೋಜಿಸಿದ್ದ ಮಹಿಳಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಪೌರ ಸೇವಾ ಸಿಬ್ಬಂದಿ ಮುಂಜಾನೆಯಿಂದ ಸಂಜೆವರೆಗೂ ಕಾರ್ಯನಿರ್ವಹಿಸಿ ನಗರದ ಸ್ವಚ್ಛತೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಆದರೆ ಇವರಿಗೆ ಅರೆ ಸರ್ಕಾರಿ ನೌಕರರು ಎಂಬ ಹಣೆಪಟ್ಟಿ ಕಟ್ಟಿರುವುದರಿಂದ ಸರ್ಕಾರದ ಎಲ್ಲಾ ಸವಲತ್ತುಗಳನ್ನು ಕೈ ಚೆಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸಂಘ ಈಗಾಗಲೇ ಸರ್ಕಾರದ ಗಮನಕ್ಕೆ ತಂದಿದೆ. ಪೌರಕಾರ್ಮಿಕರನ್ನು ಸರ್ಕಾರಿ ನೌಕರರು ಎಂದು ಪರಿಗಣಿಸಿ ಎಲ್ಲಾ ರೀತಿಯ ಸವಲತ್ತು ಕಲ್ಪಿಸಬೇಕು ಎಂದು ಒತ್ತಡ ಹಾಕಲಾಗಿದ್ದು, ಯಶಸ್ವಿಯಾಗುವ ವಿಶ್ವಾಸವಿದೆ. ಎಲ್ಲಾ ತಾಲೂಕು, ನಗರದಲ್ಲೂ ಮಹಿಳಾ ಪೌರಸೇವಕರಿಗೆ ಕಡ್ಡಾಯವಾಗಿ ಪ್ರತ್ಯೇಕ ವಿಶ್ರಾಂತಿ ಕೊಠಡಿ ನಿರ್ಮಿಸಿ ಅಗತ್ಯ ಸವಲತ್ತು ಕಲ್ಪಿಸಬೇಕು ಎಂದು ಮನವಿ ಮಾಡಿದರು.



ಪೌರ ಕಾರ್ಮಿಕರಲ್ಲಿ ದಿನಗೂಲಿ, ಹೊರಗುತ್ತಿಗೆ ನೌಕರರು ಎಂದು ಪರಿಗಣಿಸಿ ಕೆಲಸಕ್ಕೆ ನಿಯೋಜಿಸಿಕೊಳ್ಳಲಾಗಿದೆ. ಆದರೆ ಖಾಯಂ ನೌಕರರು ಮಾಡುವ ಮಾದರಿಯಲ್ಲೇ ಇವರು ಎಲ್ಲಾ ಕೆಲಸ ನಿರ್ವಹಿಸುತ್ತಿದ್ದರೂ, ವೇತನದಲ್ಲಿ ತಾರತಮ್ಯ ಇದೆ. ಈ ಸಂಬಂಧ ಪೌರಾಡಳಿತ ಸಚಿವರೊಂದಿಗೆ ಒಂದು ಸುತ್ತಿನ ಮಾತುಕತೆ ನಡೆಸಿದ್ದು, ಮತ್ತೊಂದು ಸುತ್ತಿನ ಮಾತುಕತೆ ನಡೆಸಲಾಗುವುದು ಎಂದರು.

ನಗರಸಭೆ ಪೌರಾಯುಕ್ತೆ ಎಂ.ಮಾನಸ ಮಾತನಾಡಿ, ಸರ್ಕಾರ ಪೌರಸೇವಾ ನೌಕರರನ್ನು ಸರ್ಕಾರಿ ನೌಕರರು ಎಂದು ಗುರುತಿಸದೆ ತಾರತಮ್ಯ ಧೋರಣೆ ಅನುಸರಿಸುತ್ತಿದೆ. ಹೀಗಾಗಿ ಸ್ಥಳೀಯವಾಗಿ ಪೌರ ಸೇವಕರು ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಾಹಿತಿ ಮಧುಪ್ರಸಾದ್, ಶಿಕ್ಷಕ ಗೋವಿಂದೇಗೌಡ ಮಾತನಾಡಿದರು. ಶ್ರೀಹರಿ ಅವರು ಮಹಿಳಾ ದಿನಾಚರಣೆ ಅಂಗವಾಗಿ ಕವನ ವಾಚಿಸಿದರು. ವೇದಿಕೆಯಲ್ಲಿ ಪರಿಸರ ಇಂಜಿನಿಯರ್ ಸೌಮ್ಯ, ಲೆಕ್ಕಾಧಿಕಾರಿ ಶಾರದಮ್ಮ, ಪೌರಸೇವಾ ನೌಕರರ ಸಂಘದ ಅಧ್ಯಕ್ಷೆ ಸೌಮ್ಯ, ಮಧುಸೂದನ್, ಸೋಮಶೇಖರ್, ಸಿದ್ದಯ್ಯ ಸೇರಿದಂತೆ ಇನ್ನಿತರರಿದ್ದರು.

ಮರಗಳನ್ನು ಕಡಿದವರಿಗೆ ಕಠಿಣ ಶಿಕ್ಷೆಯಾಗಲಿ



ಪರಿಸರಕ್ಕಾಗಿ ನಾವು ಸಂಘಟನೆ ಪ್ರಧಾನ ಕಾರ್ಯದರ್ಶಿ ಪರುಶುರಾಮೇಗೌಡ ಮಾತನಾಡಿದರು.

ನಂಜನಗೂಡು, ಮಾ.10– ತಾಲೂಕಿನ ಹೆಜ್ಜಿಗೆ ಗ್ರಾಮದ ಕಪಿಲಾ ನದಿ ದಡದಲ್ಲಿ 46 ಮರಗಳನ್ನು ಅಕ್ರಮವಾಗಿ ಕಡಿದು ಸಾಗಿಸಿರುವ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಪರಿಸರಕ್ಕಾಗಿ ನಾವು ಸಂಘಟನೆ ಪ್ರಧಾನ ಕಾರ್ಯದರ್ಶಿ ಪರುಶುರಾಮೇಗೌಡ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಂತ ಜಮೀನಿನಲ್ಲಿ ರೈತರು ಬೆಳೆಸಿದ ಮರ ಕಡಿಯಲು ಅನುಮತಿ ನೀಡಲು ಒಂದು ವರ್ಷ ಅಲೆದಾಡಿಸುತ್ತಾರೆ. ಒಂದು ಸಣ್ಣ ಗಿಡ ಕಡಿದರೂ ಸ್ಥಳಕ್ಕೆ ಹಾಜರಾಗುವ ಅರಣ್ಯ ಇಲಾಖೆ ಅಧಿಕಾರಿಗಳು 46 ಬೃಹತ್ ಮರಗಳನ್ನು ಕಡಿದು ಸಾಗಿಸುವವರೆಗೂ ಸ್ಥಳಕ್ಕೆ ಭೇಟಿ ನೀಡಿಲ್ಲ ಎಂದರೆ ನಂಬುವ ಹಾಗಿಲ್ಲ. ಅಲ್ಲದೇ ಘಟನೆ ಬಳಿಕ ಡಿಎಫ್‌ಓ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿಲ್ಲ. ಆರ್‌ಎಫ್‌ಓ ನಿತಿನ್ ಕುಮಾರ್ ಮರ ಕಡಿದ ವ್ಯಕ್ತಿ ವಿರುದ್ಧ ಮೊಕದ್ದಮೆ ದಾಖಲಿಸಿರುವುದಾಗಿ ಹೇಳುತ್ತಾರೆ. ಆದರೆ ಆರೋಪಿ ಅಯಾಜ್ ಪಾಷ ತಲೆಮರೆಸಿಕೊಂಡಿದ್ದಾನೆ. ಕೇವಲ ಒಬ್ಬನೇ ವ್ಯಕ್ತಿ ಇಷ್ಟು ಮರಗಳನ್ನು ಕಡಿದು ಸಾಗಿಸಲು ಸಾಧ್ಯವಿಲ್ಲ. ಘಟನೆ ಹಿಂದೆ ರಾಜಕೀಯ ವ್ಯಕ್ತಿಗಳ ಕೈವಾಡವಿದೆ. ಆದ್ದರಿಂದ ಅರಣ್ಯ ಇಲಾಖೆ, ಜಿಲ್ಲಾಡಳಿತ ಮತ್ತು ತಾಲೂಕು ಆಡಳಿತ ಸೂಕ್ತ ತನಿಖೆ ನಡೆಸಿ, ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಪಿಯುಸಿಎಲ್ ಮುಖಂಡ ಕಮಲ್ ಗೋಪಿನಾಥ್ ಮಾತನಾಡಿ, ಪಶ್ಚಿಮ ಘಟ್ಟಗಳ ಅರಣ್ಯ ಪ್ರದೇಶದಲ್ಲಿ ವ್ಯವಸ್ಥಿತವಾಗಿ ಮರಗಳ ಕಳ್ಳಸಾಗಾಣಿಕೆ ನಡೆಯುತ್ತಿದೆ. ಇದರ ಹಿಂದೆ ವ್ಯವಸ್ಥಿತ ಜಾಲ ಕೆಲಸ ಮಾಡುತ್ತಿದೆ. 46 ಮರಗಳನ್ನು ಕಡಿಯುತ್ತಿದ್ದರೂ ಸಾರ್ವಜನಿಕರು ವಿರೋಧಿಸದೆ ಇದ್ದರೆ ಹೇಗೆ ಎಂದು ಪ್ರಶ್ನಿಸಿದ ಅವರು ಜನರಿಗೆ ನಮ್ಮ ಪರಿಸರ ರಕ್ಷಣೆ ಬಗ್ಗೆ ಕಾಳಜಿ ಇರಬೇಕು. ಇಷ್ಟು ಚೆಕ್‌ಪೋಸ್ಟ್‌ಗಳಿದ್ದರೂ ಬೃಹತ್ ಮರಗಳ ಸಾಗಾಣಿಕೆ ನಡೆದಿರುವುದು ಅನುಮಾನಕ್ಕೆ ಕಾರಣವಾಗಿದೆ. ಅರಣ್ಯಾಧಿಕಾರಿಗಳು ಜಾಣ ಕುರುಡುತನ ಪ್ರದರ್ಶಿಸುತ್ತಿದ್ದಾರೆ. ಆರೋಪಿಗಳ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಎಂದರು.

ರೈತ ಸಂಘದ ಮುಖಂಡ ಬಸವರಾಜು ಮಾತನಾಡಿದರು.

ವಿಜಯ್ ಕುಮಾರ್, ಭಾಗ್ಯ ಶಂಕರ್, ಪ್ರಭ ನಂದೀಶ್, ಸಿಕಂದರ್, ಪ್ರಭಾಕರ್, ಗೋಕುಲ್ ಗೋವರ್ಧನ್, ಶೀಲಾ, ರಾಮಕೃಷ್ಣಪ್ಪ, ನಾರಾಯಣ್ ಉಪಸ್ಥಿತರಿದ್ದರು.

ಮೀಸಲಾತಿ ಅನುಷ್ಠಾನದಲ್ಲಿ ರಾಜ್ಯ ಸರ್ಕಾರದಿಂದ ಗೊಂದಲ

ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಆರೋಪ

ತಿ.ನರಸೀಪುರ, ಮಾ.10– ಪ.ಜಾತಿ ಒಳ ಮೀಸಲಾತಿ ಜಾರಿ ಸಂಬಂಧ ರಾಜ್ಯ ಸರ್ಕಾರ ದ್ವಂದ್ವ ನಿಲುವು ಅನುಸರಿಸುತ್ತಿದ್ದು, ಮೊದಲು ಹಿಂದಿನ ಮೀಸಲಾತಿಯಂತೆ ಉದ್ಯೋಗ ನೇಮಕಾತಿ ಮಾಡುವುದಾಗಿ ಹೇಳಿ, ಬಳಿಕ ಒಳ ಮೀಸಲಾತಿ ಅನ್ವಯ ನೇಮಕಾತಿ ಮಾಡುವುದಾಗಿ ಸಮಾಜ ಕಲ್ಯಾಣ ಸಚಿವರ ಜೊತೆ ಸಿಎಂ ಸಿದ್ದರಾಮಯ್ಯ ಅವರೇ ಹೇಳುವ ಮೂಲಕ ಮೀಸಲಾತಿ ಅನುಷ್ಠಾನದಲ್ಲಿ ಗೊಂದಲ ಮೂಡಿಸುತ್ತಿದ್ದಾರೆ ಎಂದು ಬಲಗೈ ಮೀಸಲಾತಿ ಹೋರಾಟ ಸಮಿತಿ ಸಂಚಾಲಕ ಹಾಗೂ ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ ಆರೋಪಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಜಾರಿಗೆ ಪ.ಜಾತಿ ಸಮುದಾಯಗಳನ್ನು 3 ವರ್ಗಗಳಲ್ಲಿ ವಿಂಗಡಿಸಿದ್ದು, ಒಂದು ವೇಳೆ ಒಳ ಮೀಸಲು ಜಾರಿಯಾದಲ್ಲಿ ಪ್ರವರ್ಗ 'ಬಿ' ನಲ್ಲಿ ಬರುವ ಬಲಗೈ, ಹೊಲಯ ಸಂಬಂಧಿತ ಜಾತಿಗಳಿಗೆ ಭವಿಷ್ಯದಲ್ಲಿ ಮೀಸಲಾತಿಯನ್ನು ವ್ಯವಸ್ಥಿತವಾಗಿ ವಂಚಿಸುವ ಹುನ್ನಾರ ಮಾಡಲಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.



ಸಭೆಯಲ್ಲಿ ವಿಚಾರವಾದಿ ಕೆ.ಎನ್. ಪ್ರಭುಸ್ವಾಮಿ ಮಾತನಾಡಿದರು.

> ಒಳ ಮೀಸಲಾತಿಯಲ್ಲಿ ಮಾದಿಗ ಸಮುದಾಯಕ್ಕೆ ನ್ಯಾಯ ಕೊಡಿಸಲು ಅವರ ಸಚಿವ, ಶಾಸಕರು ಬಹಿರಂಗವಾಗಿ ಮುನ್ನೆಲೆಗೆ ಬರುತ್ತಿದ್ದಾರೆ. ಬಲಗೈ ಸಂಬಂಧಿತ ಜಾತಿಗಳಿಗೆ ಅನ್ಯಾಯವಾಗುತ್ತಿದ್ದರೂ ಯಾವೊಬ್ಬ ಸಚಿವ ಅಥವಾ ಶಾಸಕ ಸಮುದಾಯದ ಪರ ಹೊರ ಬರುತ್ತಿಲ್ಲ. ನಿಮಗೆ ಸಮುದಾಯದ ಮೇಲೆ ಕಾಳಜಿ ಇದ್ದಲ್ಲಿ ರಾಜೀನಾಮೆ ಕೊಟ್ಟು ಹೊರಬನ್ನಿ. ನಿಮ್ಮೆಲ್ಲರ ಪರ ಸಮಸ್ತ ಸಮುದಾಯ ನಿಂತು ನಿಲ್ಲಿಸಿಕೊಳ್ಳುತ್ತೇವೆ. ನಾವ್ಯಾರೋ ಪ್ರತಿಭಟನೆ ಮಾಡುವಾಗ ಮಾದಿಗ ಸಮುದಾಯ ಒಬ್ಬ ಜನಪ್ರತಿನಿಧಿ ಬಗ್ಗೆ ಕೆಟ್ಟದಾಗಿ ಮಾತನಾಡಿಲ್ಲ. ಅವಮಾನಿಸುವ ಕೆಲಸವನ್ನು ಮಾಡಿಲ್ಲ. ಹಾಗಾಗಿ ಮಾದಿಗ ಸಮುದಾಯದ ಪ್ರತಿಭಟನಾಕಾರರು ಬಲಗೈ ಸಮುದಾಯದ ಜನಪ್ರತಿನಿಧಿಗಳನ್ನು ಅವಮಾನಿಸುವ ಕೆಲಸವನ್ನು ಮಾಡಬಾರದು.
> – ಸೋಸಲೆ ಎ.ಶಿವಕುಮಾರ್, ದಲಿತ ಯುವ ಮುಖಂಡ.

ಪ.ಜಾತಿ ಮಾದಿಗ ಸಮುದಾಯ ಒಳ ಮೀಸಲಾತಿ ಕೇಳುವುದಕ್ಕೆ ಯಾವುದೇ ಆಕ್ಷೇಪವಿಲ್ಲ. ರಾಜ್ಯ ಸರ್ಕಾರ, ಮುಖ್ಯಮಂತ್ರಿಗಳನ್ನು ಆಗ್ರಹಿಸದೆ ಹೋರಾಟದ ವೇಳೆ ಬಲಗೈ ಸಮುದಾಯದ ಪ್ರತಿನಿಧಿಗಳನ್ನು ಕೆಟ್ಟದಾಗಿ ನಿಂದಿಸಿ, ಅವಮಾನಿಸುವುದನ್ನು ಸಹಿಸಲು ಸಾಧ್ಯವಿಲ್ಲ. ವಕೀಲರಾಗಿ ಎಸ್.ಅರುಣ್ ಕುಮಾರ್ ಒಳ ಮೀಸಲಾತಿ ಜಾರಿಯಾಗದಿದ್ದರೆ ರಕ್ತ ಕ್ರಾಂತಿ ಆಗುತ್ತದೆ ಎಂದಿದ್ದಾರೆ. ಒಳ ಮೀಸಲಿಗೆ ಅವರು ಯಾರ ರಕ್ತಪಾತ ಮಾಡುತ್ತಾರೆ. ಮತ್ಯಾರನ್ನು ಬಲಿ ಕೊಡುತ್ತಾರೆ ಎಂಬುದನ್ನು ಸ್ಪಷ್ಟಪಡಿಸಬೇಕು. ಹೋರಾಟ ಮಾಡುವಾಗ ಸಾಮಾಜಿಕ ಮತ್ತು ನೈತಿಕ ಪ್ರಜ್ಞೆ ಇರಬೇಕು ಎಂದರು.

ರೋಸ್ಟರ್ ಬಿಂದು ಸರಿ ಇಲ್ಲದ ಕಾರಣ ಉದ್ಯೋಗ ನೇಮಕಾತಿ ಪ್ರಕ್ರಿಯೆಯಲ್ಲಿ ಬಲಗೈ ಸಂಬಂಧಿತ ಜಾತಿಗಳಿಗೆ ಅನ್ಯಾಯವಾಗಿದೆ. ಆದ್ದರಿಂದ ಒಳ ಮೀಸಲಾತಿ ಜಾರಿಗೊಳಿಸಬಾರದು. ಒಳ ಮೀಸಲು ಮಾಡುವುದರರೇ ರೋಸ್ಟರ್ ಲೋಪವನ್ನು ಸರಿಪಡಿಸಿ, ಆಯ್ಕೆ ಪ್ರಕ್ರಿಯೆ ನಡೆಸಬೇಕು. ಬಲಗೈ ಸಂಬಂಧಿತ ಜಾತಿಗಳನ್ನು ವಂಚಿಸಲು ಮುಂದಾದರೆ ರಾಜ್ಯ ಸರ್ಕಾರದ ವಿರುದ್ಧ ದೊಡ್ಡ ಮಟ್ಟದ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್.ಲಿಂಗಪ್ಪಾಜಿ ಮಾತನಾಡಿ, ರಾಜ್ಯ ಸರ್ಕಾರ ಪ.ಜಾತಿ ಮತ್ತು ಪ.ಪಂಗಡ ಅಭಿವೃದ್ಧಿ ಮೀಸಲು ಹಣವನ್ನು ಪದೇ ಪದೇ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿರುವುದರಿಂದ ಮುಖ್ಯಮಂತ್ರಿಗಳ ಮೇಲೆಯೇ ದೌರ್ಜನ್ಯ ಪ್ರಕರಣ ದಾಖಲಿಸಬೇಕು. ಅವೈಜ್ಞಾನಿಕ ರೋಸ್ಟರ್ ಬಿಂದು ರೂಪಿಸಿ, ಒಳ ಮೀಸಲಾತಿಯನ್ನು ಗೊಂದಲದ ಗೂಡಾಗಿ ಪರಿವರ್ತಿಸಿ ಪ.ಜಾತಿ ಸಮುದಾಯಗಳ ನಡುವೆ ಸಂಘರ್ಷ ತಂದಿಡುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿದೆ. ಒಳ ಮೀಸಲಾತಿಯಿಂದ ಬಲಗೈ ಸಮುದಾಯಗಳಿಗೆ ತೀರ ಅನ್ಯಾಯವಾಗುತ್ತಿದೆ. ಹಾಗಾಗಿ ಒಳ ಮೀಸಲಾತಿಯಲ್ಲಿ ಮತ್ತಷ್ಟು ಮಾರ್ಪಾಡು ಮಾಡಬೇಕು ಎಂದು ಆಗ್ರಹಿಸಿದರು.

ದಸಂಸ ರಾಜ್ಯ ವಿಭಾಗೀಯ ಮಟ್ಟದ ಸಂಘಟನಾ ಸಂಚಾಲಕ ಆಲಗೂಡು ಎಸ್.ಚಂದ್ರಶೇಖರ್, ಹಿರಿಯ ಜಿಲ್ಲಾ ಸಂಚಾಲಕ ಕುಕ್ಕೂರು ರಾಜು, ಮುಖಂಡರಾದ ಮೂಗೂರು ಎಂ.ಕೆ.ಸಿದ್ದರಾಜು, ಎಂ.ಆರ್.ಸುಂದರ್, ಯರಗನಹಳ್ಳಿ ಬಿ. ಮಹದೇವಸ್ವಾಮಿ, ಪುಟ್ಟರಾಜು, ನಿಂಗರಾಜು, ಧರ್ಮರತ್ನಕುಮಾರ, ರಾಜಣ್ಣ, ಎಸ್.ವಿ.ಮಹೇಶ್ ಕುಮಾರ್, ಎಸ್.ಕೆ.ಶಿವಕುಮಾರ್, ಪಿ.ಮಹದೇವಸ್ವಾಮಿ, ರವಿಪ್ರಸಾದ್, ರಾಜೇಶ್, ಪರಶುರಾಮ್, ರಾಜಪ್ಪ, ಬಸವರಾಜು, ಶಿವಮೂರ್ತಿ, ಎಲ್.ಉಮಾಪತಿ, ನಿರಂಜನ್, ಪ್ರೇಮಕುಮಾರ್, ನಾಗರಾಜಮೂರ್ತಿ, ಪ್ರಭು ಇತರರಿದ್ದರು.

ಮಹಿಳೆಯರಿಗೆ ಸಮಾನ ಅವಕಾಶ

ದೇಶಾದ್ಯಂತ 'ಏಕರೂಪ ನಾಗರಿಕ ಸಂಹಿತೆ' ಜಾರಿಯಿಂದ ಮಾತ್ರ ಸಾಧ್ಯ !

ನವದೆಹಲಿ, ಮಾ.10– ಏಕರೂಪ ನಾಗರಿಕ ಸಂಹಿತೆ ಪರ ಸುಪ್ರೀಂಕೋರ್ಟ್ ಬ್ಯಾಟ್ ಬೀಸಿದೆ. ದೇಶದ ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಾತ್ರಿಪಡಿಸುವ ಏಕೈಕ ಮಾರ್ಗವೆಂದರೆ ದೇಶಾದ್ಯಂತ ಏಕರೂಪ ನಾಗರಿಕ ಸಂಹಿತೆಯನ್ನು (UCC) ಜಾರಿಗೆ ತರುವುದು ಎಂದು ಅತ್ಯುನ್ನತ ನ್ಯಾಯಾಲಯ ಮಂಗಳವಾರ ಹೇಳಿದೆ.

ಮುಸ್ಲಿಂ ವೈಯಕ್ತಿಕ ಕಾನೂನು (ಶರಿಯತ್) ಅಡಿಯಲ್ಲಿ ಮಹಿಳೆಯರ ಹಕ್ಕುಗಳ ಉಲ್ಲಂಘನೆಯನ್ನು ಆರೋಪಿಸಿ ಒಂದು ಬ್ಯಾಚ್ ಅರ್ಜಿಯ ವಿಚಾರಣೆ ನಡೆಸುತ್ತಿರುವ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ (CJI) ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿಗಳಾದ ಆರ್.ಮಹದೇವನ್ ಮತ್ತು ಜಾಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ನ್ಯಾಯಪೀಠ ಈ ತೀರ್ಪು ನೀಡಿದೆ.

ಮುಸ್ಲಿಂ ಸಮಾಜದ ಒಂದು ದೊಡ್ಡ ವರ್ಗವು ಸಮಾನ ಉತ್ತರಾಧಿಕಾರದ ಹಕ್ಕುಗಳಿಂದ ವಂಚಿತವಾಗಿದೆ ಎಂಬುದು ನಿಜ. ಆದರೆ ಶರಿಯಾ ಕಾನೂನಿನ ಉತ್ತರಾಧಿಕಾರದ ನಿಬಂಧನೆಯನ್ನು ತೆಗೆದುಹಾಕಿದರೆ, ನಂತರ ಯಾವ ಕಾನೂನು ಉತ್ತರಾಧಿಕಾರವನ್ನು ನಿಯಂತ್ರಿಸಬೇಕು. ಏಕರೂಪ ನಾಗರಿಕ ಸಂಹಿತೆ ಸರಿಯಾದ ಉತ್ತರವಾಗಿದೆ. ದೇಶದ ಎಲ್ಲಾ ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ಖಚಿತಪಡಿಸಿಕೊಳ್ಳಲು ಇರುವ ಒಂದೇ ಮಾರ್ಗವೆಂದರೆ ಭಾರತದಾದ್ಯಂತ ಏಕರೂಪ ಸಂಹಿತೆ ಜಾರಿಗೆ ತರುವುದು ಎಂದು ಹೇಳಿತು.

ಅರ್ಜಿದಾರರ ಪರ ವಾದಿಸಿದ ವಕೀಲ ಪ್ರಶಾಂತ್ ಭೂಷಣ್, ಧಾರ್ಮಿಕ ಸ್ವಾತಂತ್ರ್ಯವನ್ನು ಖಾತರಿಪಡಿಸುವ ಸಂವಿಧಾನದ 25ನೇ ವಿಧಿಯಡಿ ಉತ್ತರಾಧಿ



ಕಾರಕ್ಕೆ ಸಂಬಂಧಿಸಿದ ವೈಯಕ್ತಿಕ ಕಾನೂನನ್ನು ರಕ್ಷಿಸಲಾಗುವುದಿಲ್ಲ. ಉತ್ತರಾಧಿಕಾರವು ನಾಗರಿಕ ಹಕ್ಕು ಮತ್ತು ಅಗತ್ಯ ಧಾರ್ಮಿಕ ಆಚರಣೆ ಎಂದು ಪರಿಗಣಿಸಲಾಗದು. ಶಾಯರಾ ಬಾನೋ ತೀರ್ಪಿನ ನಂತರ ದೇಶದಲ್ಲಿ ಈಗ ಆ ಪರಿಸ್ಥಿತಿ ಹೊಂದಲು ಸಾಧ್ಯವಿಲ್ಲ. ಮುಸ್ಲಿಂ ಮಹಿಳೆಯರಿಗೆ ಮುಸ್ಲಿಂ ಪುರುಷರಿಗೆ ಇರುವಂತೆ ಸಮಾನವಾದ ಹಕ್ಕುಗಳು ಇರುವುದಿಲ್ಲ ಎಂದು ಹೇಳಿದರು.

ಆದಾಗ್ಯೂ, ಆದಿವಾಸಿಗಳು ಸೇರಿದಂತೆ ವಿವಿಧ ಸಮಾಜಗಳಲ್ಲಿ ಹಲವಾರು ಅಸಮತೋಲನಗಳಿವೆ ಎಂಬುದನ್ನು ಸುಪ್ರೀಂಕೋರ್ಟ್ ಒಪ್ಪಿಕೊಂಡಿತು. ಸುಪ್ರೀಂಕೋರ್ಟ್‌ನಿಂದ ಇವುಗಳನ್ನು ತೆಗೆದುಹಾಕಬಹುದೇ? ಎಂದು ಅರ್ಜಿದಾರರನ್ನು ಪ್ರಶ್ನಿಸಿತು. ವಿಚಾರಣೆಯ ಸಂದರ್ಭದಲ್ಲಿ, ಒಬ್ಬ ಪುರುಷನಿಗೆ ಒಬ್ಬ ಹೆಂಡತಿ ಎಂಬ ನಿಯಮವನ್ನು ಎಲ್ಲಾ ಸಮುದಾಯಗಳು ಏಕರೂಪವಾಗಿ ಅನುಸರಿಸುತ್ತಿಲ್ಲ ಎಂಬುದನ್ನು ನ್ಯಾಯಾಲಯ ಪರಿಗಣಿಸಿತು.

ಆದರೆ ಎಲ್ಲಾ ದ್ವಿಪತ್ನಿ ವಿವಾಹಗಳನ್ನು ಅಸಾಂವಿಧಾನಿಕವೆಂದು ನ್ಯಾಯಾಲಯ ಘೋಷಿಸಬಹುದೇ ಎಂಬುದು ಇದರ ಅರ್ಥ ಅಲ್ಲ. ಆದ್ದರಿಂದ ನಿರ್ದೇಶನ ತತ್ವಗಳನ್ನು ಜಾರಿಗೆ ತರಲು ನಾವು ಶಾಸಕಾಂಗಕ್ಕೆ ಅಧಿಕಾರವನ್ನು ನೀಡಬೇಕಾಗುತ್ತದೆ ಎಂದು ನ್ಯಾಯಮೂರ್ತಿ ಬಾಗ್ಚಿ ಹೇಳಿದರು. ಏಕರೂಪ ನಾಗರಿಕ ಸಂಹಿತೆ ಜಾರಿಗೆ ನ್ಯಾಯಾಲಯ ಈಗಾಗಲೇ ಶಾಸಕಾಂಗಕ್ಕೆ ಶಿಫಾರಸು ಮಾಡಿದೆ ಎಂದು ಅವರು ಹೇಳಿದರು.

ಮುಸ್ಲಿಂ ಮಹಿಳೆಯರೇ ಸಲ್ಲಿಸಿರುವ ಅರ್ಜಿಯಲ್ಲಿ ನ್ಯಾಯಾಂಗ ಮಧ್ಯಪ್ರವೇಶ ಮಾಡುವುದು ಸೂಕ್ತ ಎಂದು ಪೀಠ ಹೇಳಿತು. ಇದಕ್ಕೆ ಉತ್ತರಿಸಿದ ಭೂಷಣ್, ಅರ್ಜಿದಾರರಲ್ಲಿ ಕೆಲವರು ಮುಸ್ಲಿಂ ಮಹಿಳೆಯರಿದ್ದಾರೆ ಎಂದರು.

ವಾದಗಳನ್ನು ಆಲಿಸಿದ ನ್ಯಾಯಾಲಯವು, ಶರಿಯತ್ ಉತ್ತರಾಧಿಕಾರದ ನಿಬಂಧನೆಗಳನ್ನು ರದ್ದುಗೊಳಿಸಿದರೆ ಪರಿಹಾರಗಳೇನು ಎಂಬ ಸಲಹೆಗಳನ್ನು ಸೇರಿಸಲು ಅರ್ಜಿಯನ್ನು ತಿದ್ದುಪಡಿ ಮಾಡಲು ಸೂಚಿಸಿತು. ಭೂಷಣ್ ಅವರು ಅರ್ಜಿಯನ್ನು ತಿದ್ದುಪಡಿ ಮಾಡಲು ಒಪ್ಪಿದ ನಂತರ ಪೀಠವು ಮುಂದಿನ ವಿಚಾರಣೆಯನ್ನು ಮುಂದೂಡಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಒಡಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಮೆಜೆಸ್ಟಿಕ್–2 (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓರಿಯೋ (ಕ) + ಜಯಕೃಷ್ಣ (ಕ)	2+2 ಪ್ರದರ್ಶನಗಳು

ನ್ಯಾಯಾಂಗ ಭ್ರಷ್ಟಾಚಾರ ಕುರಿತು ಅಧ್ಯಾಯ ವಿವಾದ

8ನೇ ತರಗತಿ ಪಠ್ಯಪುಸ್ತಕ ಹಿಂಪಡೆದು ಕ್ಷಮೆಯಾಚಿಸಿದ ಎನ್‌ಸಿಇಆರ್‌ಟಿ

ನವದೆಹಲಿ, ಮಾ.10–ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ (NCERT) ಇತ್ತೀಚೆಗೆ ಪ್ರಕಟಿಸಿದ್ದ 8ನೇ ತರಗತಿಯ ಸಾಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಬಗ್ಗೆ ಒಂದು ಅಧ್ಯಾಯವನ್ನು ಸೇರಿಸಿ ವಿವಾದ ಉಂಟಾದ ಹಿನ್ನೆಲೆಯಲ್ಲಿ ಸಾರ್ವಜನಿಕವಾಗಿ ಬೇಷರತ್ತಾಗಿ ಕಾರಣವಿಲ್ಲದೆ ಕ್ಷಮೆಕೇಳಿ ಸಂಪೂರ್ಣ ಪುಸ್ತಕವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಘೋಷಿಸಿದೆ.

Exploring Society: India and Beyond (Grade 8, Part 2) ಪಠ್ಯದಲ್ಲಿ 'ನಮ್ಮ ಸಮಾಜದಲ್ಲಿ ನ್ಯಾಯಾಂಗದ ಪಾತ್ರ' ಅಧ್ಯಾಯವಿದ್ದು, ಅದರಲ್ಲಿ ಭ್ರಷ್ಟಾಚಾರ, ಪ್ರಕರಣಗಳ ಹೆಚ್ಚಿನ ಬಾಕಿ ಪ್ರಮಾಣ ಮತ್ತು ನ್ಯಾಯಾಧೀಶರ ಕೊರತೆ ಮುಂತಾದವುಗಳನ್ನು ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳೆಂದು ಉಲ್ಲೇಖಿಸಲಾಗಿತ್ತು.

ಪ್ರಕಟಣೆಯಲ್ಲಿ ಎನ್‌ಸಿಇಆರ್‌ಟಿ ನಿರ್ದೇಶಕರು ಮತ್ತು ಪರಿಷತ್ತಿನ ಸದಸ್ಯರು ಬೇಷರತ್ತಾಗಿ ಸಂಪೂರ್ಣ ಕ್ಷಮೆಯಾಚನೆ ಸಲ್ಲಿಸುತ್ತೇವೆ ಎಂದು ತಿಳಿಸಿದ್ದಾರೆ. ಜೊತೆಗೆ, ಆ ಪುಸ್ತಕವನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲಾಗಿದೆ, ಅದು ಈಗ ಮಾರುಕಟ್ಟೆಯಲ್ಲಿ ಲಭ್ಯವಿರುವುದಿಲ್ಲ ಎಂದು ತಿಳಿಸಿದ್ದಾರೆ.

ಈ ವಿವಾದವು ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ಅಭಿಷೇಕ್ ಸಿಂಘ್ವಿ ಅವರು ತುರ್ತು ವಿಚಾರಣೆಗೆ ವಿಷಯವನ್ನು ಉಲ್ಲೇಖಿಸಿದ ನಂತರ ಸುಪ್ರೀಂಕೋರ್ಟ್‌ಗೆ ತಲುಪಿತು.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ಮೂವರು ನ್ಯಾಯಮೂರ್ತಿಗಳ ಪೀಠ, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರೊಂದಿಗೆ, ಪಠ್ಯಪುಸ್ತಕದಲ್ಲಿನ ನ್ಯಾಯಾಂಗದ ಕುರಿತು ಮಾಡಲಾದ 'ಆಕ್ಷೇಪಾರ್ಹ' ಉಲ್ಲೇಖಗಳ ಕುರಿತು ಸ್ವಯಂ ಪ್ರೇರಿತವಾಗಿ ಕೇಸು ಕೈಗೆತ್ತಿಕೊಂಡಿದ್ದರು.

ವಿಚಾರಣೆಯ ವೇಳೆ ಮುಖ್ಯ ನ್ಯಾಯಮೂರ್ತಿಗಳು, ಶಾಲಾ ಪಠ್ಯಕ್ರಮದಲ್ಲಿ ನ್ಯಾಯಾಂಗದಲ್ಲಿನ ಭ್ರಷ್ಟಾಚಾರದ ಉಲ್ಲೇಖಗಳನ್ನು ಸೇರಿಸಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಭೂಮಿಯ ಮೇಲೆ ಯಾರಿಗೂ ನ್ಯಾಯಾಂಗವನ್ನು ಅಪಮಾನಗೊಳಿಸಲು ಅಥವಾ ಅದರ ನೈತಿಕತೆಯನ್ನು ಕಳಂಕಗೊಳಿಸಲು ಅವಕಾಶ ನೀಡಲಾಗುವುದಿಲ್ಲ ಎಂದು ಹೇಳಿದರು.

ಸುಪ್ರೀಂ ಕೋರ್ಟ್, ಈ ಪಠ್ಯಪುಸ್ತಕದ ಯಾವುದೇ ಮುಂದಿನ ಪ್ರಕಟಣೆ, ಮರುಮುದ್ರಣ ಅಥವಾ ಡಿಜಿಟಲ್ ವಿತರಣೆ ಮೇಲೆ ಸಂಪೂರ್ಣ ನಿಷೇಧ ಹೇರಿತು. ಈ ವಿಷಯವು ಸಂಸ್ಥೆಗೆ ಹಾನಿ ಉಂಟುಮಾಡಿದೆ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು.

ಇದೇ ವೇಳೆ, ವಿವಾದಾತ್ಮಕ ಅಧ್ಯಾಯದ ಬಗ್ಗೆ ಕೇಂದ್ರ ಸರ್ಕಾರವೂ ಆತಂಕ ವ್ಯಕ್ತಪಡಿಸಿತು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಈ ವಿಭಾಗವನ್ನು ರಚಿಸಲು ಹೊಣೆಗಾರರಾಗಿರುವವರನ್ನು ಗುರುತಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮೈಸೂರು ಲಯನ್ಸ್ ಜಿಲ್ಲೆ ವತಿಯಿಂದ ಮಹಿಳಾ ದಿನಾಚರಣೆ, ಸಾಧಕರಿಗೆ ಸನ್ಮಾನ



ಮೈಸೂರಿನ ಲಯನ್ಸ್ ವೆಸ್ಟ್ ಸೇವಾನಿಕತನ ಶಾಲೆಯಲ್ಲಿ ಲಯನ್ಸ್ ಜಿಲ್ಲೆ 317 ಜಿ ವತಿಯಿಂದ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.10– ಮೈಸೂರಿನ ಲಯನ್ಸ್ ಜಿಲ್ಲೆ 317 ಜಿ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವನ್ನು ನಗರದ ಲಯನ್ಸ್ ವೆಸ್ಟ್ ಸೇವಾನಿಕೇತನ ಶಾಲೆಯಲ್ಲಿ ಆಯೋಜಿಸಲಾಗಿತ್ತು

ಲಯನ್ಸ್ ಮಹಿಳಾ ಮತ್ತು ಕುಟುಂಬ ಘಟಕದ ಅಧ್ಯಕ್ಷರಾದ ಲಯನ್ ಪಿ.ರಮೇಶ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ಲಯನ್ಸ್ ಜಿಲ್ಲೆ 317ಜಿ ಜಿಲ್ಲಾ ಗವರ್ನರ್ ಲಯನ್ ಕೆ.ಎಲ್.ರಾಜಶೇಖರ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎಸ್.ಲತಾ ಹಾಗೂ ಡಾ.ರಚನಾ ಮಹೇಶ್ ಅವರು ಮಹಿಳೆಯರ ಸಾಧನೆ, ಸಮಾಜದಲ್ಲಿ ಅವರ ಮಹತ್ವದ ಪಾತ್ರ ಹಾಗೂ ಮಹಿಳಾ ಸಶಕ್ತೀಕರಣದ ಅಗತ್ಯತೆ ಬಗ್ಗೆ ವಿವರಿಸಿದರು. ಈ ವೇಳೆ ಮಹಿಳೆಯರು ಹಾಡು–ನೃತ್ಯದೊಂದಿಗೆ ಸಂಭ್ರಮಿಸಿದರು.

ಬಳಿಕ ಸಮಾಜದ ವಿವಿಧ ಕ್ಷೇತ್ರಗಳ ಸಾಧಕರಾದ ಡಾ.ಎಂ.ಎನ್.ಗೀತಾ ರಾಜಶೇಖರ್, ಅನುರಾಧಾ ನಂದೀಶ್, ಪ್ರತಿಮಾ ರಮೇಶ್, ಸಿ.ಮಂಗಳಾ, ವಿಜಯಲಕ್ಷ್ಮೀ, ಶಿಲ್ಪಾ ಮಹದೇವಸ್ವಾಮಿ, ಡಾ.ಬಿ. ನಿರ್ಮಲಾ, ಜ್ಯೋತಿ ಮಂಜು ನಾಥ್, ಕೆಎಸ್. ಪ್ರತಿಮಾ ರಮೇಶ್, ರಜನಿ ರಾಜ್, ಡಾ.ರಚನಾ ಮಹೇಶ್, ಎಸ್.ಲತಾ, ಹೆಚ್.ವಿ.ಸರಸ್ವತಿ, ಶೋಭಾರಾಣಿ ಜೈಪ್ರಕಾಶ್ ಹಾಗೂ ಸುಜಾತಾ ಕೃಷ್ಣ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಲಯನ್ ಕೆ.ದೇವೇಗೌಡ, ಸುಬ್ರಹ್ಮಣ್ಯ, ಎಸ್.ಮಧಿದೇವ ಕುಮಾರ್, ಟಿ.ನಾರಾಯಣಸ್ವಾಮಿ, ಎನ್.ಕೃಷ್ಣೇಗೌಡ, ಎಂ.ಎನ್.ಜೈಪ್ರಕಾಶ್, ಟಿ.ಹೆಚ್.ವೆಂಕಟೇಶ್, ಕೆ.ಎಸ್.ಸುನಿಲ್ ಕುಮಾರ್, ನಂದೀಶ್, ಧರ್ಮರಾಜ್ ಮತ್ತಿತರರು ಪಾಲ್ಗೊಂಡಿದ್ದರು.

ಡ್ರಗ್ಸ್ ತಯಾರಿಸುತ್ತಿದ್ದ ಕಾರ್ಖಾನೆ ಸೇರಿ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿ ಡ್ರೋನ್ ನಿಗಾ

ಒಬ್ಬ ಪಿಎಸ್‌ಐ, ನಾಲ್ವರು ಕಾನ್ಸ್‌ಟೇಬಲ್‌ಗಳ ನಿಯೋಜನೆ

ಮೈಸೂರು, ಮಾ.10(ಬಿಎಲ್ ಯು)– ಡ್ರಗ್ಸ್ ತಯಾರಿಸುತ್ತಿದ್ದ ಕಾರ್ಖಾನೆ ಸೇರಿದಂತೆ ಕೈಗಾರಿಕಾ ಬಡಾವಣೆಯ ಇತರೆಡೆ ಸ್ಥಳಗಳ ದೃಶ್ಯಗಳನ್ನು ಡ್ರೋನ್ ಮೂಲಕ ಸೆರೆ ಹಿಡಿಯುವ ಕಾರ್ಯಾಚರಣೆಯನ್ನು ಮೈಸೂರಿನ ಹೆಬ್ಬಾಳು ಪೊಲೀಸರು ಇಂದಿನಿಂದ ಆರಂಭಿಸಿದ್ದಾರೆ.

ಡ್ರೋನ್ ಸೆರೆ ಹಿಡಿಯುವ ಪರಿಣಿತರ ಮೂಲಕ ಈ ಕಾರ್ಯಾಚರಣೆ ಕೈಗೊಳ್ಳಲಾಗಿದ್ದು, ಒಬ್ಬ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹಾಗೂ ನಾಲ್ವರು ಕಾನ್ಸ್‌ಟೇಬಲ್‌ಗಳನ್ನು ಈ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದೆ.

ಡ್ರಗ್ಸ್ ತಯಾರಿಸುತ್ತಿದ್ದ ಕಾರ್ಖಾನೆ ಮಾತ್ರವಲ್ಲದೆ ಇಡೀ ಹೆಬ್ಬಾಳು ಇಂಡಸ್ಟ್ರಿಯಲ್ ಏರಿಯಾದಲ್ಲಿ ಡ್ರೋನ್ ಮೂಲಕ ಅಲ್ಲಿನ ದೃಶ್ಯಗಳನ್ನು ಸೆರೆ ಹಿಡಿಯಲಾಗುತ್ತಿದೆ. ಈ ಕಾರ್ಯಾಚರಣೆ ಇಂದಿನಿಂದ ಆರಂಭವಾಗಿದ್ದು, ಪೂರ್ಣವಾಗಿ ಮುಗಿಯುವ ತನಕ ಮುಂದುವರೆಯಲಿದೆ.

ಕಾರ್ಖಾನೆ ಮುಂದೆ ಅಲ್ಲಿನ ಚಲನವಲನ ಹಾಗೂ ಚಟುವಟಿಕೆಗಳು ಕಾಣಿಸುವುದಿಲ್ಲ. ಆದ ಕಾರಣ ಡ್ರೋನ್ ಮೂಲಕ ಅಲ್ಲಿನ ವಾತಾವರಣವನ್ನು ಸೆರೆ ಹಿಡಿಯಲಾಗುತ್ತಿದೆ. ಏನಾದರೂ ಅನುಮಾನ ಕಂಡು ಬಂದರೆ ಕಾರ್ಖಾನೆ ಒಳಗೆ ಹೋಗಿ ಇಂಚಿಂಚು ಜಾಗವನ್ನು ಪೊಲೀಸರು ಪರಿಶೀಲನೆ ಮಾಡಲಿದ್ದಾರೆ.

ಹೆಬ್ಬಾಳು ಕೈಗಾರಿಕಾ ಬಡಾವಣೆ ಮಾತ್ರವಲ್ಲದೆ ವಸತಿ ಬಡಾವಣೆಗಳಲ್ಲಿ ಕೂಡ ಡ್ರೋನ್ ಕಾರ್ಯಾಚರಣೆ ನಡೆಯಲಿದೆ. ಮರೆಯಲ್ಲಿ ಕುಳಿತು ಡ್ರಗ್ಸ್, ಗಾಂಜಾ ಸೇವಿಸುವವರನ್ನು ಕೂಡ ಈ ಮೂಲಕ ಪತ್ತೆ ಹಚ್ಚುವ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ನಾಳೆಯಿಂದ ರಾಷ್ಟ್ರೀಯ ಏಕೀಕರಣ ಶಿಬಿರ

ಮೈಸೂರು,ಮಾ.10(ಜಿಎ)–ರಾಜ್ಯ ಯುವ ಸಬಲೀಕರಣ ಇಲಾಖೆ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಸಂಯುಕ್ತಾಶ್ರಯದಲ್ಲಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಮಾ.12ರಿಂದ 18ರವರೆಗೆ ರಾಷ್ಟ್ರೀಯ ಏಕೀಕರಣ ಶಿಬಿರ ಆಯೋಜಿಸಲಾಗಿದೆ ಎಂದು ಕುಲಸಚಿವ ಡಾ.ಬಿ. ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.12ರಂದು ಬೆಳಿಗ್ಗೆ 10 ಗಂಟೆಗೆ ಪದ್ಮ ಪ್ರಶಸ್ತಿ ಪುರಸ್ಕೃತ ಅಂಕೇಗೌಡರು ಶಿಬಿರವನ್ನು ಉದ್ಘಾಟಿಸುವರು. ಕುಲಪತಿ ಡಾ.ಹೆಚ್.ಬಸವನಗೌಡಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ.ಪ್ರತಾಪ್ ಲಿಂಗಯ್ಯ, ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್‌ಕುಮಾರ್, ಎನ್‌ಸಿಸಿ ಕಾರ್ಯಕ್ರಮ ಸಂಯೋಜಕ ಡಾ.ಕೆ.ಎಲ್. ಕೃಷ್ಣ ಆಗಮಿಸಲಿದ್ದಾರೆ ಎಂದರು.

ಶಿಬಿರದಲ್ಲಿ ದೆಹಲಿ, ರಾಜಸ್ತಾನ, ತಮಿಳು ನಾಡು, ಗೋವಾ, ಮಹಾರಾಷ್ಟ್ರ ಹಾಗೂ ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಿಂದ 25ಕ್ಕೂ ಹೆಚ್ಚು ವಿವಿಗಳ 150ಕ್ಕೂ ಹೆಚ್ಚು ಸ್ವಯಂ ಸೇವಕರು, ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿಗಳು ಪಾಲ್ಗೊಳ್ಳುತ್ತಿದ್ದಾರೆ. ಇವರು ತಮ್ಮ ತಮ್ಮ ರಾಜ್ಯಗಳ ಸಾಂಸ್ಕೃತಿಕ ಸೊಗಡನ್ನು ಪರಿಚಯಿಸಲಿದ್ದಾರೆ. ಇವರಿಗೆ ಕ್ಯಾನ್ಸರ್ ಜಾಗೃತಿ, ಕಾನೂನು ಅರಿವು, ಸಿರಿಧಾನ್ಯ ಬಳಕೆ ಮಹತ್ವ ವಿವರಿಸುವಂತಹ ಅನೇಕ ಕಾರ್ಯಕ್ರಮಗಳು ಜರುಗಲಿವೆ.

ಮಾ.18ರ ಬೆಳಗ್ಗೆ 10.30ಕ್ಕೆ ಸಮಾರೋಪ ಸಮಾರಂಭ ಜರುಗಲಿದ್ದು, ಮುಖ್ಯ ಅತಿಥಿಯಾಗಿ ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ.ಪ್ರತಾಪ್ ಲಿಂಗಯ್ಯ ಭಾಗಹಿಸಲಿದ್ದಾರೆ. ಸಮಾರೋಪ ಭಾಷಣವನ್ನು ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಡಾ.ಗಿರಿಧರ್ ಉಪಾಧ್ಯಾಯ ಮಾಡಲಿದ್ದಾರೆ ಎಂದರು. ಗೋಷ್ಠಿಯಲ್ಲಿ ಪ್ರಾಚಾರ್ಯ ಡಾ.ಟಿ.ಎಂ.ಪ್ರಮೋದ್‌ಕುಮಾರ್, ಡಾ.ಕೆ.ಎಲ್.ಕೃಷ್ಣ ಉಪಸ್ಥಿತರಿದ್ದರು.

ವಾಣಿಜ್ಯ ಬಳಕೆ ಸಿಲಿಂಡರ್ ವ್ಯತ್ಯಯ; ಕೇಂದ್ರಕ್ಕೆ ಸಿಎಂ ಸಿದ್ದರಾಮಯ್ಯ ಪತ್ರ

ಬೆಂಗಳೂರು: ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಪೂರೈಕೆ ಸ್ಥಗಿತಗೊಂಡಿದ್ದರಿಂದ ಬೆಂಗಳೂರು ಮಹಾನಗರದಲ್ಲಿ ಹೋಟೆಲ್, ರೆಸ್ಟೋರೆಂಟ್, ಕೆಟರಿಂಗ್‌ಗಳಿಗೆ ತೊಂದರೆಯಾಗುತ್ತಿದೆ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್‌ಪುರಿ ಅವರಿಗೆ ಬರೆದ ಪತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದ್ದಾರೆ.



ಈಗ ತಲೆದೋರಿರುವ ಸಮಸ್ಯೆಗೆ ತಕ್ಷಣ ಪರಿಹಾರ ಸೂಚಿಸುವಂತೆ ಸಚಿವರಿಗೆ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ. ತೈಲ ಮಾರುಕಟ್ಟೆ ಕಂಪನಿಗಳು ಪೂರೈಸುವ ಎಲ್‌ಪಿಜಿಯನ್ನು ಕೇವಲ ಗೃಹ ಬಳಕೆದಾರರಿಗೆ ಮಾತ್ರ ಮಾರಾಟ ಮಾಡಬೇಕೆಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಆದೇಶಿಸಿದೆ. ದೇಶದ ಪ್ರತಿ ಮನೆಗಳಿಗೆ ಅಡೆತಡೆಯಿಲ್ಲದೆ ಅಡುಗೆ ಅನಿಲ ಪೂರೈಕೆ ಮಾಡಬೇಕೆಂಬುದು ಈ ಆದೇಶದ ಹಿಂದಿನ ಉದ್ದೇಶವಾದರೂ ಇದರ ಅನುಷ್ಠಾನದಿಂದಾಗಿ ಬೆಂಗಳೂರಿನಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಕೊರತೆಯಾಗಿದೆ ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

ವಾಣಿಜ್ಯ ಬಳಕೆಯ ಸಿಲಿಂಡರ್ ಪಡೆಯಲು ಸಾಧ್ಯವಾಗುತ್ತಿಲ್ಲ ವೆಂದು ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘಗಳು ವರದಿ ಮಾಡಿವೆ. ಸಿಲಿಂಡರ್ ಪೂರೈಕೆ ಶೀಘ್ರವಾಗಿ ಪುನರಾರಂಭಗೊಳ್ಳದಿದ್ದರೆ ಅನೇಕ ಹೋಟೆಲ್ ಗಳು ತಮ್ಮ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕಾಗಬಹುದು ಎಂಬ ಆತಂಕವನ್ನೂ ವ್ಯಕ್ತಪಡಿಸಿವೆ ಎಂದಿದ್ದಾರೆ. ಬೆಂಗಳೂರು ನಗರದಲ್ಲಿ ಲಕ್ಷಾಂತರ ಜನರು ತಮ್ಮ ದಿನ ನಿತ್ಯದ ಆಹಾರಕ್ಕೆ ಹೋಟೆಲ್, ರೆಸ್ಟೋರೆಂಟ್, ಮೆಸ್ ಮತ್ತು ಕೆಟರಿಂಗ್‌ಗಳ ಮೇಲೆ ಅವಲಂಬಿತರಾಗಿದ್ದಾರೆ ಎಂದೂ ಸಚಿವರ ಗಮನಕ್ಕೆ ತಂದಿದ್ದಾರೆ.

ರಾಜ್ಯದಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಬೇಡಿಕೆಯು ಸಾಂಪ್ರದಾಯಿಕವಾಗಿ ಐಒಸಿಎಲ್, ಎಚ್‌ಪಿಸಿಎಲ್, ಮತ್ತು ಬಿಪಿಸಿಎಲ್ ಕಂಪನಿಗಳ ಪೂರೈಕೆಯನ್ನು ಅವಲಂಬಿಸಿದೆ. ಈ ಪೂರೈಕೆಯಲ್ಲಿ ದಿಢೀರ್ ಉಂಟಾಗಿರುವ ವ್ಯತ್ಯಯವು ಬೆಂಗಳೂರಿನ ಹೋಟೆಲ್‌ಗಳು, ಕೆಟರಿಂಗ್‌ಗಳ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ ಎಂದು ಹೇಳಿದ್ದಾರೆ.

ಪ್ರತಿದಿನ ಊಟಕ್ಕಾಗಿ ಹೋಟೆಲ್ ಮತ್ತು ಮೆಸ್ ಸೌಲಭ್ಯಗಳನ್ನು ಅವಲಂಬಿಸಿರುವ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು, ಉದ್ಯೋಗಿಗಳ ಮೇಲೆಯೂ ಇದು ಪರಿಣಾಮ ಬೀರುತ್ತದೆ. ಇದರ ಜೊತೆಗೆ, ಆಹಾರ ತಯಾರಿಕೆಗಾಗಿ ವಾಣಿಜ್ಯ ಬಳಕೆಯ ಸಿಲಿಂಡರ್‌ಗಳನ್ನು ಅವಲಂಬಿಸಿರುವ ಕಲ್ಯಾಣ ಮಂಟಪಗಳು, ವಸತಿ ನಿಲಯಗಳು ಸಹ ಅನಿಶ್ಚಿತತೆ ಎದುರಿಸುತ್ತಿವೆ. ವಿಶೇಷವಾಗಿ ನಿಗದಿತ ಕಾರ್ಯಕ್ರಮಗಳಿಗೆ ಇದರಿಂದ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ.

ಬೆಂಗಳೂರಿನಂತಹ ಮಹಾನಗರದಲ್ಲಿ ವಾಣಿಜ್ಯ ಬಳಕೆಯ ಸಿಲಿಂಡರ್ ಮೇಲಿನ ಅವಲಂಬನೆಯ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಛತ್ರಗಳು, ಸಮುದಾಯ ಭವನಗಳು ಮತ್ತು ಇತರ ವಾಣಿಜ್ಯ ಸಂಸ್ಥೆಗಳಿಗೆ ಸಾಕಷ್ಟು ಸಿಲಿಂಡರ್ ಪೂರೈಕೆಯಾಗುವುದನ್ನು ನೀವು ಖಚಿತಪಡಿಸಬೇಕು ಎಂದು ಸಚಿವರಿಗೆ ಮನವಿ ಮಾಡಿದ್ದಾರೆ.

ಇಂಧನ ಸಮರ್ಪಕ ಪೂರೈಕೆ ನಿಟ್ಟಿನಲ್ಲಿ ಕೇಂದ್ರದ ಮಹತ್ವದ ಕ್ರಮ

ವಾಣಿಜ್ಯೇತರ ಬೇಡಿಕೆ ಪರಿಶೀಲನೆಗೆ ತೈಲ ಕಂಪನಿಗಳ ಸಮಿತಿ ರಚನೆ

ಹೊಸದಿಲ್ಲಿ: ಇಸ್ರೇಲ್ ಇರಾನ್ ಯುದ್ಧ ಹಿನ್ನಲೆ ಇಂಧನ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯ ಹಾಗೂ ಎಲ್‌ಪಿಜಿ ಸಿಲಿಂಡರ್ ಸಮಸ್ಯೆ ಸರಿದೂಗಿಲು ಕೇಂದ್ರ ಪೆಟ್ರೋಲಿಯಂ ಸಚಿವಾಲಯವು ಮಹತ್ವದ ಕ್ರಮಗಳನ್ನು ಕೈಗೊಂಡಿದೆ. ತೈಲ ಸಂಸ್ಕರಣಾಗಾರಗಳಲ್ಲಿ ಉತ್ಪಾದನೆಯನ್ನು ಶೇ.10ರಷ್ಟು ಹೆಚ್ಚಿಸಿದೆ. ಜೊತೆಗೆ ವಾಣಿಜ್ಯೇತರ ವಲಯಗಳ ಬೇಡಿಕೆಗೆ ಸಮಿತಿ ರಚನೆ ಮಾಡಿದೆ. ಈ ಮೂಲಕ ಬಿಕ್ಕಟ್ಟು ಪರಿಹಾರವಾಗಿದೆ ಎಂದು ಸರ್ಕಾರ ತಿಳಿಸಿದೆ.

ಈ ಬಗ್ಗೆ ಪೆಟ್ರೋಲಿಯಂ ಸಚಿವಾ ಲಯ ಪ್ರಕಟಣೆ ನೀಡಿದ್ದು, ಗೃಹ ಬಳಕೆಯ ಗ್ರಾಹಕರಿಗೆ ಅಡೆತಡೆಯಿಲ್ಲದೆ ಸಿಲಿಂಡರ್ ಪೂರೈಕೆ ಮಾಡುವುದು ಸರ್ಕಾರದ ಮೊದಲ ಆದ್ಯತೆಯಾಗಿದೆ. ಎಲ್‌ಪಿಜಿ ಉತ್ಪಾದನೆಯನ್ನು ಹೆಚ್ಚಿಸಲು ಸಚಿವಾಲಯ ಕ್ರಮ ಕೈಗೊಂಡಿದ್ದು, ದೇಶದ ಗೃಹ ಬಳಕೆಯ ಗ್ರಾಹಕರಿಗೆ ಮೊದಲ ಆದ್ಯತೆಯ ಮೇರೆಗೆ ಪೂರೈಕೆ ಮಾಡಲಾಗುವುದು. ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳಂತಹ ವಾಣಿಜ್ಯೇತರ ವಲಯಗಳಿಗೆ ಅವರ ಬೇಡಿಕೆಗೆ ಅನುಗುಣವಾಗಿ ಎಲ್‌ಪಿಜಿ ಪೂರೈಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದೆ.

ವಿಶೇಷ ಸಮಿತಿ ರಚನೆ: ಇತರ ವಾಣಿಜ್ಯೇತರ ವಲಯಗಳ ಬೇಡಿಕೆಗಳನ್ನು ಪರಿಶೀಲಿಸಲು ಮತ್ತು ಪೂರೈಕೆಯಲ್ಲಿ ಆದ್ಯತೆ ನಿಗದಿಪಡಿಸಲು ಮೂರು ಪ್ರಮುಖ ತೈಲ ಕಂಪನಿಗಳ ಕಾರ್ಯನಿರ್ವಾಹಕ ನಿರ್ದೇಶಕರನ್ನು ಒಳಗೊಂಡ ಉನ್ನತ ಮಟ್ಟದ



ಸಮಿತಿಯನ್ನು ರಚಿಸಲಾಗಿದೆ.

ಸಮಿತಿಯ ಸದಸ್ಯರು: ಕೆ.ಶೈಲೇಂದ್ರ–ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್, ಟಿ.ವಿ.ಪಾಂಡಿಯನ್–ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್, ಧ್ರುವ್ ಕಪಿಲ್–ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್.

ಮನವಿ ಸಲ್ಲಿಸುವ ವಿಧಾನ: ಇತರ ವಲಯಗಳಲ್ಲಿ ಎಲ್‌ಪಿಜಿ ಅಗತ್ಯವಿದ್ದಲ್ಲಿ, ಸಂಬಂಧಪಟ್ಟವರು ಸಮಿತಿಯ ಸದಸ್ಯರ ಇಮೇಲ್ ಐಡಿಗಳ ಮೂಲಕ ಮನವಿ ಸಲ್ಲಿಸಬಹುದು. ಆಮದು ಮಾಡಿ ಕೊಳ್ಳುವ ಉತ್ಪನ್ನಗಳ ಲಭ್ಯತೆಯ ಮೇಲೆ ವಾಣಿಜ್ಯೇತರ ಪೂರೈಕೆ ಅವಲಂಬಿತ ವಾಗಿರುವುದರಿಂದ ಪ್ರತಿಯೊಂದು ಬೇಡಿಕೆಯನ್ನೂ ಈಡೇರಿಸಲು ಸಾಧ್ಯವಾಗದಿರಬಹುದು. ಆದರೆ, ಅರ್ಹತೆ ಮತ್ತು ಲಭ್ಯತೆಯ ಆಧಾರದ ಮೇಲೆ ಸಮಿತಿಯು ಸೂಕ್ತ ನಿರ್ಧಾರ ಕೈಗೊಳ್ಳಲಿದೆ ಎಂದು ತಿಳಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ಇಂಧನ ಪೂರೈಕೆಯಲ್ಲಿ ಉಂಟಾಗಿರುವ ಅನಿಶ್ಚಿತತೆಯ ನಡುವೆಯೂ ಸಾಮಾನ್ಯ ಜನರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು ಸರ್ಕಾರ ಮತ್ತು ತೈಲ ಕಂಪನಿಗಳು ಈ ಕ್ರಮಕ್ಕೆ ಮುಂದಾಗಿವೆ.

ದೇವೇಗೌಡರು ಹಣಕಾಸು ಖಾತೆಯನ್ನ ನನಗೆ ಬಲವಂತವಾಗಿ ವಹಿಸಿದ್ದರು...!

ಮುಖ್ಯಮಂತ್ರಿ ಸಿದ್ದರಾಮಯ್ಯ ಮಹತ್ವದ ವಿಷಯ ಬಹಿರಂಗ

ಬೆಂಗಳೂರು, ಮಾ.10(ಕೆಎಂಶಿ)– ಎಚ್.ಡಿ.ದೇವೇಗೌಡರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ತಮಗೆ ಬಲವಂತವಾಗಿ ಹಣಕಾಸು ಖಾತೆ ವಹಿಸಿದ್ದರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಬಹಿರಂಗಪಡಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆ ವೇಳೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮಾಡಿದ ಪ್ರಸ್ತಾವಕ್ಕೆ ಮಧ್ಯಪ್ರವೇಶಿಸಿ ಮಾತನಾಡಿದ ಮುಖ್ಯಮಂತ್ರಿ, ನನಗೆ ಹಣಕಾಸು ಖಾತೆ ಬೇಡ, ಕಂದಾಯ ಇಲಾಖೆ ಹೊಣೆಗಾರಿಕೆ ಕೊಡಿ ಎಂದು ಮನವಿ ಮಾಡಿದ್ದೆ.

ಆದರೆ, ಜಾಲಪ್ಪ ತಮಗೇ ಕಂದಾಯ ಇಲಾಖೆ ಬೇಕೆಂದು ಪಟ್ಟು ಹಿಡಿದಾಗ, ಗೌಡರು, ಬಲವಂತವಾಗಿ ನೀನು ಹಣಕಾಸು ಇಲಾಖೆ ವಹಿಸಿಕೋ ಎಂದರು.

ನನಗೆ ನಂಬಿಕಸ್ಥನೊಬ್ಬ ಇಂತಹ ಇಲಾಖೆ ನಿರ್ವಹಣೆ ಮಾಡಬೇಕು. ಇದರ ವಿಚಾರ ನಿನಗೆ ತಿಳಿದಿಲ್ಲ. ನೀನಿ ಖಾತೆ ನಿರ್ವಹಣೆ ಮಾಡು ಎಂದು ವಹಿಸಿಕೊಟ್ಟರು. ರಾಜ್ಯದಲ್ಲಿ ಜನತಾ ದಳ ಅಧಿಕಾರಕ್ಕೆ ಬಂದಾಗ ದೇವೇಗೌಡರು ಮುಖ್ಯಮಂತ್ರಿ ಆದ ನಂತರ ಯಾರಿಗೆ



ಯಾವ ಖಾತೆ ವಹಿಸಬೇಕೆಂಬ ಚರ್ಚೆ ನಡೆಸಲು ಕೋಲಾರ'ದ ದೇವರಾಜ ಅರಸ್ ವೈದ್ಯಕೀಯ ಕಾಲೇಜಿನಲ್ಲಿ ಸಭೆ ಸೇರಿದ್ದೆವು. ಆ ಸಭೆಯಲ್ಲಿ ದೇವೇ ಗೌಡರು, ನಾನೂ, ಎಂ.ಪಿ.ಪ್ರಕಾಶ್, ಪಿ.ಜಿ.ಆರ್. ಸಿಂಧ್ಯಾ ಉಪಸ್ಥಿತರಿದ್ದು, ಯಾರಿಗೆ ಯಾವ ಖಾತೆ ಎಂಬ ನಿರ್ಣಯ ಆಯಿತು.

ಅಂದು ಜಾಲಪ್ಪ ಕಂದಾಯ ಇಲಾಖೆಗೆ ಪಟ್ಟು ಹಿಡಿಯದಿದ್ದರೆ, ನಾನು 17 ಮುಂಗಡಪತ್ರಗಳನ್ನು ಮಂಡಿಸಲು ಸಾಧ್ಯವಾಗುತ್ತಿರಲಿಲ್ಲ.

100 ಕುರಿ ಎಣಿಸಲು ಬಾರದವನಿಗೆ ಹಣಕಾಸು ಇಲಾಖೆ ವಹಿಸಲಾಗಿದೆ ಎಂಬ ಟೀಕೆಗಳೂ ಬಂದವು. ಆದರೆ, ಆ ಟೀಕೆಗಳಿಗೆ ನಾನು, ದಾಖಲೆಯ ಮುಂಗಡಪತ್ರ ಮಂಡಿಸಿ ಉತ್ತರ ನೀಡಿದ್ದೇನೆ.

ಬಜೆಟ್ ಯೋಜನಾ ಗಾತ್ರ ಕೇವಲ ಸಾವಿರ ಕೋಟಿ ರೂ.ಗಳಿಂದ ಆರಂಭಗೊಂಡು ಇಂದು 4.47 ಲಕ್ಷ ಕೋಟಿ ರೂ. ಮುಂಗಡಪತ್ರ ನೀಡಿದ್ದೇನೆ.

ನನ್ನ ಪ್ರತೀ ಮುಂಗಡಪತ್ರದಲ್ಲೂ ಆರೋಗ್ಯ, ಶಿಕ್ಷಣ, ಕೃಷಿ, ನೀರಾವರಿ ಅಭಿವೃದ್ಧಿ ಜೊತೆಗೆ ಎಲ್ಲಾ ಇಲಾಖೆಗಳಿಗೆ ಒತ್ತು ನೀಡಿರುವುದಲ್ಲದೆ, ಬಡವರ ಕಷ್ಟಗಳಿಗೆ ಸ್ಪಂದಿಸುವ ಕಾರ್ಯಕ್ರಮಗಳನ್ನು ನೀಡಿದ್ದೇನೆ ಎಂದರು.

ದೇವೇಗೌಡರು ಅವಕಾಶ ಕೊಟ್ಟಿದ್ದರಿಂದಾಗಿ ಇಂದು ನೀವು ಹೆಚ್ಚು ಬಜೆಟ್ ಮಂಡಿಸಿ ದಾಖಲೆ ಮಾಡಲು ಸಾಧ್ಯವಾಗಿದೆ. ಗೌಡರಿಗೆ ಆಗಲೇ ಈ ಬಗ್ಗೆ ಸುಳಿವು ಸಿಕ್ಕಿತ್ತು ಎನ್ನಿಸುತ್ತದೆ. ಇದಕ್ಕಾಗಿ ನೀವು ಅವರಿಗೆ ಈ ಮೂಲಕವಾದರೂ ವಂದನೆ ಸಲ್ಲಿಸಿ ಎಂದು ಅಶೋಕ್ ಸಲಹೆ ನೀಡಿದರು.

ಸಿದ್ದರಾಮಯ್ಯ ಬಜೆಟ್‌ಗೆ ಡಿ.ಕೆ.ಶಿವಕುಮಾರ್ ಬೆಂಬಲ

ವಿಪಕ್ಷಗಳ ಮಾರ್ಮಿಕ ನುಡಿ

ಬೆಂಗಳೂರು, ಮಾ.10(ಕೆಎಂಶಿ)– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ದೆಹಲಿ ಭೇಟಿ ವೇಳೆ ಸಿಹಿ ಸುದ್ದಿ ಸಿಕ್ಕಿರಬಹುದು. ಅದಕ್ಕಾಗಿ ಸದನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಬೆಂಬಲಿಸುವ ಮಾತುಗಳನಾಡು ತ್ತಿದ್ದಾರೆ ಎಂದು ವಿರೋಧ ಪಕ್ಷದ ಸದಸ್ಯರು ವಿಧಾನ ಸಭೆಯಲ್ಲಿಂದು ಮಾರ್ಮಿಕವಾಗಿ ನುಡಿದರು. ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿರುವ 2026–27ನೇ ಸಾಲಿನ ಬಜೆಟ್ ಖಾಲಿ ಚೊಂಬು ಎಂದು ಟೀಕಿಸಿದರು.

ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಉಪಮುಖ್ಯಮಂತ್ರಿ ಶಿವಕುಮಾರ್, ಬಜೆಟ್ ಪ್ರತಿಯನ್ನು ಪೂರ್ತಿ ಓದಿದ ಬಳಿಕ ಅದಕ್ಕೆ ಪ್ರತಿಕ್ರಿಯಿಸುವುದು ಒಪ್ಪಬಹುದಾದ ವಿಷಯ. ಆದರೆ, ಇನ್ನು ಅರ್ಧ ಭಾಗವೂ ಓದಿಲ್ಲ. ಆಗಲೇ ಬಿಜೆಪಿಯವರು ವಿಧಾನ ಸೌಧದವರೆಗೆ ಖಾಲಿ ಚೊಂಬು ಹಿಡಿದು ಪ್ರತಿಭಟಿಸಿದ್ದಾರೆ. ಇದು ಪೂರ್ವ ನಿಯೋಜಿತ ಅಲ್ಲವೇ ಎಂದರು.

ಬೋಧಕೇತರ ಸಿಬ್ಬಂದಿ ಗೊಂದಲವಿಲ್ಲದ ಭಾಷೆ ಬಳಸಬೇಕು

ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಸಲಹೆ

ಮೈಸೂರು, ಮಾ.10(ಬಿಎಲ್ ಯು)– ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳು ಮೇಲಧಿಕಾರಿಗಳಿಗೆ ಮಾಹಿತಿ ನೀಡುವಾಗ ಗೊಂದಲವಿಲ್ಲದ ಭಾಷೆ ಹಾಗೂ ಬರಹ ಬಳಸಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಸಲಹೆ ನೀಡಿದ್ದಾರೆ.

ನಗರದ ಮಾನಸ ಗಂಗೋತ್ರಿಯ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಯುಜಿಸಿ ಪ್ರಾಯೋಜಿತ ಬೋಧಕೇತರ ಸಿಬ್ಬಂದಿಗೆ ಆಯೋಜಿಸಿದ್ದ ಎರಡು ದಿನಗಳ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಬದಲಾಗುವ ಸರ್ಕಾರದ ನಿಯಮ ಹಾಗೂ ಆದೇಶಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

ವಿಶ್ವವಿದ್ಯಾನಿಲಯದ ಪ್ರಗತಿಯಲ್ಲಿ ಬೋಧಕೇತರ ಸಿಬ್ಬಂದಿ ಪಾತ್ರ ಬಹಳ ಮುಖ್ಯವಾಗಿದ್ದು, ವಿಳಂಬವಿಲ್ಲದೆ ಕಾರ್ಯ ನಿರ್ವಹಿಸಬೇಕು. ಪ್ರತಿ ದಿನದ ಕೆಲಸದಲ್ಲಿ ವೇಗ ಇರಬೇಕು. ಇದರಿಂದ ವಿಶ್ವವಿದ್ಯಾನಿಲಯದ ಕಾರ್ಯಗಳು ಸರಾಗವಾಗಿ ನಡೆಯಲು ಸಹಕಾರಿಯಾಗುತ್ತದೆ ಎಂದು ಸವಿತಾ ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಶಿಕ್ಷಕರ



ಮೈಸೂರಿನ ಮಾನಸ ಗಂಗೋತ್ರಿಯ ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಮಂಗಳವಾರ ಬೋಧಕೇತರ ಸಿಬ್ಬಂದಿಗೆ ಆಯೋಜಿಸಿದ್ದ ಎರಡು ದಿನಗಳ ಶಿಬಿರವನ್ನು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಎಂ.ಕೆ.ಸವಿತಾ ಉದ್ಘಾಟಿಸಿದರು.

ತರಬೇತಿ ಕೇಂದ್ರದ ನಿರ್ದೇಶಕಿ ಪ್ರೊ.ಹೆಚ್. ಪಿ.ಜ್ಯೋತಿ, ಬೋಧಕೇತರ ಸಿಬ್ಬಂದಿ ಮಾತ್ರವಲ್ಲದೆ ಅತಿಥಿ ಉಪನ್ಯಾಸಕರಿಗೂ ಕೂಡ ಇಂತಹ ಪರಿಣಾಮಕಾರಿ ಶಿಬಿರ ಹಾಗೂ ಕಾರ್ಯಾಗಾರಗಳನ್ನು ಆಯೋಜನೆ ಮಾಡಬೇಕು. ಯುಜಿಸಿ ಹಾಗೂ ರೂಸಾ ಆಯೋಜನೆ ಮಾಡುವ ಶಿಬಿರದ ಸಂಖ್ಯೆ ಹೆಚ್ಚಾಗಬೇಕು ಎಂದು ಅಭಿಪ್ರಾಯಪಟ್ಟರು.

ಮಾಹಿತಿ ಹಕ್ಕು ಕಾಯ್ದೆ ಬಗ್ಗೆ ಪ್ರೊ.ಕೆ.ಎಸ್.ಸುರೇಶ್ ವಿವರಣೆ ನೀಡಿದರೆ, ಪ್ರವೇಶಾತಿ ನಿಯಮ ಹಾಗೂ ರಿಜಿಸ್ಟರ್ ನಿರ್ವಹಣೆ ಬಗ್ಗೆ ಪಿ.ಮಲ್ಲಣ್ಣ ಮಾಹಿತಿ ನೀಡಿದರು. ಜೊತೆಗೆ ಇ–ಆಡಳಿತದ ಬಗ್ಗೆ ಎಸ್.ಗಣೇಶ್ ಕೂಡ ಶಿಬಿರಾರ್ಥಿಗಳಿಗೆ ವಿವರಣೆ ನೀಡಿದರು.

ಮೆಲ್ಲಹಳ್ಳಿ ಸರ್ಕಾರಿ ಶಾಲೆಯಲ್ಲಿ ವಿಜ್ಞಾನ ಮೇಳ



ಮೈಸೂರು, ಮಾ.10– ತಾಲೂಕಿನ ಮೆಲ್ಲಹಳ್ಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿಜ್ಞಾನ ಸಂಘ, ಸ್ಟೆಮ್ ಲ್ಯಾಬ್ ಹಾಗೂ ಅಗಸ್ತ್ಯ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಪ್ರಸಕ್ತ ಸಾಲಿನ 'ವಿಜ್ಞಾನ ಮೇಳ' ಸಂಪನ್ನಗೊಂಡಿತು.

ಮೇಳದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದ ಸ್ಟೆಮ್ ಲ್ಯಾಬ್‌ನ ಮಾರ್ಗದರ್ಶಕ ಹನುಮಂತು ಮಾತನಾಡಿ 'ವಿದ್ಯಾರ್ಥಿಗಳು ವಿಜ್ಞಾನ ವಿಷಯದ ಸಾಮಗ್ರಿಗಳನ್ನು ನೇರವಾಗಿ ನೋಡಿ, ಅವನ್ನು ಸ್ಪರ್ಶಿಸಿ, ಆ ಮೂಲಕ ಕಲಿಕೆಯನ್ನು ಅನುಭವಿಸಬೇಕು. ಆಗ ವಿಷಯ ಜ್ಞಾನ ಹೆಚ್ಚುತ್ತದೆ' ಎಂದರು.

ಸಾಹಿತಿ ಹಾಗೂ ಶಿಕ್ಷಕ ಟಿ.ಸತೀಶ್ ಜವರೇಗೌಡ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಪರಿಣಾಮಕಾರಿ ಕಲಿಕೆಯ ಪ್ರಗತಿ ಸಾಧಿತವಾಗಬೇಕಾದರೆ, ವಿಜ್ಞಾನ ಪಠ್ಯದಲ್ಲಿನ ಸಂಗತಿಗಳನ್ನು ಅರಿಯುವ ಕುತೂಹಲ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಶಾಲೆಯ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದ ವಿವಿಧ ತರಗತಿಗಳ ವಿದ್ಯಾರ್ಥಿಗಳು ಸುಮಾರು 59 ವಿಜ್ಞಾನ ಮತ್ತು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ಮಾದರಿಗಳು ಮತ್ತು ಪ್ರತಿಕೃತಿಗಳನ್ನು ತಯಾರಿಸಿ ಪ್ರದರ್ಶಿಸಿದರು. ವೀಕ್ಷಣೆಗೆ ಬಂದಿದ್ದ ಅಕ್ಕಪಕ್ಕದ ಶಾಲೆಯ ವಿದ್ಯಾರ್ಥಿಗಳಿಗೆ ಈ ವಿಜ್ಞಾನ ಮಾದರಿಗಳ ಬಗ್ಗೆ ಅತ್ಯುತ್ಸಾಹದಿಂದ ಮಾಹಿತಿ ನೀಡಿದರು.

ವಿಜ್ಞಾನ ಮೇಳದಲ್ಲಿ ನವೀನ ರೀತಿಯ ವಿಶೇಷವಾದ ಅತ್ಯುತ್ತಮ ಮಾದರಿಗಳನ್ನು ತಯಾರಿಸಿದ್ದ ಕನ್ನಡ ಮಾಧ್ಯಮದ ಎನ್. ವಿಜಯಲಕ್ಷ್ಮಿ (ಪ್ರಥಮ), ನವೀನ್ (ದ್ವಿತೀಯ), ಸಮೃದ್ಧ್ (ತೃತೀಯ) ಹಾಗೂ ಆಂಗ್ಲ ಮಾಧ್ಯಮದ ಎಲ್. ಶ್ರೇಯಸ್ (ಪ್ರಥಮ), ಸಿದ್ದಪ್ಪ (ದ್ವಿತೀಯ), ಎಂ.ಎಸ್. ವರುಣ (ತೃತೀಯ) ಅವರಿಗೆ ಬಹುಮಾನ ವಿತರಿಸಲಾಯಿತು.

ವಿಜ್ಞಾನ ಮೇಳವನ್ನು ಶಿಕ್ಷಣ ಸಂಯೋಜಕ ವಿ. ಶಂಕರ್ ಉದ್ಘಾಟನೆ ಮಾಡಿ, ಬಳಿಕ ವೀಕ್ಷಿಸಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಕ್ರಿಯಾಶೀಲತೆಯ ಮೆಚ್ಚುಗೆ ವ್ಯಕ್ತಪಡಿಸಿದರು. ಮೆಲ್ಲಹಳ್ಳಿ ವಲಯದ ಸಂಪನ್ಮೂಲ ವ್ಯಕ್ತಿ ಜಿ.ಪಿ. ಮಂಜುನಾಥ್, ಮುಖ್ಯ ಶಿಕ್ಷಕಿ ಎನ್. ವೀಣಾ ಅಧ್ಯಕ್ಷತೆ ವಹಿಸಿದ್ದರು. ವಿಜ್ಞಾನ ಶಿಕ್ಷಕಿ ಎನ್.ಆರ್. ಸುಜಾತ, ಇಕೋ ಕ್ಲಬ್ ಮಾರ್ಗದರ್ಶಿ ಶಿಕ್ಷಕ ಕೀರ್ತಿಕುಮಾರ್, ಜಿಪಿಟಿ ಶಿಕ್ಷಕ ಸುನೀಲ್ ಕುಮಾರ್, ಅಗಸ್ತ್ಯ ಫೌಂಡೇಶನ್ನಿನ ಮಾರ್ಗದರ್ಶಿ ಶಿಕ್ಷಕರಾದ ಸತೀಶ್ ಹಾಗೂ ರಾಘವೇಂದ್ರ ಉಪಸ್ಥಿತರಿದ್ದರು.

PUBLIC NOTICE

My client has agreed to purchase, the below mentioned Schedule Property from Sri. Linganna, son of Late Papanna (referred as "Owner"). The Owner has represented that he is the absolute owner of the Schedule Property having absolute, clear, marketable right, title and interest therein and that there are no other person/s having any right, claim over the Schedule Property apart from him. The Owner has further represented that he has not mortgaged, created a lien, encumbered the Schedule Property or part thereof in any manner and that the Owner has not entered into any agreement for Sale/MoU/Power of Attorney with any person/s regard to the Schedule Property. Any person/s having any objection or claims shall with documentary evidence lodge their objections/claims within 7 (Seven) days from the date of this notice to my office at situated at No.1063/71A, F-3A, 2nd Main, 8th Cross, Vidyaranyapuram, Mysore- 570 008, failing which my client shall proceed with the above mentioned transaction, without any reference and regard to such purported claim, interest, which shall be deemed to be waived off for all claims and purposes.

SCHEDULE PROPERTY

All that piece and parcel of North Western portion of Dry Agricultural Land bearing Survey No. 85/8 (Old Sy. No. 85/3) measuring an extent of 05.08 Guntas out of 14.08 Guntas (Block No. II as per 11E sketch bearing No. 26040226900345001 dated 27.02.2026), situated at Dadadahalli Village, Jayapura Hobli, Mysore Taluk bounded on the: **EAST BY:** Remaining portion of Land bearing Sy. No. 85/8 (Block I) **WEST BY:** Land bearing Sy. No. 85/7, **NORTH BY:** Land bearing Sy. No. 85/2, **SOUTH BY:** Land bearing Sy. No. 85/11

Sd/- SRI LAXMI Y.S,
Advocate, MYSURU, Mob: 9743476614

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ಇದರ ಮಾಲೀಕರಾದ ಮತ್ತು ಲೇ. ಡಾ. ಕೃಷ್ಣ ಅತ್ರಿ ರವರ ವಾರಸುದಾರರಾದ ಶ್ರೀಮತಿ. ಮೈಸೂರು ವಿ. ಪದ್ಮಿನಿ, ಕೋಂ ಲೇ. ಡಾ. ಕೃಷ್ಣ ಅತ್ರಿ ಮತ್ತು ಶ್ರೀಮತಿ. ಸುಪ್ರಿಯಾ ಅತ್ರಿ ಬಿನ್ ಲೇ. ಡಾ. ಕೃಷ್ಣ ಅತ್ರಿ ರವರುಗಳು ಒಟ್ಟಾಗಿ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ-ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 [ಏಳು] ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ವಿಜಯನಗರ 3ನೇ ಹಂತ, "ಸಿ" ಬ್ಲಾಕ್‌ನಲ್ಲಿರುವ ಸ್ವತ್ತಿನ ಸಂಖ್ಯೆ 312, ಹಾಲಿ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೊಳಪಟ್ಟ ಇ-ಸ್ವತ್ತಿನ ಸಂಖ್ಯೆ: 1206097277, ಅಸೆಸ್ಮೆಂಟ್ ನಂ. 312, ಪಿಐಡಿ ನಂ. 189674 & ವಾರ್ಡ್ ನಂ. ವಿಜಯನಗರ 3ನೇ ಹಂತ [ಎಸ್.ಎ.ಎಸ್ ನಂತೆ]. ಸ್ವತ್ತಿನ ವಿಸ್ತೀರ್ಣ ಪೂರ್ವ-ಪಶ್ಚಿಮ: 18.00 ಮೀಟರ್, ಉತ್ತರ-ದಕ್ಷಿಣ: 12 ಮೀಟರ್, ಒಟ್ಟು ವಿಸ್ತೀರ್ಣ: 216 ಚದರ ಮೀಟರ್‌ಗಳು. ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ – ಸ್ವತ್ತಿನ ಸಂಖ್ಯೆ 141, ಪಶ್ಚಿಮಕ್ಕೆ – ರಸ್ತೆ, ಉತ್ತರಕ್ಕೆ – ಸ್ವತ್ತಿನ ಸಂಖ್ಯೆ 313 ಮತ್ತು ದಕ್ಷಿಣಕ್ಕೆ – ಸ್ವತ್ತಿನ ಸಂಖ್ಯೆ 311.

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email:sldlawfirm2021@gmail.com

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, (1). ಟಿ. ವೈ. ಕುಮಾರಸ್ವಾಮಿ ಬಿನ್. ಟಿ. ಎಸ್. ಯಡಿಯೂರಪ್ಪ ವಾಸ: ನಂ.12, ಬ್ಲಾಕ್ ನಂ. 14, ಬಿ.ಇ.ಎಂ.ಎಲ್ ಲೇಔಟ್, ಶ್ರೀರಾಂಪುರ 2ನೇ ಹಂತ, ಚಾಮರಾಜ ಮೊಹಲ್ಲಾ, ಮೈಸೂರು ಇವರು ಐಟಂ–1 ಷೆಡ್ಯೂಲ್ ಸ್ವತ್ತಿನ ಮಾಲೀಕರು ಮತ್ತು (2). ನಂದೀಶ್ ಎಸ್. ಬಿನ್. ಶಂಕರಪ್ಪ ವಾಸ: ನಂ. 7, ಗಿರಿಗೌಡ ಮಾರ್ಗ, ಪರಿಹಾರ ಲೇಔಟ್, ಬೋಗಾದಿ 1ನೇ ಹಂತ, ಚಾಮರಾಜ ಮೊಹಲ್ಲಾ, ಮೈಸೂರು ಇವರು ಐಟಂ–2 ಷೆಡ್ಯೂಲ್ ಸ್ವತ್ತಿನ ಮಾಲೀಕರು ಹಾಗೂ ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಭಾಗಾಂಶ, ಋಣ, ವ್ಯಾಜ್ಯ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು. ಆನಂತರ ಬರುವ ಮೇಲ್ಕಂಡ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ನನ್ನ ಕಕ್ಷಿದಾರರು ನಿಬಂಧಿತರಾಗುವುದಿಲ್ಲ.

ಷೆಡ್ಯೂಲ್

ಐಟಂ–1 : ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಬ್ಯಾಳಾರು ಗ್ರಾಮದ ಸರ್ವೆ ನಂಬರ್. 101/1 ರಲ್ಲಿನ ಎರಡು ಎಕರೆ ಇಪ್ಪತ್ತೊಂಬತ್ತು ಗುಂಟೆ (2.29.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ:– ಸರ್ವೆ ನಂಬರ್ 102/1, ಪಶ್ಚಿಮಕ್ಕೆ:– ಸರ್ವೆ ನಂಬರ್ 126, ಉತ್ತರಕ್ಕೆ: ಸರ್ವೆ ನಂಬರ್ 100, ದಕ್ಷಿಣಕ್ಕೆ:– ಸರ್ವೆ ನಂಬರ್ 101/2

ಐಟಂ–2: ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಬ್ಯಾಳಾರು ಗ್ರಾಮದ ಸರ್ವೆ ನಂಬರ್. 102/1 ರಲ್ಲಿನ ಎರಡು ಎಕರೆ ನಾಲ್ಕು ಗುಂಟೆ (2.04.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ:– ರಸ್ತೆ ಮತ್ತು ಸರ್ವೆ ನಂಬರ್ 263, ಪಶ್ಚಿಮಕ್ಕೆ– ಸರ್ವೆ ನಂಬರ್ 101/1, ಉತ್ತರಕ್ಕೆ ರಸ್ತೆ ಮತ್ತು ಬಾಸಗಿ ಸ್ವತ್ತು, ದಕ್ಷಿಣಕ್ಕೆ:– ಸರ್ವೆ ನಂಬರ್ 102/2

Sd/- M.N Prakash Kalappa
KAR-1996-2000, Advocate & Legal Consultant
#67/7A, P.R.I. Complex, No 2&3,1st Floor, New Sayyai Rao Road, Fort Mohalla, Mysuru-570004
ಸ್ಥಳ: ಮೈಸೂರು, ದಿನಾಂಕ: 09/03/2026 Mob: 9343112535

ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ),
ಕರ್ಜನ್ ಪಾರ್ಕ್, ಮೈಸೂರು – 570001
Telephone No:0821-2977572
E-mail sadhssmysore@gmail.com
ಸಂಖ್ಯೆ: ಹಿಸತೋನಿ/ರಾವ/ಮೈ/ತಾಸ/31/2025–26 ದಿನಾಂಕ: 06.03.2026

ಇ– ಹರಾಜು/ ಮುಚ್ಚಿದ ಲಕೋಟೆ ಟೆಂಡರ್ ಯಾ– ಬಹಿರಂಗ– ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, 2026 ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ, ಮೈಸೂರು ರವರ ಅಧೀನದ ವಿವಿಧ ತೋಟಗಾರಿಕೆ ಕ್ಷೇತ್ರ/ನರ್ಸರಿಗಳ 2026 ನೇ ಸಾಲಿನ ಗೋಡಂಬಿ, ಹುಣಸೆ, ಹಲಸು ಹಾಗೂ 1ನೇ ಅವಧಿಯ ಸಪೋಟ ಮತ್ತು ಸೀಬೆ ಫಸಲುಗಳನ್ನು ವಿಲೇವಾರು ಮಾಡಲು ಇ ಹರಾಜು/ಮುಚ್ಚಿದ ಲಕೋಟೆ ಟೆಂಡರ್–ಯಾ–ಬಹಿರಂಗ–ಹರಾಜು ಪ್ರಕಟಣೆ ಮೂಲಕ ವಿಲೇವಾರಿ ಮಾಡಲು ಕ್ರಮ ಕೈಗೊಂಡಿದ್ದು, ಇಚ್ಛೆಯುಳ್ಳವರು ಟೆಂಡರ್‌ನಲ್ಲಿ ಭಾಗವಹಿಸಿ ಫಸಲನ್ನು ಪಡೆಯಬಹುದಾಗಿರುತ್ತದೆ. ಈ ಸಂಬಂಧ ದಿ: 23.03.2026 ರಿಂದ 30.03.2026 ರವರೆಗೆ ವಿವಿಧ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುವುದು. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಸಹಿದಾರರನ್ನು ಸಂಪರ್ಕಿಸಲು ಕೋರಿದೆ.

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ರಾಜ್ಯವಲಯ, ಮೈಸೂರು.
DIPR/DDMYS/1808/KSMCA/1017/2025-26





